ಗೌ ರಿ


ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

03 ಆಗಸ್ಟ್ 2016 ಪುಟ 20 ರೂ. 15/-

ಅಂಕೋಲ ಅಭಿವೃದ್ಧಿಯಡಿ ಅಪ್ಪಚ್ಚಿಯಾದ ಬದುಕುಗಳು







ಕಬಾಲಿ ಮೇನಿಯಾ!








ಸಂಘ ಮಿತ್ರರು

ಚಿತ್ರದುರ್ಗ

ಈಗ ಹರಳಯ್ಯ V/s ಮಾದಾರ ಚೆನ್ನಯ್ಯ



ಪಾರ್ವತಿ ನಕ್ಸಲೈಟ್ ಅನ್ನೋದಾದ್ರೆ...




ಇತ್ತೀಚೆಗೆ ಶಿವಮೊಗ್ಗದಲ್ಲಿ ಒಂದು ಕಾರ್ಯಕ್ರಮ ನಡೆಯಿತು. ಪೊನ್ನಮ್ಮಾಳ್ ಅವರ ಸ್ಮರಣಾರ್ಥ 'ಕನ್ನಡ ಸಾಹಿತ್ಯದ ಮೇಲೆ ಸಮಾಜವಾದೀ ಚಿಂತನೆಯ ಪ್ರಭಾವ' ಎಂಬ ಕಾರ್ಯಕ್ರಮವನ್ನು ಸಾಹಿತ್ಯ ಅಕಾಡೆಮಿ ಸೇರಿದಂತೆ ಕೆಲವು ಸಂಸ್ಥೆಗಳು ಏರ್ಪಡಿಸಿದ್ದವು. ಏಳೆಂಟು ದಶಕಗಳ ಕಾಲ ಶಿವಮೊಗ್ಗದ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿದ್ದ ಪೊನ್ನಮ್ಮಾಳ್ ಅವರ ಸಾಧನೆಗೆ ಹೋಲಿಸಿದರೆ, ಆ ಕಾರ್ಯಕ್ರಮ ಬಹಳ ಚಿಕ್ಕದೇ. ಬಹಳ ಚಿಕ್ಕವಯಸ್ಸಿನಲ್ಲೇ ಗಾಂಧಿಯವರು ಕರ್ನಾಟಕಕ್ಕೆ ಬಂದಿದ್ದಾಗೊಮ್ಮೆ, ಅವರ ತೊಡೆಯೇರಿ ಕುಳಿತಿದ್ದ ಮಗುವಾಗಿ ಪೊನ್ನಮ್ಮಾಳ್ ಹಲವರಿಗೆ ಗೊತ್ತಿತ್ತು. ಅಲ್ಲಿಂದಾಚೆಗೆ ಗಾಂಧಿ ಚಳವಳಿಯ ಜೊತೆಯಲ್ಲೇ ಇದ್ದರೂ, ಸಮಾಜವಾದಿ ಚಿಂತನೆಯ ಪ್ರಭಾವಕ್ಕೆ ಅವರು ಒಳಗಾಗಿದ್ದರು. ಜೆ.ಪಿ., ಲೋಹಿಯಾ ಮತ್ತಿತರರ ನೇರ ಪರಿಚಯ ಅವರಿಗಿತ್ತೆಂಬುದನ್ನು ಅವರೊಡನೆ ಒಡನಾಟವಿದ್ದವರು, ಈ ಕಾರ್ಯಕ್ರಮದಲ್ಲಿ ನೆನೆದುಕೊಂಡರು. ಹಿರಿಯ ಲೇಖಕ ಕಾಳೇಗೌಡ ನಾಗವಾರ ಅವರು ಸೇರಿದಂತೆ ಹಲವರು ಪೊನ್ನಮ್ಮಾಳ್ ಅವರ ಬದುಕಿನ ವಿಶೇಷತೆಗಳನ್ನು ಬಿಚ್ಚಿಟ್ಟರು.

ನಕ್ಸಲೀಯ ಚಳವಳಿಯೊಂದಿಗೆ ಸಂಬಂಧ ಹೊಂದಿದ್ದ ಮಹಿಳಾ ಜಾಗೃತಿ ಸಂಘಟನೆಯಲ್ಲಿ ಹಿಂದೆ ಕೆಲಸ ಮಾಡಿ, ನಂತರ ಜೈಲಿಗೂ ಹೋಗಿಬಂದಿದ್ದ ಅನಿತಾ ಸಹ ಪೊನ್ನಮ್ಮಾಳ್ ಕುರಿತು ಅಂದು ಮಾತನಾಡಿದರು. ಅವರು ಮತ್ತು ಹಿರಿಯ ಅಧ್ಯಾಪಕ ಶ್ರೀಕಂಠ ಕೂಡಿಗೆಯವರು ಹೇಳಿದ ಒಂದು ಮಾತು ಅದೇಕೋ ಬಹಳ ಮನಸ್ಸಿನಲ್ಲಿ ಕಾಡಿತು. ಅದು ಪೊನ್ನಮ್ಮಾಳ್ ಅವರು ಹೋರಾಟಗಾರ್ತಿ ಪಾರ್ವತಿ ಪೊಲೀಸರ ಗುಂಡಿಗೆ ಬಲಿಯಾದಾಗ ಹೇಳಿದ ಮಾತು 'ಪಾರ್ವತಿ ನಕ್ಸಲೈಟ್ ಅನ್ನೋದಾದ್ರೆ, ನಕ್ಸಲೈಟರು ಒಳ್ಳೆಯವರೇ ಇರಬೇಕು'.

ಈ ಮಾತಿಗೆ ಒಂದು ಹಿನ್ನೆಲೆ ಇದೆ. ಪಾರ್ವತಿ ಮಹಿಳಾ ಜಾಗೃತಿ ಸಂಘಟನೆಯ ಮುಂಚೂಣಿ ಕಾರ್ಯಕರ್ತೆಯಾಗಿದ್ದರು. ಚಿಕ್ಕಮಗಳೂರು ಜಿಲ್ಲೆಯ ಅರಣ್ಯ ಪ್ರದೇಶದ ಸೂರ್ಯ ದೇವಸ್ಥಾನ ಎಂಬ ಹಳ್ಳಿಯ ಪಾರ್ವತಿ, ನಂತರ ಶಿವಮೊಗ್ಗದಲ್ಲಿ ಪತ್ರಿಕೋದ್ಯಮದಲ್ಲಿ ಪದವಿ ಪಡೆದಿದ್ದರು. ಅಲ್ಲಿ ವಿದ್ಯಾರ್ಥಿನಿಯಾಗಿದ್ದಾಗ ಮತ್ತು ನಂತರ ಚಳವಳಿಯಲ್ಲಿ ಆಕೆ ಅತ್ಯಂತ ಸಕ್ರಿಯ ಕಾರ್ಯಕರ್ತೆ. ಆ ಸಂದರ್ಭದಲ್ಲೇ ಶಿವಮೊಗ್ಗದ ಬಹುತೇಕ ಪ್ರಗತಿಪರ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದ ಪೊನ್ನಮ್ಮಾಳ್ ಅವರ ಜೊತೆ ನಿಕಟ ನಂಟು ಬೆಳೆದಿದೆ. ಈ ರೀತಿಯ ನಂಟು ಅದೇ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ಸಕ್ರಿಯವಾಗಿದ್ದ ನಕ್ಸಲೀಯ ಚಳವಳಿಯನ್ನು ಎತ್ತಿಹಿಡಿದು ಹೋರಾಟ ಸಂಘಟಿಸುತ್ತಿದ್ದ ಪ್ರಗತಿಪರ ವಿದ್ಯಾರ್ಥಿ ಕೇಂದ್ರದೊಂದಿಗೂ, ನಕ್ಸಲೀಯ ಸಂಘಟನೆಯೊಂದಿಗೂ ಬೆಳೆದಿದೆ. ಪಾರ್ವತಿಯ ಸಾಮಾಜಿಕ ಬದ್ಧತೆ ಮತ್ತು ಹೋರಾಟದ ಛಲವನ್ನು ಪೊನ್ನಮ್ಮಾಳರು ಹತ್ತಿರದಿಂದ ಕಂಡಿದ್ದಾರೆ.

ಬಹುಶಃ ಪಾರ್ವತಿಯ ಸೈದ್ಧಾಂತಿಕ ನಿಲುವು ಮತ್ತು ಸಂಘಟನಾತ್ಮಕ ನಂಟು ಸಹ ಅವರಿಗೆ ಗೊತ್ತಿದೆ.



ಅದ್ಯಾವುದೂ ಗೊತ್ತಿಲ್ಲದೇ ಭೋಳೆ ಭೋಳೆಯಾಗಿ ಅವರು ಮಹಿಳಾ ಜಾಗೃತಿ ಸಂಘಟನೆಯ ಜೊತೆ ತೊಡಗಿಕೊಂಡಿರಲಿಲ್ಲ, ಸ್ವತಃ ಪೊನ್ನಮ್ಮಾಳರು ಮಹಿಳಾ ಜಾಗೃತಿ ಸಂಘಟನೆಯ ಗೌರವಾಧ್ಯಕ್ಷರಾಗಿದ್ದರು. ಇಂತಹ ಸಂಘಟನೆಗಳು ಜೊತೆಗೂಡಿ ಸಂಘಟಿಸಿದ ತುಂಗಭದ್ರಾ ಉಳಿಸಿ ಹೋರಾಟದ ಸಮಾವೇಶ ಉದ್ಘಾಟಿಸಲು ತಮ್ಮ ಇಳಿವಯಸ್ಸು ಮತ್ತು ಅವತ್ತಿನ ಅನಾರೋಗ್ಯದ ನಡುವೆಯೂ ಶಿವಮೊಗ್ಗದಿಂದ ದಾವಣಗೆರೆಗೆ ಪ್ರಯಾಣ ಮಾಡಿ ಬಂದಿದ್ದರು. ಪೊನ್ನಮ್ಮಾಳ್ ಮತ್ತು ಪಾರ್ವತಿ ಭಿನ್ನ ತಲೆಮಾರಿನ, ಭಿನ್ನ ಸೈದ್ಧಾಂತಿಕ ಹಿನ್ನೆಲೆಯ, ಆದರೆ ಚಳವಳಿಯ ಅಸಲೀಯತ್ತು ಮತ್ತು ಸಾಮಾಜಿಕ ಕಳಕಳಿಯಲ್ಲಿ ಒಂದೇ ನೆಲೆಯನ್ನು ಹೊಂದಿದ್ದ ಇಬ್ಬರು ಮಹಿಳೆಯರು. ತಲೆಮಾರಿನ ಅಂತರ ಹಾಗೂ ಸೈದ್ಧಾಂತಿಕ ಭಿನ್ನತೆಯು ಅವರನ್ನು ದೂರ ಮಾಡಬಹುದಾಗಿತ್ತಾದರೂ, ಸಾಮಾಜಿಕ ಬದ್ಧತೆ ಮತ್ತು ಬೀದಿ ಚಳವಳಿಗಳು ಅವರೀರ್ವರನ್ನು ಒಟ್ಟು ತಂದಿದ್ದವು.

ಈ ಹಿನ್ನೆಲೆಯಲ್ಲಿ ಪಾರ್ವತಿ ಹತ್ಯೆಗೀಡಾದಾಗ ಪೊನ್ನಮ್ಮಾಳ್ ಅವರ ಮಾತನ್ನು ನೋಡಬೇಕು.. ಆ ಹೊತ್ತಿನಲ್ಲಿ ಪಶ್ಚಿಮ ಘಟ್ಟದಲ್ಲಿ ನೆಲೆ ಕಂಡುಕೊಳ್ಳಲು ಯತ್ನಿಸುತ್ತಿದ್ದ ನಕ್ಸಲೈಟ್ ಚಳವಳಿಯು ಪಾರ್ವತಿ ಮತ್ತು ಹಾಜಿಮಾರ ಹತ್ಯೆಯ ನಂತರ ಇದ್ದಕ್ಕಿದ್ದಂತೆ ಸಮಾಜದ ಮುಂದೆ ಚರ್ಚಾ ವಸ್ತುವಾಗಿ ಬಂದು ನಿಂತಿತು. 'ನಕ್ಸಲೈಟ್ ಚಳವಳಿ ಕರ್ನಾಟಕದಲ್ಲಿ, ಇಲ್ಲೂ ನಡೆಯುತ್ತಿದೆಯಾ?', 'ರಾಯಚೂರಿನಲ್ಲಿ ಇತ್ತು ಅಂತ ಕೇಳಿದ್ದೆವು, ಈಗ ಪಶ್ಚಿಮ ಘಟ್ಟಕ್ಕೆ ಬಂದಿದೆಯಾ?', 'ನಕ್ಸಲೈಟ್ ಸಂಘಟನೆಯೆಂದರೆ ಶ್ರೀಮಂತರನ್ನು ದೋಚಿ, ಬಡವರಿಗೆ ನೀಡುವ ಚಳವಳಿ, ಅದು ಆಂಧ್ರದಲ್ಲಿ ಭೂಮಾಲೀಕರ ವಿರುದ್ಧ ಹೋರಾಟ ಮಾಡಿ ಬಡವರಿಗೆ ಭೂಮಿ ಹಂಚಿದೆ', 'ಈ ಚಳವಳಿಗೆ ಕರ್ನಾಟಕದಲ್ಲಿ ಸೇರಿಕೊಂಡವರಾರು?', 'ಇವರು ಈ ಹಿಂದೆ ತುಂಗಾಮೂಲ ಇತ್ಯಾದಿ ಹೋರಾಟ ಮಾಡಿ, ಜನರ



ಆದರ ಜೊತೆಜೊತೆಗೇ ನಕ್ಸಲೀಯ ಚಳವಳಿಯ ಕುರಿತು ನಿಲುವನ್ನೂ ಮುಂದಿಡಬೇಕಾಗುತ್ತಿತ್ತು, ಒಂದು ವೇಳೆ, ಅದನ್ನು ತಾವಾಗಿಯೇ ಮುಂದಿಡದಿದ್ದರೂ, ಉಳಿದವರು ಅದನ್ನು ಕೇಳುತ್ತಿದ್ದರು. ಆಗ ಏನು ಹೇಳುವುದು? ಬಹಳ ಸ್ಪಷ್ಟವಾಗಿ ನಕ್ಸಲೀಯ ಚಳವಳಿಯ ಮಾರ್ಗದೊಂದಿಗೆ ಭಿನ್ನಾಭಿಪ್ರಾಯವಿದೆ ಎಂದು ಹೇಳುವುದು ಸುಲಭ. ಆದರೂ ನೆಲದ ಕಾನೂನನ್ನು ಉಲ್ಲಂಘಿಸಿ ಸಶಸ್ತ್ರರಾಗಿರುವವರ ಪರವಾಗಿ ದನಿಯೆತ್ತುವುದು ಸರಿಯೇ? ಹೀಗೆ ಹಲವಾರು ಪ್ರಶ್ನೆಗಳು ಇಂತಹವರನ್ನು ಕಾಡಿದವು. ಆಗ ಅಂತಹುದೇ ಸಂಘಟನೆಯಲ್ಲಿ ತೊಡಗಿಕೊಂಡಿದ್ದ ಈ ಅಂಕಣಕಾರನೂ ಇದೇ ಇಕ್ಕಟ್ಟಿನಲ್ಲಿದ್ದ.

ಒಟ್ಟು ಸನ್ನಿವೇಶದಲ್ಲಿ ಪೊನ್ನಮ್ಮಾಳರು ಆಡಿದ ಆ

ಬಿಡಬಹುದು, ಆದರೆ, ಇದು ವಾಸ್ತವ. ತನ್ನ ಸೈ... ನೆಲೆ ಮತ್ತು ಹಿನ್ನೆಲೆಯನ್ನು ಸಮಾಜಕ್ಕೆ ಅ... ಸಾಮಾಜಿಕ ಚಳವಳಿಗಳಲ್ಲಿ ಕ್ರಿಯಾಶೀಲರಾ... ಮನವರಿಕೆ ಮಾಡಿಕೊಡುವ ಕೆಲಸ ಎಷ್ಟಾಗಬೇಕೋ ... ಅದು ಮಾಡಿಲ್ಲ, ಒಂದು ವೇಳೆ, ಮಾಡಿದ್ದರೂ ... ಒಪ್ಪುವವರಿಗಿಂತ ಒಪ್ಪದಿರುವವರೇ ಹೆಚ್ಚಿದ್ದಾರೆ ಎಂ... ಎರಡು ಸಾಧ್ಯತೆಗಳಿರುತ್ತವೆ. ಒಂದು, ಅವರಿಗೆ ಮನವರಿಕೆ ಮಾಡಿಕೊಡುವ ಕೆಲಸ ಆಗಬೇಕು; ಇದರಲ್ಲೇ ಏನೋ ಸಮಸ್ಯೆ ಇರಬಹುದು ಎಂದ... ಮನವರಿಕೆ ಮಾಡಿಕೊಳ್ಳಬೇಕು. ಎರಡೂ ಆಗದಿದ್ದ... ಎಡವಟ್ಟು ಎಂದರ್ಥವಾಗುತ್ತದೆ. ಪೊನ್ನಮ್ಮಾಳ್ ... ಮಾತು ಇದನ್ನೂ ಸೂಚಿಸುತ್ತಿರಬಹುದೇ?

ಖಚಿತ ಸೈದ್ಧಾಂತಿಕ ನೆಲೆಯಲ್ಲಿ ಸಾರ್ವಜ... ನಕ್ಸಲೀಯ ಚಳವಳಿಯ ಕುರಿತು ಮಾತನಾಡ... ಇಲ್ಲವೇ ಇಲ್ಲವೆಂದಲ್ಲ, ಆ ಚಳವಳಿ ಪ್ರಬಲವಾಗಿ... ಅಂತಹ ಸಾಕಷ್ಟು ಜನರಿದ್ದಾರೆ. ಅವರ ಮೇಲೂ ಸ... ಗದಾಪ್ರಹಾರ ನಡೆಸಿದ್ದಾವೆ. ಚಳವಳಿ ದುರ್ಬಲವಾ... ಇಂತಹ ದನಿಗಳೂ ಕ್ಷೀಣಿಸಿವೆ. ಆ ಅರ್ಥದಲ್ಲಿ ಚಳ... ಶಕ್ತಿಯ ಮೇಲೆ ಪ್ರಜ್ಞಾವಂತರ ಸಾರ್ವಜನಿಕ ಅಭಿಪ್ರಾ... ನಿಲ್ಲುತ್ತದೆ ಎಂದಾಗುತ್ತದೆ. ಈ ಎಲ್ಲಾ ಪ್ರಶ್ನೆಗಳು ನ... ಚಳವಳಿಯ ಸಾಧಕಬಾಧಕಗಳ ದೃಷ್ಟಿಯಿಂದ ಇಂದು... ಹೆಚ್ಚು ಪ್ರಸ್ತುತವಲ್ಲ, ಏಕೆಂದರೆ, ಈ ಸದ್ಯ ಅದು ... ಗಣನೀಯ ಚಳವಳಿಯಾಗಿ ಈ ರಾಜ್ಯದ... ಉಳಿದುಕೊಂಡಿಲ್ಲ, ಆದರೆ, ಯಾವುದೇ ಚಳವ... ಗಮನಿಸಬೇಕಾದ ಪಾಠ ಇದರಲ್ಲಿದೆ.

ಇದಲ್ಲದೇ ಇನ್ನೂ ಒಂದು ಅರ್ಥವನ್ನೂ ಪೊನ್ನ... ಅವರ ಆ ಮಾತು ಸೂಚಿಸುತ್ತಿರಬಹುದು. ... ಪ್ರತಿನಿಧಿಸುವ ಮಾನವೀಯ ಆಶಯದ ಬಗ್ಗೆ ... ಹೆಚ್ಚಿನ ಭರವಸೆ. ತಾನು ಅದನ್ನು ಬೆಂಬಲಿಸಿಯೇ ... ಎಂಬುದರ ಕುರಿತು ಅವರಿಗೆ ಅಸ್ಪಷ್ಟತೆಯೂ ಇಲ್ಲ, ...



ವಿಶ್ವಾಸ ಗಳಿಸಿ, ಬುದ್ಧಿಜೀವಿಗಳೊಂದಿಗೆ ಸೇರಿದವರು ಈಗ ನೋಡಿ ಭೂಗತರಾಗಿ ಶಸ್ತ್ರಾಸ್ತ್ರ ಹೋರಾಟ ಮಾಡಲು ನಿಂತಿದ್ದಾರೆ' ಇತ್ಯಾದಿ ಇತ್ಯಾದಿ ಮಾತುಗಳು ವಿವಿಧ ವಲಯಗಳಲ್ಲಿ ಹರಿದಾಡಿದವು.

ಇವುಗಳಲ್ಲಿ ಕಡೆಯ ಅಂಶ, ಬಹಿರಂಗವಾಗಿಯೇ ಜನರನ್ನು ಸಂಘಟಿಸಿ ಚಳವಳಿ ಮಾಡುತ್ತಿದ್ದ ಮಹಿಳಾ ಜಾಗೃತಿ, ಕರ್ನಾಟಕ ವಿಮೋಚನಾ ರಂಗ ಮುಂತಾದ ಸಂಘಟನೆಗಳಲ್ಲಿದ್ದವರು ಮತ್ತು ಅದರ ಹಿತೈಷಿಗಳಿಗೆ ಬಹಳ ಸಮಸ್ಯೆ ಉಂಟುಮಾಡಿತು. ಏಕೆಂದರೆ ಈ ಸಂಘಟನೆಗಳ ಪ್ರಣಾಳಿಕೆಗಳಾಗಲೀ, ಇದರಲ್ಲಿದ್ದ ಎಲ್ಲಾ ಸದಸ್ಯರಾಗಲೀ ನಕ್ಸಲೀಯ ಸಂಘಟನೆಯ ಎಲ್ಲಾ ಧ್ಯೇಯೋದ್ದೇಶ ಮತ್ತು ಮಾರ್ಗವನ್ನು ಎತ್ತಿ ಹಿಡಿಯುತ್ತಿರಲಿಲ್ಲ, ಅದೇ ಸಂದರ್ಭದಲ್ಲಿ ಅದರ ಬಗ್ಗೆ ಇದರಲ್ಲಿದ್ದವರಿಗೆ ವಿರೋಧವೂ ಇರಲಿಲ್ಲ. ಈ ಸಂಘಟನೆಗಳಲ್ಲಿದ್ದ ಕೆಲವರು ಭೂಗತರಾಗಿ ನಕ್ಸಲೀಯ ಚಳವಳಿಗೆ ಸೇರಿದ್ದರು. ಈ ವೈರುಧ್ಯವು ಅದನ್ನು ಸಾಕಷ್ಟು ಸಮಸ್ಯೆಗೆ ದೂಡಿತು. ಇದೇ ಸಂಘಟನೆಗಳಲ್ಲಿದ್ದವರೇ, ಪಾರ್ವತಿ ಮತ್ತು ಹಾಜಿಮಾರ ಶವಗಳನ್ನು ಪಡೆಯಲು ಉಡುಪಿಗೆ ಹೋದರು. ಅಷ್ಟರಮಟ್ಟಿಗೆ ಅವರ ಕುಟುಂಬಗಳೊಂದಿಗೂ ಈ ಸಂಘಟನೆಗಳಲ್ಲಿದ್ದವರಿಗೆ ಸಂಬಂಧವಿತ್ತು, ಆ ಮಾನವೀಯ ಸಂಬಂಧ ಮತ್ತು ಸಾಮಾಜಿಕ ಬದ್ಧತೆಗಳನ್ನು ಕಳಚಿಕೊಂಡು, ಸಂಬಂಧವಿಲ್ಲದವರಂತೆ ಇರಲು ಇದರಲ್ಲಿದ್ದವರಿಗೆ ಸಾಧ್ಯವಿರಲಿಲ್ಲ,

ಎಲ್ಲವೂ ಸೇರಿಕೊಂಡು ಸಾಕಷ್ಟು ಗೊಂದಲ ಉಂಟಾಗಿತ್ತು, ಎಲ್ಲಕ್ಕಿಂತ ಮುಖ್ಯವಾಗಿ, ಇಬ್ಬರು ಮಹಿಳಾ ಸಾಮಾಜಿಕ ಕಾರ್ಯಕರ್ತೆಯರನ್ನು ಕೊಂದ ಸರ್ಕಾರವನ್ನು ಖಂಡಿಸುವುದು ಎಲ್ಲಾ ಪ್ರಜ್ಞಾವಂತರ ಕರ್ತವ್ಯವಾಗಿತ್ತು,

ಮಾತು ಒಂದು ರೀತಿಯಲ್ಲಿ ಸಂದರ್ಭದ ಕುರಿತು ಬರೆದ ಭಾಷ್ಯದಂತಿತ್ತು. ಆ ಮಾತನ್ನು ಅವರಂಥವರು ಮಾತ್ರ ಆಡಬಹುದಿತ್ತು ಎನ್ನುವುದೂ ನಿಜವೇ. ಅವರು ನೋಡಿದ್ದದ್ದು ಪಾರ್ವತಿಯನ್ನು, ಪಾರ್ವತಿ ಏನು ಎಂಬುದರ ಬಗ್ಗೆ ಅವರಿಗೆ ಯಾವುದೇ ಗೊಂದಲವಿರಲಿಲ್ಲ. ಪಾರ್ವತಿ ತೆಗೆದುಕೊಳ್ಳಬಹುದಾದ ನಿರ್ಧಾರದ ಕುರಿತೂ ಅವರಿಗೆ ವಿಶ್ವಾಸವಿತ್ತು, ಹಾಗಾಗಿ 'ಪಾರ್ವತಿ ನಕ್ಸಲೈಟ್ ಆಗಿದ್ದಾಳೆಂದರೆ, ನಕ್ಸಲೈಟರು ಒಳ್ಳೆಯವರೇ ಇರಬೇಕು'. ಇಷ್ಟು ಖಚಿತವಾಗಿ ಅವರು ಹೇಳಿಬಿಟ್ಟರು.

ಹಲವು ದಶಕಗಳ ಕಾಲ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿದಿದ್ದ, ಗಾಂಧಿ, ಲೋಹಿಯಾ ಮತ್ತು ಜಯಪ್ರಕಾಶ ನಾರಾಯಣರ ಜೊತೆ ಸಾಕ್ಷಾತ್ತಾಗಿ ಒಡನಾಡಿದ್ದ, ಹೋರಾಟ ಮತ್ತು ವಿಧಾಯಕ ಕಾರ್ಯಕ್ರಮಗಳೆರಡರಲ್ಲೂ ಅವಿರತವಾಗಿ ತೊಡಗಿಕೊಂಡಿದ್ದ, ತಮ್ಮ ಬಟ್ಟೆ ಹೇಗೆ ಕಲೆಯಿಲ್ಲದೇ ಶುಭ್ರವಾಗಿತ್ತೋ ಅದೇ ರೀತಿ ಇಡೀ ಜೀವನವನ್ನೂ ಕಲೆಯಿಲ್ಲದೇ ಕಾಪಾಡಿಕೊಂಡು ಬಂದಿದ್ದ ಆ ಹಿರಿಯ ಧೀಮಂತ ಮಹಿಳೆ ಆಡಿದ ಮಾತುಗಳಿಗೆ ಭಾರೀ ತೂಕವಿದೆ. ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿ ಒಬ್ಬ ಸಾಮಾಜಿಕ ಕಾರ್ಯಕರ್ತೆಯ ಅನಿವಾರ್ಯ ಆಯ್ಕೆ ಅದಾಗಿರಬಹುದು ಎಂಬ ಸೂಚನೆ ಆ ಮಾತಿನಲ್ಲಿದೆ. ಅದೇ ಹೊತ್ತಿನಲ್ಲಿ ನಕ್ಸಲೀಯ ಚಳವಳಿಯ ಸಿದ್ಧಾಂತ, ಮಾರ್ಗ ಇತ್ಯಾದಿಗಳ ಕುರಿತು ತನಗೇನೂ ಗೊತ್ತಿಲ್ಲ, ಅದು ತನಗೆ ಬೇಕಾಗೂ ಇಲ್ಲ ಎಂಬ ಧೋರಣೆಯೂ ಅದರಲ್ಲಿದೆ.

ಇದು, ನಕ್ಸಲೀಯ ಚಳವಳಿಯನ್ನೂ ಚಿಂತನೆಗೆ ಹಚ್ಚಬೇಕಾದ ಸಂಗತಿ. ಏಕೆಂದರೆ, ಅದು ಒಂದು ಖಚಿತ ಸೈದ್ಧಾಂತಿಕ ನೆಲೆಯನ್ನು ಹೊಂದಿರುವ ಕಮ್ಯುನಿಸ್ಟ್ ಪಕ್ಷ. ಅದರ ಸಿದ್ಧಾಂತವನ್ನು ನಾವು ಒಪ್ಪಬಹುದು ಅಥವಾ

ಇಲ್ಲ. ಈ ಮಾನವೀಯ ಆಶಯವನ್ನೇ ವಿಸ್ತರಿಸಿ, ... ನಿಲ್ಲುವ ಮತ್ತು ಸದ್ಯದ ಅಸಮಾನತೆಯ ವಿ... ಹೋರಾಟಗಳ ಆಶಯಗಳನ್ನು ಈಡೇರಿಸುವ ಚಳ... ತಕ್ಷಣದಲ್ಲಿ ಒಂದೇ ವೇದಿಕೆಯಡಿ ಬರುವುದು ಸಾಧ್ಯ... ಎಂಬುದೇ ಪ್ರಶ್ನೆ, ಪೊನ್ನಮ್ಮಾಳ್, ಎಚ್.ಎಸ್.ದೊ... ಛತ್ತೀಸ್‌ಗಡದ ಹಿಮಾಂಶುಕುಮಾರ್ ಇವ... ಗಾಂಧಿವಾದಿಗಳಾಗಿದ್ದು, ನಕ್ಸಲೀಯ ಸಂಘ... ಮುಂಚೂಣಿಯಲ್ಲೋ, ಅಂಚಿನಲ್ಲೋ ಇದ್ದವರ ... ಸಂಬಂಧ ಇಟ್ಟುಕೊಂಡವರು. ಎಂದೂ, ಎಲ್ಲಿಯೂ... ಗಾಂಧಿವಾದವನ್ನೂ ಬಿಟ್ಟುಕೊಡದವರು. ಸಿದ್ಧ... ಚೌಕಟ್ಟಿನಾಚೆ ಇವರುಗಳ ನಡುವೆ ಸಂಬಂಧ ಕಲ್ಪಿ... ಎಳೆ ಯಾವುದು?

ಅದು ಕೇವಲ 'ಮಾನವತಾವಾದ, ಒಳ್ಳೆಯತನ'... ಸ್ಪಷ್ಟವಾಗಿ ಅರ್ಥೈಸಲಾಗದ ಅಥವಾ ಯಾರು ಬೇಕ... ಹೇಗೆ ಬೇಕಾದರೂ ಅರ್ಥೈಸಬಹುದಾದ ಸಂಗತಿ... ಬಿಟ್ಟರೆ ಅದರಿಂದಲೂ ಪ್ರಯೋಜನವಿಲ್ಲ, ಮನು... ಮನುಷ್ಯರಂತೆ ಯೋಚಿಸುತ್ತಿರುವ ಬದುಕು... ಮನುಷ್ಯರನ್ನು ಬೆಸೆಯುವ ನೂರು ಸಂಗತಿಗಳನ್ನು ಒ... ಅಗತ್ಯ ಇಂದಿದೆ. ಪಾರ್ವತಿ ಮತ್ತು ಹಾಜಿ... ಹತ್ಯೆಗೀಡಾದ ನಂತರ ಗದ್ದರ್ ಬರೆದು ಹಾಡಿದ ... ಹಾಡಿದೆ. 'ಶಿವನನ್ನೂ ಅಲ್ಲಾನನ್ನೂ ಬೆಸೆದ ... ಅದ್ಯಾವುದೋ ಸೂರ್ಯನಾರಾಯಣ?' ಎಂದು ಆ... ಮುಗಿಯುತ್ತದೆ. ಪಾರ್ವತಿಯನ್ನೂ, ಪೊನ್ನಮ್ಮಾಳ್... ಆ ಮಟ್ಟಿಗೆ ಬೆಸೆದ ಆ ಸಂಬಂಧವು ಎಂಥದ್ದು? ... ಪ್ರಶ್ನೆಯ ಉತ್ತರ ನಮಗೆ ಹಲವು ಪ್ರಶ್ನೆ... ಉತ್ತರವೀಯುವುದನ್ನು ಸುಲಭವಾಗಿಸಬಹುದು.

ಅಪ್ಪನ 'ಶೇಖ್ ನೆನಪು' ಮತ್ತು ಕಾಶ್ಮೀರಿಗಳ ಅಸಹಾಯಕತೆ



• ಗೌರಿ ಲಂಕೇಶ್
editorlankesh@gmail.com

ಈ ದೇಶದಲ್ಲಿ ಏನಾಗುತ್ತಿದೆ ಎಂದು ಸುತ್ತಲೂ ಕಣ್ಣುಹಾಯಿಸಿ ನೋಡಿದರೆ ನೋವು, ಆತಂಕ, ಜಿಗುಪ್ಸೆ ಆವರಿಸಿಕೊಳ್ಳುತ್ತದೆ. ಕಾಶ್ಮೀರದಲ್ಲಂತೂ ಕೇವಲ ಸ್ಲೋಗನ್ ಮತ್ತು ಕಲ್ಲುಗಳನ್ನು ಹಿಡಿದಿರುವ ಯುವಕರತ್ತ ಪೊಲೀಸರು ಮತ್ತು ಭಾರತೀಯ ಸೈನಿಕರು ಪೆಲ್ಲೆಟ್‌ಗಳನ್ನು ಸಿಡಿಸಿದ್ದರಿಂದ 41 ಮಂದಿ ಸಾವನ್ನಪ್ಪಿದ್ದು 1,500ಕ್ಕಿಂತಲೂ ಹೆಚ್ಚು ಜನ ಕುರುಡರಾಗಿದ್ದಾರೆ ಅಥವಾ ಗಾಯಗೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವೀಡಿಯೋಗಳು ಅಲ್ಲಿನ ಭೀಕರ ಸ್ಥಿತಿಯನ್ನು ಬಿಂಬಿಸುತ್ತಿವೆ. ಒಂದರಲ್ಲಿ ಕುಸಿದು ಬಿದ್ದಿರುವ ಮನೆಯಡಿಯಿಂದ ದನಿ ಕೇಳಿಬಂದಾಗ ಆತನನ್ನು ರಕ್ಷಿಸಲು ಕೆಲವು ಸೈನಿಕರು ಮುಂದಾಗುತ್ತಾರೆ. ಆದರೆ ಸ್ವಲ್ಪ ಹೊತ್ತಿನಲ್ಲೇ ಮನೆ ಅಡಿ ಸಿಕ್ಕಿಕೊಂಡಿರುವವನು ಯಾರೆಂದು ಗೊತ್ತಾಗುತ್ತದೆ. ಒಬ್ಬ ಸೈನಿಕ "ಏ ಇವನು ದಾಡಿವಾಲಾ" ಅನ್ನುತ್ತಾನೆ. ಮರುಕ್ಷಣವೇ ಮತ್ತೊಬ್ಬ ಸೈನಿಕ ಯಾರನ್ನು ಈತನಕ ರಕ್ಷಿಸಲು ಯತ್ನಿಸುತ್ತಿದ್ದನೋ, ಅದನ್ನು ಕೈಬಿಟ್ಟು, ತನ್ನ ಬಂದೂಕಿನಿಂದ ಗುಂಡು ಹಾರಿಸಿ ಆತನನ್ನು ನಿರ್ದಯವಾಗಿ ಕೊಂದು ಹಾಕುತ್ತಾನೆ. ಅಂದರೆ ಕುಸಿದ ಮನೆಯಡಿ ಇರುವವನು ಮುಸಲ್ಮಾನ ಆಗಿದ್ದರಿಂದ ಅವನಿಗೆ ಭಾರತೀಯ ಸೈನಿಕರಿಂದ ರಕ್ಷಣೆ ಬದಲು ಸಿಗುವುದು ಸಾವು ಎಂಬುದನ್ನು ಆ ವೀಡಿಯೋ ಸಾಬೀತುಪಡಿಸುತ್ತದೆ.

ಆದರೆ ನಮ್ಮ ಮಾಧ್ಯಮಗಳಿಗೆ, ಅದರಲ್ಲೂ ವಿಶೇಷವಾಗಿ ಟಿವಿ ಚಾನೆಲ್‌ಗಳಿಗೆ, ಕಾಶ್ಮೀರದ ಇತಿಹಾಸ, ಅಲ್ಲಿನ ಜನರಿಗೆ ಭಾರತ ಸರ್ಕಾರ ದಶಕಗಳಿಂದ ಮಾಡುತ್ತಾ ಬಂದಿರುವ ಅನ್ಯಾಯ ಮತ್ತು ಮೋಸ, ಅಲ್ಲಿ ಭಾರತೀಯ ಸೈನಿಕರು ಎಸಗುತ್ತಿರುವ ದೌರ್ಜನ್ಯ... ಇವ್ಯಾವುದೂ ಬೇಕಾಗಿಲ್ಲ. ಬದಲಾಗಿ ಅವರಿಗೆ ಬೇಕಿರುವುದು ಹುಸಿ ರಾಷ್ಟ್ರಪ್ರೇಮ, ಕಾಶ್ಮೀರದ ಜನರನ್ನು ದಮನ ಮಾಡಿ ಅವರ ಮೇಲೆ ಹಿಡಿತ ಸಾಧಿಸುವುದು, ಬಂದೂಕಿನಿಂದ ಅವರನ್ನು ಬೆದರಿಸಿ ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಎಂದು ಮೆರೆಯುವುದು. ಯಾವುದೇ ಜನರನ್ನು ಹೀಗೆ ಬೆದರಿಸಿ ಅವರನ್ನು ಒಂದು ದೇಶದ ಪ್ರಜೆಗಳನ್ನಾಗಿಸಲು ಸಾಧ್ಯವೇ? ಅದು ಪ್ರಜಾಪ್ರಭುತ್ವದ ಲಕ್ಷಣವೇ? ಇಂತಹ ಮೂಲಭೂತ ಪ್ರಶ್ನೆಗಳನ್ನು ಯಾರೂ ಯಾಕೆ ಕೇಳುತ್ತಿಲ್ಲ ಎಂದು ಶಾಕ್ ಆಗುತ್ತದೆ.

ಈ ಸಂದರ್ಭದಲ್ಲಿ ಅಪ್ಪ ಶೇಖ್ ಅಬ್ದುಲ್ಲಾ ಅವರನ್ನು ಕುರಿತು ಬರೆದಿದ್ದ 'ಟೀಕೆ ಟಿಪ್ಪಣಿ' ನೆನಪಾಯಿತು. ಕಾಶ್ಮೀರದ ಜನ ಮತ್ತು ಅವರ ಮನೋಭಾವ ಎಂಥದ್ದು ಎಂದು ಆ ಲೇಖನ ಚೆನ್ನಾಗಿ ಬಿಂಬಿಸಿದ್ದರಿಂದ ಅದರ ಹಲವು ಭಾಗಗಳನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

"ಕಾಶ್ಮೀರದಲ್ಲಿ ಐದರಲ್ಲಿ ನಾಲ್ಕು ಭಾಗದಷ್ಟು ಮುಸ್ಲಿಮರು; ಬೆಟ್ಟಗುಡ್ಡಗಳ, ನದಿ ಅರಣ್ಯಗಳ, ಸರೋವರ, ಮಂಜು, ಹಸಿರು ಮೈದಾನಗಳ ಈ ನಾಡು ಸ್ವರ್ಗವೆಂಬುದು ಇದ್ದರೆ ಚೆಂದದಲ್ಲಿ ಅದಕ್ಕಿಂತ ಯಾವುದರಲ್ಲೂ ಕಡಿಮೆ ಇಲ್ಲ, ಗಟ್ಟಿದೇಹದ, ಕಷ್ಟಸಹಿಷ್ಣುಗಳಾದ ಜನ; ಲಕ್ಷಾಂತರ ವರ್ಷಗಳ ಚರಿತ್ರೆ, ಪರಂಪರೆಯುಳ್ಳ ಸ್ವಾಭಿಮಾನದ ಜನ. ಆದರೆ ಸುಂದರ ಪ್ರಕೃತಿಯ ಈ ಜನ ಬಡತನ, ಮೌಢ್ಯ ಜಾತೀಯತೆಯಲ್ಲಿ ಮುಳುಗಿದ್ದರು. ಅವರ ಈ ದಾರಿದ್ರ್ಯಕ್ಕೆ ಅವರನ್ನಾಳುತ್ತಿದ್ದ ಹರಿಸಿಂಗ್ ಎಂಬ ಹಿಂದೂ ದೊರೆ ಕಾರಣವೆಂದು ತಿಳಿದಿದ್ದರು. ಅವರ ಈ ತಿಳಿವಳಿಕೆಗೆ ಸರಿಯಾಗಿ ಹರಿಸಿಂಗ್ ಕ್ರೂರಿಯಾದ ದೊರೆಯಾಗಿದ್ದ; ಅನ್ಯಾಯ, ಹಿಂಸೆ, ಧರ್ಮ ಅವನ ಆಡಳಿತದ ಮುಖ್ಯ ಲಕ್ಷಣಗಳಾಗಿದ್ದವು. ಅವನೆದುರು ಸೊಲ್ಲೆತ್ತಿದವರನ್ನು ಅವನು ಇರಗೊಡುತ್ತಿರಲಿಲ್ಲ; ಇಡೀ ದೇಶವನ್ನು ಆತ ಗುಲಾಮಗಿರಿಗೆ ತಳ್ಳಿದ್ದ. ಸಹಜವಾಗಿಯೇ ಮುಸ್ಲಿಮರು ಈ ಹರಿಸಿಂಗ್‌ನನ್ನು ದ್ವೇಷಿಸುತ್ತಿದ್ದರು; ಅವನನ್ನು ಕಿತ್ತೊಗೆದು ಹಿಂದೂಗಳನ್ನು ಹತ್ತಿಕ್ಕಿದರೆ ತಮ್ಮ ದಾರಿದ್ರ್ಯ ಕೊನೆಗೊಳ್ಳುವುದೆಂದು ತಿಳಿದಿದ್ದರು.

ಇಂಥವರ ನಡುವೆ ವಿದ್ಯಾವಂತನಾದ ಹುಡುಗನೊಬ್ಬ ಕಾಣಿಸಿಕೊಂಡ. ಈತ ಮುಸ್ಲಿಂ. ಈತನ ಹೆಸರು ಶೇಖ್. ಆಗತಾನೇ ಅಲಿಘರ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ ತನ್ನ ಸುಂದರ ಕಾಶ್ಮೀರಕ್ಕೆ ಬಂದಿದ್ದ ಇವನು ತನ್ನ ನಾಡಿನ ದುರ್ಗತಿಗೆ ಕಾರಣವೇನೆಂದು ಕೇಳಿಕೊಳ್ಳುತ್ತ ಸುತ್ತಾಡಿದ. ಒಂದು ದಿನ ಈತ ಸೇಬಿನ ಹಣ್ಣಿನ ತೋಟವೊಂದರ ಹತ್ತಿರ ನಡೆಯುತ್ತಿದ್ದ. ಆ ತೋಟದಲ್ಲಿ ಸೇಬಿನ ಹಣ್ಣು ಕೀಳಲು ಮರದ ತುದಿಯವರೆಗೆ ಹತ್ತಿದ್ದವನೊಬ್ಬ ಹಣ್ಣಿನ ಗೊಂಚಲ ಭಾರದಿಂದ ಕೊಂಬೆ ಕತ್ತರಿಸಿ ಕೆಳಗೆ ಬಿದ್ದ. ಅವನು ಬಿದ್ದೊಡನೆ ತೋಟದ ಮಾಲೀಕನಾದ ಮುಸ್ಲಿಂ ಅವನಲ್ಲಿಗೆ ಬಂದು ಕೊಂಬೆ ಕತ್ತರಿಸಿದ್ದಕ್ಕೆ, ಹಣ್ಣು ಪೋಲು ಮಾಡಿದ್ದಕ್ಕೆ ಅವನನ್ನು ಹಿಡಿದುಕೊಂಡು ಚಚ್ಚತೊಡಗಿದ. ಆ ಕೆಲಸಗಾರ ಹಿಂದೂ. ಶೇಖ್ ಅವನನ್ನು ಕರೆದುಕೊಂಡು ಹೋಗಿ ಗಾಯಗಳಿಗೆ ಔಷಧಿ ಹಚ್ಚಿ ಅವನೊಂದಿಗೆ ಅವನ ಮನೆಗೆ ಹೋದ. ಆ ಕೆಲಸಗಾರನ ಮನೆ ತೀರಾ ಚಿಕ್ಕ ಗುಡಿಸಲಾಗಿತ್ತು, ಒಂದು ಮೂಲೆಯಲ್ಲಿದ್ದ ದೇವರು, ಪಟಗಳು ಇತ್ಯಾದಿಯನ್ನು ಬಿಟ್ಟರೆ ಅತ್ಯಂತ ಬಡ ಕುಟುಂಬವೆಂಬುದು ಯಾರಿಗೂ ತಿಳಿಯುತ್ತಿತ್ತು. ಬಡ ಮುಸ್ಲಿಂ ಕುಟುಂಬಕ್ಕೂ ಈ ಹಿಂದೂವಿನ ಕುಟುಂಬಕ್ಕೂ ವ್ಯತ್ಯಾಸವೇ ಇರಲಿಲ್ಲ. ಇವನ ಅಸಹಾಯಕತೆಗೂ ಮುಸ್ಲಿಮನ ಅಸಹಾಯಕತೆಗೂ ವ್ಯತ್ಯಾಸವಿರಲಿಲ್ಲ. ಆದ್ದರಿಂದ ಶೇಖ್ ಹಿಂದೂ, ಮುಸ್ಲಿಂ ಧರ್ಮಗಳನ್ನು ಮೀರಿದ ಯಾವುದೋ ಈ ಬಡತನಕ್ಕೆ ಕಾರಣ ಎಂದು ತನ್ನ ನಾಡಿನ ಜನರನ್ನು ಅಭ್ಯಸಿಸುತ್ತಾ ಹೋದ. ಕಾಶ್ಮೀರ ಕಲ್ಲು ಕೆತ್ತುವುದಕ್ಕೆ ಪ್ರಸಿದ್ಧ; ಕಲ್ಲು ಒಡೆದು, ಕೆತ್ತಿ ಕಟ್ಟಡ ಕಟ್ಟುವವರೆಲ್ಲ ಬಡ ಹಿಂದೂಗಳೇ. ಹಾಗೆಯೇ ಕಾಶ್ಮೀರ ರತ್ನಗಂಬಳಿಗಳಿಗೆ ನೇಯ್ಗೆ ಕೆಲಸಕ್ಕೆ ಪ್ರಸಿದ್ಧ. ಸ್ವತಃ ಶೇಖ್ ನೇಯ್ಗೆ ಕುಟುಂಬದಿಂದ ಬಂದವನು. ಲಕ್ಷಾಂತರ ಜನ ನೇಯ್ಗೆಯವರು, ಅತ್ಯಂತ ತಾಳ್ಮೆಯಿಂದ ಜಗತ್ಪ್ರಸಿದ್ಧ ರತ್ನಗಂಬಳಿ, ಜಮಖಾನ ನೇಯುವವರು ಕಡುಬಡವರಾಗಿದ್ದರು; ಅವರ ಶ್ರಮದ ಲಾಭ ಪಡೆದ ವ್ಯಾಪಾರಿಗಳು ಕೋಟ್ಯಾಧೀಶರಾಗಿದ್ದರು. ಶ್ರಮಕ್ಕೆ ತಕ್ಕ ವರಮಾನವಿಲ್ಲ; ಉಳುವ ರೈತನಿಗೆ ಜಮೀನಿಲ್ಲ. ಶೇಖ್ ತನ್ನ ನಾಡಿನ ದುಃಸ್ಥಿತಿಗೆ ದುಷ್ಟ ರಾಜನ ಆಳ್ವಿಕೆಯೇ ಕಾರಣ, ಯಾವುದೇ ಧರ್ಮವಲ್ಲ ಎಂದು ತೀರ್ಮಾನಿಸಿದ.

ಕಾಶ್ಮೀರದಲ್ಲಿದ್ದ ಮುಸ್ಲಿಮರು, ಹಿಂದೂಗಳು, ಸಿಖ್‌ಗಳು, ಕ್ರಿಶ್ಚಿಯನ್ನರೆಲ್ಲ ಅಣ್ಣತಮ್ಮಂದಿರಂತೆ ಒಗ್ಗಟ್ಟಾಗಿ ಸಂಘಟನೆಗೊಂಡು ಕ್ರೂರ ದೊರೆಯ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಪಡೆದು ಕಾಶ್ಮೀರ ಸರ್ವಧರ್ಮದ ನಾಡಾಗಿ ಬೆಳೆಯಬೇಕೆಂದು ಯೋಜನೆ ಹಾಕಿಕೊಂಡ.

ಶೇಖ್ ಅಬ್ದುಲ್ಲಾ ಎಂಬ ಕಾಶ್ಮೀರದ ಸಿಂಹನ ಬಗ್ಗೆ, ಆತ ಸಂಘಟಿಸಿದ ಹೋರಾಟದ ಬಗ್ಗೆ ನಮ್ಮ ಜನಕ್ಕೆ ಗೊತ್ತಿಲ್ಲ; ಆತನ ಉದ್ದೇಶ, ಸಾಧನೆಗಳೆಲ್ಲ ಗಾಂಧೀಜಿಯ ಉದ್ದೇಶ ಮತ್ತು ಸಾಧನೆಗಳಂತೆಯೇ ಮಣ್ಣುಗೂಡುತ್ತಿರುವ ಈ ಸಮಯದಲ್ಲಿ, ಕಾಶ್ಮೀರ ನಮ್ಮೆಲ್ಲರಿಂದ ಮಾನಸಿಕವಾಗಿ ದೂರವಾಗುತ್ತಲೇ ಇರುವ ಈ ಸಂದರ್ಭದಲ್ಲಿ, ಜಾತಿವಾದಿಗಳು ಎಲ್ಲೆಲ್ಲೂ ಬೊಬ್ಬೆ ಹಾಕುತ್ತಿರುವ ಸಂದರ್ಭದಲ್ಲಿ ಈತನನ್ನು ಒಮ್ಮೆ ನೆನೆಯುವುದು ಒಳ್ಳೆಯದು.

ಶೇಖ್ ಅಬ್ದುಲ್ಲಾ ಆರಿಸಿಕೊಂಡ ದಾರಿ ಸುಲಭವಾಗಿರಲಿಲ್ಲ, ಒಮ್ಮೆ ಶ್ರೀನಗರದಲ್ಲಿ ಜಾತಿ ಗಲಭೆಯಾಯಿತು. ಏಳು ಸೇತುವೆಗಳ ಶ್ರೀನಗರದ ಎರಡನೆ ಸೇತುವೆಯ ಹತ್ತಿರ ಹಿಂದೂ ಹೆಣ್ಣುಮಗಳೊಬ್ಬಳು ಸತ್ತುಬಿದ್ದಿದ್ದಳು. ಆ ಹೆಣವನ್ನು ಎತ್ತುವ ಧೈರ್ಯ ಯಾರಿಗೂ ಇರಲಿಲ್ಲ, ಹಿಂದೂ ಸಂಪ್ರದಾಯದ ಪ್ರಕಾರ ಶವವೊಂದಕ್ಕೆ ಎರಡು ದಿನಗಳೊಳಗೆ ಸಂಸ್ಕಾರವಾಗಬೇಕು. ಮುಸ್ಲಿಮರಿಗೆ ಹೆದರಿಕೊಂಡು ಹಿಂದೂಗಳು, ಜಾತಿವಾದಿಗಳಿಗೆ ಹೆದರಿಕೊಂಡು ಸರ್ಕಾರ ಈ ಶವವನ್ನು ನಿರ್ಲಕ್ಷಿಸಿತು. ಆಗ ಶೇಖ್ ಧೈರ್ಯವಾಗಿ ಹೆಣ ಎತ್ತಿಕೊಂಡು, ದೋಣಿಯಲ್ಲಿಟ್ಟು, ಶುಭ್ರ ಬಿಳಿ ಬಟ್ಟೆಯಲ್ಲಿ ಅದನ್ನು ಮುಚ್ಚಿ ಆ ಹೆಣ್ಣುಮಗಳ ಸಂಬಂಧಿಗಳೊಂದಿಗೆ ದೋಣಿಯಲ್ಲಿ ಸಾಗಿದ. ಆತನ ಕೆಲಸ ಗಮನಿಸಿದ ಜಾತಿವಾದಿಗಳಾದ ಮುಸ್ಲಿಮರು ದಡದ ಮೇಲೆ ನಿಂತು "ಹೆಣ ಸುಡುವವ!" ಎಂದು ಹೀಯಾಳಿಸಿದರು. ಶೇಖ್ ಜಗ್ಗಲಿಲ್ಲ, ಆ ಹೆಣ್ಣು ಮಗಳ ಶವಸಂಸ್ಕಾರ ಮಾಡಿದ.

ಹಾಗೆಯೇ ಹಿಂದೂ, ಮುಸ್ಲಿಮರ, ಹೆಣ್ಣು-ಗಂಡುಗಳ ನ್ಯಾಷನಲ್ ಕಾನ್‌ಫರೆನ್ಸ್ ಪಕ್ಷವನ್ನು ಸಂಘಟಿಸಿ ದೊರೆ ಹರಿಸಿಂಗನ ವಿರುದ್ಧ ಹೋರಾಡತೊಡಗಿದ. ಭೂಗತ ಸೈನ್ಯ ಕಟ್ಟಿ ಕಾಶ್ಮೀರದ ಹಳ್ಳಿ, ಪಟ್ಟಣಗಳಲ್ಲೆಲ್ಲ ಹರಿಸಿಂಗ್ ವಿರುದ್ಧ ಬಂಡಾಯ ಬೆಳೆಯುವಂತೆ ಮಾಡಿದ. ಗಾಂಧಿ, ನೆಹರೂ, ಪಟೇಲರ ಸಹಕಾರದಿಂದ ಬೆಳೆಯತೊಡಗಿದ ಜಾತಿ, ಲಿಂಗದ ಭೇದವಿಲ್ಲದ ಜನತೆಯ ಪಕ್ಷದ ಎದುರು ಹರಿಸಿಂಗ್ ತತ್ತರಿಸತೊಡಗಿದ.

ಕುರಾನ್ ಬಲ್ಲ ಶೇಖ್ ವಿಜ್ಞಾನದ ವಿದ್ಯಾರ್ಥಿಯಾಗಿದ್ದ; ಜನಸಾಮಾನ್ಯರಿಗೆ ಧರ್ಮದ ಅರ್ಥವನ್ನು ವಿವರಿಸಿ ಹೇಳಬಲ್ಲವನಾಗಿದ್ದ. ಎಲ್ಲ ಧರ್ಮಗಳ ಮಾನವೀಯತೆ, ಪ್ರೀತಿ ಅರಿತಿದ್ದ ಶೇಖ್ ಎಲ್ಲ ಜಾತಿಯ ಜನಕ್ಕೆ ಧರ್ಮಗಳೆಲ್ಲದರ ಇಂಗಿತ ವಿವರಿಸಿ ಹೇಳಬಲ್ಲವನಾಗಿದ್ದ. ಹಾಗೆಯೇ ಅದ್ಭುತ ಸಂಘಟನಾ ಶಕ್ತಿ ಪಡೆದಿದ್ದ; ಎಲ್ಲ ಜಾತಿಯ ಮೌಲ್ವಿಗಳು, ಸಾಮಾನ್ಯರು, ಧಾರ್ಮಿಕರು ಅವನಲ್ಲಿ ವಿಶ್ವಾಸವಿಟ್ಟಿದ್ದರು. ಈತನ ಸಂಘಟನೆ ಪ್ರಬಲವಾಗಿ ಬೀದಿಬೀದಿಗಳಲ್ಲಿ ದೊರೆಯ ವಿರುದ್ಧ ಪ್ರತಿಭಟನೆ ಕಂಡುಬಂದೊಡನೆ, 1931ರಲ್ಲಿ ಹರಿಸಿಂಗ್ ಶೇಖ್‌ನನ್ನು ದಸ್ತಗಿರಿ ಮಾಡಿ ಕೋಟೆಯೊಂದರಲ್ಲಿ ಇಟ್ಟ. ಇಡೀ ಕಾಶ್ಮೀರ ಪ್ರತಿಭಟಿಸಿ ಬಂದ್ ಆಚರಿಸಿತು; ಜನರು ದೊರೆಯ ವಿರುದ್ಧ ರೊಚ್ಚಿಗೆದ್ದರು. ದೊರೆ ಹೆದರಿ ಹದಿನೆಂಟನೆಯ ದಿನ ಮುಗಿಯುವುದರೊಳಗೆ ಶೇಖ್‌ನನ್ನು ಬಿಡುಗಡೆ ಮಾಡಿದ. ಕಾಶ್ಮೀರದ ಸಿಂಹ ಶೇಖ್ ಒಟ್ಟು ಎಂಟು ಸಲ ಸೆರೆಮನೆ ವಾಸ ಅನುಭವಿಸಿದ.

ಶೇಖ್ ತನ್ನ ನ್ಯಾಷನಲ್ ಕಾನ್‌ಫರೆನ್ಸನ್ನು ಬಲಪಡಿಸಿ ಹೋರಾಟ ನಡೆಸುತ್ತಿದ್ದಾಗಲೇ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವ ಗಳಿಗೆ ಬಂತು. ಕಾಶ್ಮೀರ ಭಾರತಕ್ಕೆ ಸೇರಬೇಕೋ ಪಾಕಿಸ್ತಾನಕ್ಕೆ ಸೇರಬೇಕೋ ಎಂಬ ಸಮಸ್ಯೆ ಎದ್ದಿತು. ಪಾಕಿಸ್ತಾನದಲ್ಲಿ ಜಿನ್ನಾ ನಾಯಕನಾಗಿದ್ದ; ಆತ ಕಾಶ್ಮೀರದ ಜಾತ್ಯತೀತ, ಪ್ರಜಾಸತ್ತಾತ್ಮಕ ಸ್ಥಿತಿಯನ್ನು ನೋಡಿ ಬೆಚ್ಚಿ ಕಾಶ್ಮೀರದ ನಿಯೋಗದೊಂದಿಗೆ ಮಾತಾಡಲೂ ನಿರಾಕರಿಸಿದ."



ಆಮೇಲೆ ಏನಾಯಿತೆಂದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ಆರು ವಾರಗಳ ನಂತರ ಪಾಕಿಸ್ತಾನ ತನ್ನ ಬಾಡಿಗೆ ಸೈನಿಕರನ್ನು ಕಾಶ್ಮೀರಕ್ಕೆ ಕಳುಹಿಸಿ ಮೊದಲ ಭಾರತ ಮತ್ತು ಪಾಕಿಸ್ತಾನ ಯುದ್ಧಕ್ಕೆ ನಾಂದಿ ಹಾಡಿತು. ಆಗಿನ್ನೂ ಕಾಶ್ಮೀರ ಭಾರತಕ್ಕೆ ಸೇರಬೇಕೋ, ಪಾಕಿಸ್ತಾನದ ಭಾಗವಾಗಬೇಕೋ ಅಥವಾ ಸ್ವತಂತ್ರ ದೇಶವಾಗಬೇಕೋ ಎಂದು ಇನ್ನೂ ನಿರ್ಧಾರವಾಗಿರಲಿಲ್ಲ. ಅಷ್ಟರಲ್ಲಿ ಕಾಶ್ಮೀರದ ಹಿಂದೂ ರಾಜ ಹರಿಸಿಂಗ್ ತನ್ನ ಅರಮನೆಯಲ್ಲಿದ್ದ ಹಣ, ಒಡವೆ, ಬೆಲೆಬಾಳುವ ವಸ್ತುಗಳು, ದೇವರ ಮೇಲಿದ್ದ ಒಡವೆಗಳನ್ನೂ ಬಿಡದಂತೆ, ಕಟ್ಟಿಕೊಂಡು ಜಮ್ಮುಗೆ ಪರಾರಿ ಆಗಿದ್ದನಲ್ಲದೆ, ತನ್ನ ಸಾಮ್ರಾಜ್ಯದಲ್ಲಿ ಮುಸಲ್ಮಾನರೇ ಬಹುಸಂಖ್ಯಾತರಾಗಿದ್ದರೂ ಅದನ್ನು ಭಾರತದೊಂದಿಗೆ ಜೋಡಿಸುವ ಕರಾರಿಗೆ ಸಹಿ ಹಾಕಿದ್ದ. ನೆನಪಿಡಿ ಆಗಿನ್ನೂ ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿದ್ದ ಹೈದರಾಬಾದ್, ಜುನಾಗಡ್ ತರಹದ ಇತರೆ ಸಾಮ್ರಾಜ್ಯಗಳೂ ಭಾರತದ ಭಾಗವಾಗಿರಲಿಲ್ಲ. ಆದರೂ ಭಾರತದ ಸೈನ್ಯ ಆಗಮಿಸುವ ತನಕ ಶೇಖ್ ಅಬ್ದುಲ್ಲಾ ಅವರ ಸಂಘಟನೆಯ ಕಾರ್ಯಕರ್ತರು ಪಾಕಿಸ್ತಾನದ ಬಾಡಿಗೆ ಸೈನಿಕರ ವಿರುದ್ಧ ಹೋರಾಡಿದರು.

ಯುದ್ಧ ಮುಗಿದನಂತರ 1947ರ ನವೆಂಬರ್ 2ರಂದು ನೆಹರೂ ಮತ್ತು ಶೇಖ್ ಅಬ್ದುಲ್ಲಾ ಅವರು ಶ್ರೀನಗರದಲ್ಲಿರುವ ಲಾಲ್ ಚೌಕ್ ಎಂಬ ಸ್ಥಳದಲ್ಲಿ ಅಕ್ಕಪಕ್ಕ ನಿಂತು ಸಾವಿರಾರು ಜನರನ್ನು ಉದ್ದೇಶಿಸಿ ಮಾತನಾಡಿದ್ದರು. ಅಂದು ನೆಹರೂ "ಕಾಶ್ಮೀರದ ಭವಿಷ್ಯವನ್ನು ಕಾಶ್ಮೀರಿಗಳೇ ನಿರ್ಧರಿಸುತ್ತಾರೆ. ಹಾಗೆಂದು ನಾವು ಮಾತು ಕೊಟ್ಟಿದ್ದೇವೆ ಮತ್ತು ಅದನ್ನು ರಾಜ ಹರಿಸಿಂಗ್ ಅವರೂ ಒಪ್ಪಿಕೊಂಡಿದ್ದಾರೆ. ಹೀಗೆಂದು ನಾವು ಮಾತು ಕೊಟ್ಟಿರುವುದು ಬರೀ ಕಾಶ್ಮೀರದ ಜನರಿಗೆ ಮಾತ್ರವಲ್ಲ, ಜಗತ್ತಿಗೇ ಕೊಟ್ಟಿರುವ ಮಾತು ಇದಾಗಿದೆ. ನಾವು ಎಂದೂ ಕೊಟ್ಟ ಮಾತಿಗೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲ" ಎಂದಿದ್ದರು. ನೆಹರೂ ಅವರ ಮಾತನ್ನು ನಂಬಿದ ಶೇಖ್ ಅಬ್ದುಲ್ಲಾ ಅವರು 1948ರಲ್ಲಿ ನೆಹರೂ ಮತ್ತು ಭಾರತದ ಬಗೆಗಿನ ತಮ್ಮ ಪ್ರೀತಿ ಮತ್ತು ಭರವಸೆಯನ್ನು ಬಿಂಬಿಸಲು ಒಂದು ಹನಿಗವನವನ್ನು ಉಚ್ಚರಿಸಿದ್ದರು. ಅದು ಹೀಗಿತ್ತು: "ನೀನು ನಾನಾದೆ, ನಾನು ನೀನಾದೆ. ಆದ್ದರಿಂದ ನಾವಿಬ್ಬರೂ ಬೇರೆಬೇರೆ ಅಲ್ಲ ಎಂದು ಯಾರೂ ಹೇಳಲಾಗುವುದಿಲ್ಲ." ಜೊತೆಗೆ "ಕಾಶ್ಮೀರ ಭಾರತದ ಜಾತ್ಯತೀತತೆಗೆ ತೊಟ್ಟಿಲಾಗಿರುತ್ತದೆ" ಎಂದೂ ಹೇಳಿದ್ದರು. ಇನ್ನೊಂದು ಅಂಶವನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ 1948ರ ಮಾರ್ಚ್ 17ರಂದು ಶೇಖ್ ಅಬ್ದುಲ್ಲಾರು ಕಾಶ್ಮೀರದ ಪ್ರಧಾನಿ ಎಂದೇ ಪ್ರಮಾಣವಚನ ಸ್ವೀಕರಿಸಿದ್ದರು. ಭಾರತದ ಬೇರೆ ರಾಜ್ಯಗಳಲ್ಲಿ ಆಗ ಇದ್ದದ್ದು ಮುಖ್ಯಮಂತ್ರಿಗಳು. ಅಂದರೆ 1948ರಲ್ಲಿ ಭಾರತಕ್ಕೆ ನೆಹರೂ ಪ್ರಧಾನಿ ಆಗಿದ್ದರೆ, ಕಾಶ್ಮೀರಕ್ಕೆ ಪ್ರಧಾನಿ ಆಗಿದ್ದದ್ದು ಶೇಖ್ ಅಬ್ದುಲ್ಲಾ.

ಆದರೆ ನೆಹರೂ ತಾವು ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲ. ವಿವಿಧ ಕಾರಣಗಳನ್ನು ನೀಡುತ್ತಾ ಕಾಶ್ಮೀರದ ಭವಿಷ್ಯವನ್ನು ನಿರ್ಧರಿಸಲು ಅಲ್ಲಿನ ಜನರಿಗೆ ಅವಕಾಶವನ್ನೇ ಮಾಡಿಕೊಡಲಿಲ್ಲ. ಇದರ ಬಗ್ಗೆ ಮತ್ತೆಮತ್ತೆ ಶೇಖ್ ಅಬ್ದುಲ್ಲಾ ಪ್ರಸ್ತಾಪಿಸಿದಾಗ ಸಿಡಿಮಿಡಿಗೊಂಡ ನೆಹರೂ ಮಾಡಿದ್ದೇನು ಗೊತ್ತಾ? ಮೊದಲು ಮಾಜಿ ರಾಜ ಹರಿಸಿಂಗ್ ಅವರ ಪುತ್ರ ಕರಣ್ ಸಿಂಗ್ ಅವರನ್ನು ರಾಜ್ಯಪಾಲ ಹುದ್ದೆಯಲ್ಲಿ ಕೂರಿಸಿದ್ದು. ಆಮೇಲೆ 1953ರಲ್ಲಿ ಕರಣ್ ಸಿಂಗ್ ಮೂಲಕ ಶೇಖ್ ಅಬ್ದುಲ್ಲಾ ತನ್ನ ಸಚಿವ ಸಂಪುಟದ ವಿಶ್ವಾಸವನ್ನು ಕಳೆದುಕೊಂಡಿದ್ದಾರೆಂದು ಆರೋಪಿಸಿ ಅವರನ್ನು ಪ್ರಧಾನಿ ಹುದ್ದೆಯಿಂದ ಕಿತ್ತೊಗೆದು ಭಕ್ಷಿ ಗುಲಾಮ್ ಮೊಹಮ್ಮದ್ ಎಂಬಾತನನ್ನು ಪ್ರಧಾನಿಯಾಗಿ ನೇಮಿಸಿದರು. ಅದೂ ಸಾಲದೆಂಬಂತೆ, ಅಬ್ದುಲ್ಲಾ ವಿರುದ್ಧ ದೇಶದ್ರೋಹದ ಆಪಾದನೆ ಹೊರಿಸಿ

▶▶| 11


ಚೆಡ್ಡಿ ಡಿವೈಎಸ್‌ಪಿ ಗಣಪತಿ 'ಮರಣವೇ ಮಹಾನವಮಿ'ಯಂತಾಗಿದೆ ಬೊಬ್ಬೆಕೋರ ಬಿಜೆಪಿ-ಭಜರಂಗಿಗಳಿಗೆ. ಮೊದಲು ಆತ್ಮಹತ್ಯೆ ಮಾಡಿಕೊಂ ಡಿವೈಎಸ್‌ಪಿ-ಹಿಂದುಳಿದ ವರ್ಗದ ಕುರುಬರ ಕಲ್ಲಪ್ಪ ಹಂಡಿಭಾಗ್ ಕುಟುಂಬ ಗಣಪತಿ ಪರಿವಾರಕ್ಕಿಂತಲೂ ಹೆಚ್ಚು ಕಷ್ಟ-ನಷ್ಟದಲ್ಲಿದೆ; ಕಲ್ಲಪ್ಪನ ಮಡದಿ ತೀರಾ ಚಿಕ್ಕ ಪ್ರಾಯದ ಹೆಣ್ಣು ಮಗಳು; ಕೈಯ್ಯಲ್ಲೊಂದು ಹಸುಗೂಸು ಬೇರೆಯಿದೆ; ಕಲ್ಲಪ್ಪನ ತಾಯ್ತಂದೆ-ತಂಗಿಗೆ ಆತನೇ ಆಧಾರವಾಗಿದ್ದ. ಇವತ್ತಿಗೂ ಆ ಸಂಸಾರ ಜನತಾ ಮನೆಯಲ್ಲಿದೆ. ಇದೆಲ್ಲ ನಾಜೂಕಾಗಿ ಮರೆಮಾಚುತ್ತಿರುವ ಯಡ್ಡಿ, ಶೋಭಕ್ಕ, ಶೆಟ್ಟರ್, ಜೋಶಿ ಈಶ್ವರಿ... ವಗೈರೆ ಸಂಘ ಸಂತಾನ ಗಣಪತಿ ಗಲಾಟೆ ಎಬ್ಬಿಸಿ ರಾಜಕೀಯ ಮೈಲೇಜಿಗೆ ನಿರ್ಲಜ್ಜ ಕಸರತ್ತು ನಡೆಸಿದೆ. ಬಿಜೆಪಿ ತಲುಪಿರುವ ನೈತಿ ಅಧಃಪತನಕ್ಕಿದು ಸಂಕೇತ. ಕಲ್ಲಪ್ಪನನ್ನು ಹಿಂದೂತ್ವ ದಂಧೆಕೋರರು ಆಹುತಿ ಪಡೆದಿದ್ದಾರೆ. ಕಲ್ಲಪ್ಪನ ಆತ್ಮಹತ್ಯೆ ಪ್ರಕರಣದ ತನಿಖೆ ನಿಷ್ಠೂರವಾಗಿ ನಡೆದರೆ ಸ್ವ-ಪಕ್ಷದ ಸಿ.ಟಿ. ರವಿಯಂಥ ಬೂಸಾ ಬಡಿವಾರದವರ ಬಣ್ಣ ಬಯಲಾಗುತ್ತದೆಂಬ ಭಯ ಬಿಜೆಪಿಗೆ ನಡುಕ ಮೂಡಿಸಿದೆ. ಕಲ್ಲಪ್ಪ ಮುಗ್ಧತೆ- ವೃತ್ತಿನಿಷ್ಠೆಯ ಅಧಿಕಾರಿಯಾಗಿದ್ದರೆ, ಗಣಪತಿ ಖಾಕಿ ವೇಷದ ಖತರ್‌ನಾಕ್ ಭಜರಂಗಿಯಾಗಿದ್ದ! ಇಂತಿದ್ದ ಗಣಪತಿಗೆ ಆತ್ಮಹತ್ಯೆ ಬಿಟ್ಟ ಬೇರೆ ದಾರಿಗಳೆಲ್ಲ ಬಂದ್ ಆಗಿದ್ದವಾ? ಈ ಬಗೆಗೊಂದು ವಸ್ತುನಿಷ್ಠ ವರದಿ ಇಲ್ಲಿದೆ.

ಚೆಡ್ಡಿ ಗಣಪತಿಗೆ ಆತ್ಮಹತ್ಯೆಯೆ ಅಂತಿಮ ಆಯ್ಕೆ ಆಗಿತ್ತಾ


ಎರಡೇ ಎರಡು ದಿನದ ಅಂತರದಲ್ಲಿ ಇಬ್ಬಿಬ್ಬರು ಡಿವೈಎಸ್‌ಪಿ ದರ್ಜೆಯ ಪೊಲೀಸಪ್ಪಗಳು ಮಾಡಿಕೊಂಡ ಆತ್ಮಹತ್ಯೆ ಧರ್ಮಕಾರಣಿಗಳ ಕರ್ಮ ಕರಾಳತೆಯನ್ನು ಕರಾರುವಾಕ್ಕಾಗಿ ಅನಾವರಣ ಮಾಡಿಬಿಟ್ಟಿದೆ! ನೇಣಿಗೆ ಶರಣಾದ ಮಂಗಳೂರಿನ ಎಂ.ಕೆ. ಗಣಪತಿ ಮತ್ತು ಚಿಕ್ಕಮಗಳೂರಿನ ಕಲ್ಲಪ್ಪ ಹಂಡಿಭಾಗ್ ಇಬ್ಬರಿಗೂ ಸಂಘ ಪರಿವಾರದ ಸಹವಾಸವೇ ಬದುಕು ಸಹಿಸಲು ಅಸಾಧ್ಯ ಮಾಡಿಬಿಟ್ಟಿತು. ಇಬ್ಬರು ಖಾಕಿಗಳ ಸಾವಿನ ಜಾಡು ಹಿಡಿದು ಹೊರಟರೆ ಸಿಗುವುದು, ರಾಜ್ಯದಲ್ಲಿ ಬಿಜೆಪಿ ಆಡಳಿತ ನಡೆಸಿದಾಗ ಭಜರಂಗಿ ಸೈತಾನರು ಕರಾವಳಿ ಹಾಗು ಮಲೆನಾಡಿನ ಪೊಲೀಸ್ ಇಲಾಖೆಯನ್ನು ಕೇಸರೀಕರಣಗೊಳಿಸಿ ಹಿಂದೂತ್ವ ದಂಧೆಯ ಏಕಸ್ವಾಮ್ಯದ ಮಾರುಕಟ್ಟೆ!!

ಯಾರು ಸಾಯಲಿ, ಸೋಲಲಿ, ಸಂಕಷ್ಟಕ್ಕೀಡಾಗಲಿ ಅಲ್ಲಿ ಸಂಘಪರಿವಾರದ ಪರಾಕ್ರಮಿಗಳು ಮೊದಲು ಹುಡುಕುವುದು ಜಾತಿ. ಇದು ಚೆಡ್ಡಿಗ್ಯಾಂಗಿನ ಹಿಡನ್ ನೀತಿ-ನಿಯಮ. ಹೀಗಾಗಿ ಹಿಂದುಳಿದ ಕುರುಬ ಜನಾಂಗದ ಡಿವೈಎಸ್‌ಪಿ ಹಂಡಿಭಾಗ್ ಜೀವಕ್ಕಿಂತ ಮೇಲುಜಾತಿ-ಕೊಡುವ ಗಣಪತಿಯ ಪ್ರಾಣ ಅಮೂಲ್ಯವಾಗಿ ಬಿಜೆಪಿ-ಭಜರಂಗಿ ಬಳಗಕ್ಕೆ ಗೋಚರಿಸಿದೆ. ಅದರಲ್ಲೂ ಗಣಪತಿ ಹೋಗುವಾಗ ಕ್ರಿಶ್ಚಿಯನ್ ಧರ್ಮದ ಮಂತ್ರಿ ಕೆ.ಜೆ. ಜಾರ್ಜ್ ತಲೆ ಮೇಲೆ ಗೂಬೆ ಕೂರಿಸಿ ಹೋಗಿರುವುದು ಯಡ್ಡಿಯ ಸರ್ವಾಧಿಕಾರದ ವಿರುದ್ಧದ ಸಂಘರ್ಷದಲ್ಲಿ ಹೈರಾಣಾಗಿದ್ದ ಬಿಜೆಪಿಗಳಿಗೆ ಮುಳುಗುವವನಿಗೆ ಹುಲ್ಲುಕಡ್ಡಿ ಸಿಕ್ಕಂತಾಗಿದೆ.

ವೈಚಾರಿಕ ಬಿಜೆಪಿ-ವ್ಯವಹಾರಿಕ ಬಿಜೆಪಿ, ಯಡ್ಡಿ-ಈಶ್ವರಿ ಎಂಬ ಈಶ್ಯೂ ಆಧಾರಿತ ಗುದ್ದಾಟದಲ್ಲಿ ಒಡೆದುಹೋಗಿದ್ದ ಬಿಜೆಪಿಗೆ ಗಣಪತಿ ಆತ್ಮಹತ್ಯೆ ತಾತ್ಕಾಲಿಕ ನೆಮ್ಮದಿ ನೀಡಿದೆ. ಗಣಪತಿ ಸಂಘ ಪರಿವಾರದ ಕಟ್ಟಾಳು ಆಗಿದ್ದರು; ಪೊಲೀಸ್ ವೇಷದ ಪಕ್ಕಾ ಪುಂಡ ಭಜರಂಗಿಯಾಗಿದ್ದರು. 2008ರ







ಪೋಷಿಸಿ ಪೊಲಿಟಿಕಲ್ ಮೈಲೇಜ್ ಪಡೆದ ಕೀರ್ತಿ-ಸಾಹಸ ಸಿ.ಟಿ. ರವಿಯಂಥ ಚಿಕ್ಕಮಗಳೂರು ಬಿಜೆಪಿ ಮುಖಂಡಾಗ್ರೇಸರದು.

ಅವಿಭಜಿತ ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಕೇಸರಿ

ಬಿಜೆಪಿ ಆಡಳಿತದ ಪರ್ವದಲ್ಲಿ ಗಣಪತಿ ಮಂಗಳೂರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದರು. ತಾನೊಬ್ಬ ಚೆಡ್ಡಿ ಎಂದು ಎದೆಯುಬ್ಬಿಸಿ ಬಹಿರಂಗವಾಗೇ ಹೇಳುತ್ತಿದ್ದ ಗಣಪತಿಯನ್ನು ಕರಾವಳಿ ಆರ್‌ಎಸ್‌ಎಸ್ ಡಾನ್ ಕಲ್ಲಡ್ಕ ಪ್ರಭಾಕರ್ ಭಟ್ಟ ಆಯಕಟ್ಟಿನ ಪೊಲೀಸ್ ಠಾಣೆಗಳಲ್ಲಿ ಪ್ರತಿಷ್ಠಾಪಿಸಿದ್ದರು.

ಪೊಲೀಸ್ ಇಲಾಖೆಯ ಡಿಜಿ, ಐಜಿಪಿ, ಎಸ್‌ಪಿಗಳ ಕೇರ್ ಮಾಡದೇ ಮತಾಂಧ ಡ್ಯೂಟಿ ನಡೆಸುತ್ತಿದ್ದ ಗಣಪತಿ ಕ್ರಿಶ್ಚಿಯನ್, ಮುಸ್ಲಿಂ ಜನಾಂಗದವರ ಮೇಲೆ ಮುಗಿಬಿದ್ದ ಪರಿ ಬರ್ಬರ-ಹೇಯ-ಅಮಾನುಷವೇ ಸರಿ. ಕಲ್ಲಡ್ಕ ಭಟ್ಟ, ಅಂದಿನ ಪೊಲೀಸ್ ಮಂತ್ರಿ ವಿ.ಎಸ್. ಆಚಾರ್ಯ ಮತ್ತು ಮತ್ತೊಬ್ಬ ಕಮ್ಯುನಲ್ ಮಿನಿಸ್ಟರ್ ಆಗಿದ್ದ ಕೃಷ್ಣ ಪಾಲೇಮಾರ್‌ಗಳ ಸಂಪ್ರೀತಗೊಳಿಸಲು ಗಣಪತಿ ಮಾಡಿದ ಧರ್ಮಾಧಾರಿತ ಪಾತಕ ಒಂದೆರಡಲ್ಲ. ಮೇಲಧಿಕಾರಿಗಳ ಆದೇಶ ಧಿಕ್ಕರಿಸಿ ಹಿಂದೂತ್ವದ ಸೈತಾನ ಸಂರಕ್ಷಿಸುವ ಕಾಯಕ ತುಂಬ ವ್ಯವಸ್ಥಿತವಾಗಿ ಮಾಡಿದ್ದ ಗಣಪತಿ ವೃತ್ತಿಯಲ್ಲೂ ಪರಮಭ್ರಷ್ಟನಾಗಿದ್ದ. ಈ ಕಾರಣಕ್ಕಾಗೇ ಆತ ಐದ್ಯೆದು ಸಲ ಸಸ್ಪೆಂಡ್ ಸನ್ಮಾನಕ್ಕೆ ಭಾಜನನಾಗಿದ್ದ.


2008ರಲ್ಲಿ ಅಂದಿನ ಗೃಹಮಂತ್ರಿ ಆಚಾರ್ಯ, ಸೂಪರ್ ಹೋಮ್ ಮಿನಿಸ್ಟರ್ ಕಲ್ಲಡ್ಕ, ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಎಂ.ಕೆ. ಗಣಪತಿ ಮತ್ತು ಜಯಂತ್ ಶೆಟ್ಟಿಗಳ ಕುಮ್ಮಕ್ಕು ಸಹಕಾರದಿಂದ ಮಂಗಳೂರಿನ ಚರ್ಚ್‌ಗಳ ಮೇಲೆ ನಡೆದ ಭೀಕರ ದಾಳಿ, ಕ್ರೈಸ್ತರ ಮೇಲಾದ ಅಮಾನುಷ ಹಲ್ಲೆ ಚರಿತ್ರೆಯ ಪುಟಗಳಲ್ಲಿ ರಕ್ತದ ಅಕ್ಷರಗಳಲ್ಲಿ ದಾಖಲಾಗಿದೆ. ಇದೊಂದು ಅಭೂತಪೂರ್ವ ಕೋಮು ದಂಗೆ.


ಆಡಳಿತಗಾರರೇ ನಡೆಸಿದ ಧರ್ಮಾಂಧ ಆಕ್ರಮ ಆಡಳಿತಗಾರ ಕೃಪಾಕಟಾಕ್ಷವಿದ್ದರಿಂದ ಹಿಂದೂತ್ವದ ಕಿರಾತ ಮತ್ತು ಭಜರಂಗಿ ಪೊಲೀಸರು ಒಟ್ಟಾಗಿಯೇ ಕ್ರೈಸ್ತರ ಮೇ ದಾಳಿಯ ಸ್ಕೆಚ್ ಹಾಕಿದ್ದರು. ಘಾತಕಿಗಳಿಗೆ ಕಾನೂ ಹಂಗಿಲ್ಲ ಎಂಬ ಸಂದೇಶ ಆಳುವವರಿಂದ ಬಂದಿದ್ದರ ದಾಳಿಗಳು ಬರ್ಬರ-ಭಯಾನಕವಾಗಿದ್ದವು.


ಚರ್ಚ್ ದಾಳಿ ನಂತರ ಮಂಗಳೂರಿನ ಕ್ರೈ ಕಂಗಾಲಾಗಿದ್ದರು. ಬದುಕಲು ಸಂಘಟಿತರಾಗುವು ಅನಿವಾರ್ಯವಾಗಿತ್ತು, ತಮ್ಮ ಮೇಲಾಗುತ್ತಿರುವ ಪೊಲಿ ಪ್ರಚೋದಿತ ದಾಳಿ, ಹಲ್ಲೆ, ಆಕ್ರಮಣ ಪ್ರತಿಭಟಿ ಮುಂದಾಗಿದ್ದರು.

ಪ್ರಾರ್ಥನಾ ರೂಪದ ಪ್ರತಿಭಟನೆಗೆಂದು ಕುಲಶೇ ಚರ್ಚ್‌ನಲ್ಲಿ ಕ್ರೈಸ್ತರು ಸೇರಿದ್ದರು. ಅಲ್ಲಿಗೆ ಗಣಪತಿ ಪೊಲೀಸ್ ಪಡೆ ಹಿಂದೂತ್ವದ ಗೂಂಡಾ ತಂಡ ಕಟ್ಟಿಕೊ ಬಂದು ದೌರ್ಜನ್ಯ- ಹಿಂಸಾಚಾರ ನಡೆಸಿತ್ತು, ಚರ್ಚ್ ಸೇರಿದ್ದ ಕ್ರಿಶ್ಚಿಯನ್ ಯುವಕರ ತಲೆಗಳನ್ನು ನಿರ್ದಯ ಒಡೆಯಲಾಯಿತು! ಅಲ್ಲಿದ್ದ ವೃದ್ಧರೆಲ್ಲರೂ 70 ವ ಮೀರಿದವರಾಗಿದ್ದರು. ಅವರ ವಯಸ್ಸೂ ಪರಿಗಣಿ ಹಿಂದೂತ್ವದ ರೌಡಿಗಳು ಮಾರಣಾಂತಿಕ ಹಲ್ಲೆ ಮಾಡಿ ರಕ್ತ ಹರಿಸಿ ಕೇಕೆ ಹಾಕಿದರು.

ಇಷ್ಟಕ್ಕೇ ಪೊಲೀಸರಿಗೆ ಮತ್ತು ಹಿಂದೂ ಪಾತಕಿ ತೃಪ್ತಿಯಾಗಲಿಲ್ಲ, ಪಕ್ಕದ ಕ್ರೈಸ್ತ ಬಾಲಕಿಯರ ಶಾಲೆಗೆ ನು ಪೊಲೀಸರು 388 ಬಾಲಕಿಯರ ಮೇಲೆ ಲಾಠಿ ಬೀಸಿದ 19 ಕ್ರೈಸ್ತ ಸಂನ್ಯಾಸಿನಿಯರು ಹಾಗು 163 ಮಹಿಳೆ ಚಚ್ಚಿದರು. ದೊಡ್ಡ ಹಿಂಸಾಕಾಂಡವೇ ನಡೆದುಹೋಯಿತು ಇನ್ಸ್‌ಪೆಕ್ಟರ್ ಗಣಪತಿ ಪೌರುಷಕ್ಕೆ ಕ್ರೈಸ್ ಹೈರಾಣಾಗಿಹೋದರು. ಹೆಡ್‌ಮಾಸ್ಟರ್ ಕೋಣೆಗೆ ನು ಗಣಪತಿ ಮತ್ತು ಇನ್ಸ್‌ಪೆಕ್ಟರ್ ಜಯಂತ್









ಮಂಗಳೂರು ಚರ್ಚ್ ದಾಳಿ ಬಳಿಕದ ಗಣಪತಿಯ ಡ್ಯೂಟಿ ಟ್ರ್ಯಾಕ್‌ನ ಉದ್ದಕ್ಕೂ ಭಜರಂಗಿ ಮೈಲಿಗಲ್ಲುಗಳೇ ತುಂಬಿಹೋಗಿದೆ. ಇಂತಿದ್ದ ಗಣಪತಿಯ ಸ್ವಯಂ ಆಹುತಿ ಸಹಜವಾಗೇ ಬಿಜೆಪಿ-ಭಜರಂಗಿಗಳ ಧರ್ಮಕಾರಣಕ್ಕೆ ಅಸ್ತ್ರವಾಗಿದೆ. ಹಾಗಂತ ಅಪ್ಪಿತಪ್ಪಿಯೂ ಹಂಡಿಭಾಗ್ ಆತ್ಮಹತ್ಯೆ ಕೇಸ್ ಉಸಾಬರಿಗೆ ಚೆಡ್ಡಿಗಳು ಹೋಗುತ್ತಿಲ್ಲ.


ಹಂಡಿಭಾಗ್ ಆತ್ಮಹತ್ಯೆಯ ಆಯಾಮಗಳನ್ನು ಒಂದೊಂದಾಗಿ ಬಿಚ್ಚುತ್ತಾ ಹೋದರೆ ಅದು ಸುತ್ತಿಕೊಳ್ಳುವುದು ಸಂಘ ಪರಿವಾರದ ಚಂಡ ಪ್ರಚಂಡರಿಗೆ. ಹೀಗಾಗಿ ಹಂಡಿಭಾಗ್ ಉಸಾಬರಿ ಬಿಜೆಪಿಗಳಿಗೆ ಬೇಡವಾಗಿದೆ. ದೇಶಭಕ್ತಿ, ನೈತಿಕತೆ, ಪ್ರಾಮಾಣಿಕತೆ ಬಗ್ಗೆ ಉದ್ದುದ್ದ ವ್ಯಾಖ್ಯಾನ ಕೊಡುವ ಚಿಕ್ಕಮಗಳೂರು ಶಾಸಕ-ಬಿಜೆಪಿಯ ಮುಂಚೂಣಿ ನಾಯಕಮಣಿ ಸಿ.ಟಿ. ರವಿಯಂಥವರಿಗೆ ಹಂಡಿಭಾಗ್ 'ಹತ್ಯೆ' ದೋಷ ತಟ್ಟುತ್ತದೆ! ಹಿಂದೂ ಜಾಗರಣಾ ವೇದಿಕೆಯ ಪ್ರವೀಣ್ ಖಾಂಡ್ಯನ ಪಟಾಲಮ್ ಅನೈತಿಕ ಪೊಲೀಸ್‌ಗಿರಿಯನ್ನೇ ಜೀವನೋಪಾಯ ಕಸುಬಾಗಿ ಮಾಡಿಕೊಂಡಿದ್ದರು. ಬೆಟ್ಟಿಂಗ್, ಚೀಟಿಂಗ್, ದನ ಹಿಡಿಯೋದು, ಸಾಬರ ಚಚ್ಚಿ ದೋಚೋದು, ಲ್ಯಾಂಡ್ ಡೀಲಿಂಗ್‌ನಲ್ಲಿ ಮೂಗು ತೂರಿಸಿ ಕಾಸು ಕಿತ್ತೋದು, ಯಾರ್‍ಯಾರದೋ ಹಣಕಾಸಿನ ವ್ಯಾಜ್ಯ ಸೆಟ್ಲ್‌ಮೆಂಟ್‌ಗೆ ಹೋಗೋದು ಪ್ರವೀಣ್ ಖಾಂಡ್ಯ, ಪ್ರದೀಪ್ ಮತ್ತಿತರ ಚೆಡ್ಡಿಗಳಿಗೆ ನಿತ್ಯಕರ್ಮದಂತಾಗಿತ್ತು, ಇಂಥವರ


ಕಳ್ಳರ ಕರಾಮತ್ತು ನಡೆಯಲಾರಂಭಿಸಿ ಹತ್ತಿರತ್ತಿರ ಒಂದು ದಶಕವಾಗಿದೆ. ಭರ್ಜರಿ ಕುಂಕುಮನಾಮ ಮತ್ತು ಕೇಸರಿ ಶಾಲಿನ ಈ ಭಜರಂಗಿಗಳು ಪೊಲೀಸರ ಪಳಗಿಸಿ ಅನಾಹುತಕಾರಿ ಲೇವಾದೇವಿ ನಡೆಸುತ್ತಿದ್ದಾರೆ. ಪೊಲೀಸರಿಗೆ ಒಂದಿಷ್ಟು ಬಿಸಾಕಿ ತಾವು ಲಕ್ಷಾಂತರ ರೂ.ಗಳ ದೋ ನಂಬರ್ ದಂಧೆ, ರಾಜಿ ಪಂಚಾಯ್ತಿಕೆ ನಡೆಸುತ್ತಿದ್ದಾರೆ. ಯಾರ್‍ಯಾರದೋ ಸಂಸಾರ, ಸ್ನೇಹದಲ್ಲಿ ಅತಿಕ್ರಮಣ ಮಾಡಿ ಸಿಕ್ಕಷ್ಟು ಲಪಟಾಯಿಸುತ್ತಿದ್ದಾರೆ. ಇಂಥ ಹಿಂದೂತ್ವದ ಹರಾಮಿತನವೇ ಇವತ್ತು ಹಂಡಿಭಾಗ್, ಗಣಪತಿಯಂಥ ಪೊಲೀಸ್ ಅಧಿಕಾರಿಗಳ ಅಪೋಷನ ಪಡೆದಿದೆ.











ಪೀಠೋಪಕರಣ ಎತ್ತೆತ್ತಿ ಬಿಸಾಕಿದರು; ಸಂನ್ಯಾಸಿನಿಯರ ಮೇಲೆ ಮೃಗಗಳಂತೆ ಮುಗಿಬಿದ್ದರು. ಹೆಂಗಸರ-ಮಕ್ಕಳ ಚೀರಾಟ-ಚೀತ್ಕಾರ ಮುಗಿಲು ಮುಟ್ಟಿತು. ಹಿಂಸೆ ತಡೆಯಲಾಗದೆ ಬಿದ್ದು ಒದ್ದಾಡಿದರು. ಇದರಿಂದ ಗಣಪತಿ-ಜಯಂತ್ ಶೆಟ್ಟಿಗಳೊಳಗಿನ ಭಜರಂಗಿ ಸೈತಾನರಿಗೆ ಮತ್ತೊಂದಿಷ್ಟು ಉಮೇದಿ ಬಂದುಬಿಟ್ಟಿತು. ಯದ್ವಾತದ್ವಾ ಲಾಠಿ ಬೀಸಿದರು. ಮಹತ್ವದ ಅಂಶವೆಂದರೆ ಈ ಲಾಠಿ ಚಾರ್ಜಿಗೆ ಗಣಪತಿ-ಶೆಟ್ಟಿಗೆ ಮೇಲಧಿಕಾರಿಗಳ ಆದೇಶ-ಆರ್ಡರ್ ಯಾವುದೂ ಇರಲೇ ಇಲ್ಲ!!

ಗಣಪತಿಗೆ ಕ್ರೈಸ್ತರ ಮೇಲೆ ಅದೆಂಥ ದ್ವೇಷವ್ರೋ ಏನೋ? ಅದೆಂಥ ಮತಾಂಧ ದಾಳಿಯ ದಾಹವ್ರೋ? ಕ್ರೈಸ್ತರ ಹಣಿಯಲು ಆತ ಸಜ್ಜಾಗೇ ಇದ್ದ. ಮರುದಿನ ಸಾಮೂಹಿಕ ಪ್ರಾರ್ಥನೆಗೆಂದು ಚರ್ಚ್‌ನಲ್ಲಿ 350 ರಷ್ಟು ಜನ ಸೇರಿದ್ದರು. ಆಗ ಬರೋಬ್ಬರಿ ಮೂರು ಲಾರಿಗಳಲ್ಲಿ ಪೊಲೀಸರನ್ನು ಕರೆತಂದ ಗಣಪತಿ ಚರ್ಚ್‌ನ ಎಲ್ಲಾ ಗೇಟ್ ಬಂದ್ ಮಾಡಿಸಿದ್ದ. ಒಳಗಿದ್ದ ಕ್ರೈಸ್ತರಿಗೆ ಹೊರಗೆ ಹೋಗಲು ಬಿಡದೆ ಚಚ್ಚಿ ತೀಟೆ ತೀರಿಸಿಕೊಳ್ಳುವ ಹಠ ಗಣಪತಿಯದಾಗಿತ್ತು. ತನ್ನ ಪೊಲೀಸ್ ಪಡೆಯೊಂದಿಗೆ ಸೀದಾ ಚರ್ಚ್‌ನೊಳಗೆ ನುಗ್ಗಿದ ಗಣಪತಿ ಕೈಗೆ ಸಿಕ್ಕ ವಿಗ್ರಹಗಳನ್ನೆಲ್ಲ ಧ್ವಂಸ ಮಾಡಿದ್ದಾನೆ; ಅಸಲಿ ಭಜರಂಗಿ, ಚೆಡ್ಡಿ ರೌಡಿಗಳೂ ನಾಚುವಂತೆ ಹಲ್ಲೆ-ದಾಳಿ-ಧ್ವಂಸ ಪೊಲೀಸರು ಮಾಡಿದ್ದಾರೆ. ಗಣಪತಿ ಲಾಠಿ ಚಾರ್ಜ್‌ಗೆ ಆರ್ಡರ್ ಮಾಡಿದ್ದಾನೆ. ಪೊಲೀಸರು ಸಿಕ್ಕ ಹೆಂಗಸರು-ಗಂಡಸರೆನ್ನದೆ ಲಾಠಿಯಲ್ಲಿ ಥಳಿಸಿ ರಕ್ತ ಹರಿಸಿದ್ದಾರೆ. ಅಲ್ಲಿನ ಪ್ರತಿಯೊಬ್ಬರು ಗಾಯಗೊಂಡು ರೋದಿಸಿದ್ದಾರೆ; ಬಿದ್ದು ನರಳಾಡಿದ್ದಾರೆ. ಇದನ್ನು ಕಂಡು ಗಣಪತಿ ವಿಕೃತಾನಂದ ಅನುಭವಿಸಿದ್ದಾನೆ!!

ಇಂಥದೇ ಮತ್ತೊಂದು ಹಿಂಸಾತ್ಮಕ ದಾಳಿ ಗಣಪತಿ ಹಾಗೂ ಜಯಂತ ಶೆಟ್ಟಿ ಬಳಗ ಮಿಲಾಗ್ರೇಸ್ ಚರ್ಚ್ ಮೇಲೆ ಮಾಡಿತ್ತು. ಆಗಲೂ ಪೊಲೀಸರು-ಹಿಂದುತ್ವದ ಗೂಂಡಾಗಳು ಒಂದಾಗಿ ಆಕ್ರಮಣ ನಡೆಸಿದ್ದರು. ಗಣಪತಿ-ಶೆಟ್ಟಿ ಅಟ್ಟಾಡಿಸಿ ಕಾಡಿದ್ದರು. ಪೊಲೀಸರೇ ಕಲ್ಲುಗಳನ್ನು ತಂದು ಕ್ರಿಶ್ಚಿಯನ್ನರ ಮೇಲೆ ತೂರಿದ್ದರು. ಮುದುಕರು-ಮಹಿಳೆಯರು-ಬಾಲಕಿಯರೆನ್ನದೇ ಖುದ್ದು ಇನ್ಸ್‌ಪೆಕ್ಟರ್ ಗಣಪತಿಯೇ ಲಾಠಿ ಬೀಸಿ ಸೇಡು ತೀರಿಸಿಕೊಳ್ಳುವ ಯಃಕಶ್ಚಿತ್‌ನಂತೆ ವರ್ತಿಸಿದ್ದು, ರಕ್ತ ಹರಿಸಿದ್ದು ಅದೆಷ್ಟು ದೊಡ್ಡ ಚರ್ಚೆಯ ಸಂಗತಿ ಆಗಿತ್ತೆಂದರೆ ಸ್ವತಃ ಗಣಪತಿ ಕುಟುಂಬಸ್ಥರೇ ನಾಚಿಕೆಯಿಂದ ತಲೆತಗ್ಗಿಸಿದ್ದರು; ಇಂಥ ಪಾತಕ ಕಾರ್ಯಾಚರಣೆಯಿಂದ ಗಣಪತಿ ಹೆಂಡತಿ-ಮಕ್ಕಳಿಗೂ ಸಮಾಜದಲ್ಲಿ ಅವಮಾನಿತರಾಗುವಂತಾಗಿತೆಂಬ ಸುದ್ದಿ ಅಂದು ಹಬ್ಬಿತ್ತು. ಆದರೆ ಗಣಪತಿ-ಜಯಂತ್ ಶೆಟ್ಟಿ ಮಾತ್ರ ತಮ್ಮ ಕಾನೂನುಬಾಹಿರ ಕಾರ್ಯಾಚರಣೆ-ಕ್ರೌರ್ಯ ಸಮರ್ಥಿಸಿಕೊಂಡು ಅಟ್ಟಹಾಸದಿಂದ ಮೆರೆಯುತ್ತಲೇ ಇದ್ದರು. ಗಣಪತಿ ಗರ್ವ ಮಿತಿ ಮೀರಿಹೋಗಿತ್ತು.

ಸೂಪರ್ ಗೃಹ ಮಂತ್ರಿ ಕಲ್ಲಡ್ಕನ ಕೃಪಾಶೀರ್ವಾದ ಇರುವಾಗ ಯಾರಿಗೂ ಕೇರ್ ಮಾಡಬೇಕಾದ್ದಿಲ್ಲ ಎಂಬ ಹರಾಮಿತನ ಗಣಪತಿಯಲ್ಲಿ ಬೆಳೆದಿತ್ತು. ಪೊಲೀಸ್-ಪುಂಡರ ಗಲಭೆಯಲ್ಲಿ ಗಾಯಗೊಂಡ 3879 ಜನರಿಗೆ ಅಂದಿನ ಸರ್ಕಾರ ನ್ಯಾಯ ಕೊಡುವುದಿರಲಿ, ಆ ಸಂತ್ರಸ್ತರ ಮೇಲೆಯೇ ಕೇಸು ಜಡಿದು ಬಾಯಿಮುಚ್ಚಿಸುವಂತೆ ಗೃಹಮಂತ್ರಿ ಆಚಾರ್ಯ ಆದೇಶಿಸಿದ್ದರು. ಹೀಗಾಗಿ ಗಣಪತಿಯ ಪಾಪಕೃತ್ಯಗಳಿಗೆ ಕಡಿವಾಣವೇ ಇಲ್ಲದಂತಾಗಿ ಅಸಹಾಯಕರು-ಅಮಾಯಕರು ಅನುಭವಿಸಿದ ಚಿತ್ರಹಿಂಸೆ ಹೇಳತೀರದಾಗಿತ್ತು. ಇನ್ಸ್‌ಪೆಕ್ಟರ್ ಗಣಪತಿ ಉಸ್ತುವಾರಿಯಲ್ಲಿ ಹಿಂಸೆಯ ಪರಾಕಾಷ್ಠೆ ತಲುಪಿದ್ದ ಅಂದಿನ ಕ್ರಿಶ್ಚಿಯನ್ ವಿರೋಧಿ ಭಜರಂಗೀ ಗಲಭೆಗಳಲ್ಲಿ ಪೊಲೀಸರ ಬರ್ಬರತೆ-ಫ್ಯಾಸಿಸ್ಟ್ ದೌರ್ಜನ್ಯ ಮತಾಂಧ ಮಸಲತ್ತು ಎದ್ದು ಕಾಣುತ್ತಿತ್ತು.

ಇಷ್ಟಾದರೂ ಅಹಮಿಯಲ್ಲೇ ಹಾರಾಡುತ್ತಿದ್ದ ಗಣಪತಿ ಸಂಘಪರಿವಾರದ ಸಹವಾಸದಲ್ಲಿ ನೈತಿಕತೆ-ಮನುಷ್ಯತ್ವ-ವೃತ್ತಿಪರತೆ-ನ್ಯಾಯಾನ್ಯಾಯ ಬಾಕಿ ನಿಯತ್ತು ಎಲ್ಲ


▶▶07


ಅನುಪಮಾ, ಕಲ್ಲಪ್ಪ, ಗಣಪತಿ...

ಸಂಘಿಗಳ ನಿಕಟವರ್ತಿಗಳು

ಡಿವೈಎಸ್‌ಪಿ ಆಗಿದ್ದ ಗಣಪತಿಯವರದ್ದು ಅನುಮಾನಕ್ಕೆ ಎಡೆಯಿಲ್ಲದ ಆತ್ಮಹತ್ಯೆ ಪ್ರಕರಣ. ಇದನ್ನು ಕೊಲೆ ಎಂದು ಬಿಂಬಿಸಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿ ಮನರಂಜನೆ ಪಡೆಯಲು ರಾಜ್ಯದ ಪಟ್ಟಭದ್ರ ಹಿತಾಸಕ್ತಿಗಳು ನಿದ್ದೆಗೆಟ್ಟು ಹೋರಾಡುತ್ತಿರುವುದನ್ನು ಕೆಲವು ದಿನಗಳಿಂದ ನಾನು ಮತ್ತು ನನ್ನಂತೆ ಚಿಂತಿಸುವವರು ದಿಗ್ಭ್ರಾಂತರಾಗಿ ನೋಡುತ್ತಿದ್ದೇವೆ. ಇದು ಯಾವ ಸಾರ್ವಜನಿಕ ಹಿತಕ್ಕಾಗಿ ಎಂಬುದೇ ಉದ್ಭವಿಸುವ ಯಕ್ಷಪ್ರಶ್ನೆಯಾಗಿದೆ.

ಗಣಪತಿಯವರದು ಆತ್ಮಹತ್ಯೆಯೆಂಬುದನ್ನು ಯಾರಿಂದಲೂ ಅಲ್ಲಗಳೆಯಲು ಸಾಧ್ಯವಿಲ್ಲ. ಆತ್ಮಹತ್ಯೆ ಅಪರಾಧ ಎಂಬುದರಲ್ಲಿಯೂ ಅನುಮಾನಕ್ಕೆ ಎಡೆಯಿಲ್ಲ. ಆದರೂ ಈ ಅಪರಾಧವನ್ನು ಮುಚ್ಚಿಟ್ಟು, ಅದು ಸಕಾರಣವಾದುದೆಂದು ಬಿಂಬಿಸಲು ಶತಾಯುಗತಾಯ ಪ್ರಯತ್ನಿಸುತ್ತಾ, ಇಲ್ಲಿ ಯಾರನ್ನೋ ಬಲಿಪಶು ಮಾಡಿ ಮನರಂಜನೆ ಪಡೆಯಲು ಹೊರಟಿರುವುದು ಇಂದಿನ ಕ್ರೂರ ವ್ಯಂಗ್ಯವಾಗಿದೆ. ಇಂತಹ ಚಟುವಟಿಕೆ ಸಮಾಜಘಾತುಕ ಮಾತ್ರವಲ್ಲ, ದೇಶದ್ರೋಹವೂ ಹೌದು. ಗಣಪತಿ ಆತ್ಮಹತ್ಯೆಯನ್ನು ಕೊಲೆಯೆಂದು ಬಿಂಬಿಸ ಹೊರಟಿರುವವರ ಸಮಾಜಘಾತುಕತನವನ್ನು ಬಯಲು ಮಾಡುವಲ್ಲಿ ಆಳುವ







ಕಾಂಗ್ರೆಸ್ ಮಂದಿ ವಿಫಲವಾಗಿರುವುದು, ಕಾಂಗ್ರೆಸ್ ಪಕ್ಷದ ದೌರ್ಬಲ್ಯದಿಂದ ಎಂಬುದು ಇಲ್ಲಿ ಎದ್ದು ಕಾಣುತ್ತಿದೆ.

ಈ ದೌರ್ಬಲ್ಯವನ್ನು ತಮ್ಮ ಸ್ವಾರ್ಥಸಾಧನೆಗಾಗಿ ಬಳಸಿಕೊಳ್ಳುತ್ತಿರುವ ವಿರೋಧ ಪಕ್ಷಗಳು ಮತ್ತು ಅಂತಹವರಿಗೆ ಸಾಥ್ ನೀಡುತ್ತಿರುವ ಮಾಧ್ಯಮಗಳು ಮುಗ್ಧ ನಾಗರಿಕರನ್ನು ದಾರಿ ತಪ್ಪಿಸುವ ಕೆಲಸ ಮಾಡಲು ಸತತವಾಗಿ ದುಡಿಯುತ್ತಿರುವುದು ನಮ್ಮ ಕಣ್ಣೆದುರಿಗೆ ಇರುವ ದೃಶ್ಯವಾಗಿದೆ. ಇದು ಯಾವ ಸಾರ್ವಜನಿಕ ಹಿತಕ್ಕಾಗಿ ಎಂಬುದೇ ಹಾಲಿ ಪ್ರಶ್ನೆಯಾಗಿದೆ.

ಈ ಸಂದರ್ಭದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಗಣಪತಿಯವರ ಕುಟುಂಬದವರು ಅಂದರೆ ತಂದೆ, ಸಹೋದರ, ಹೆಂಡತಿ ಇವರೆಲ್ಲರೂ ಸ್ಥಾಪಿತ ಹಿತಾಸಕ್ತಿಗಳ ಕೈಗೊಂಬೆಗಳಾಗಿ, ಅವರ ಪಗಡೆಯಾಟದ ದಾಳವಾಗಿ ಪರಿವರ್ತನೆಗೊಂಡಿರುವುದು ನೋಡುವುದಕ್ಕೆ ಅಸಹ್ಯವಾಗಿ ಕಾಣುತ್ತಿದೆ. ಇಂತಹ ವರ್ತನೆಯಿಂದ ಅವರ ಕುಟುಂಬದ, ಜನಾಂಗದ, ಎಲ್ಲಕ್ಕಿಂತಲೂ ಹೆಚ್ಚಾಗಿ ಆತ್ಮಹತ್ಯೆ ಮಾಡಿಕೊಂಡ ಗಣಪತಿಯವರ ಮಾನ ಬೀದಿಯಲ್ಲಿ ಹರಾಜಾಗುತ್ತಿದೆ ಎಂಬುದರ ಅರಿವು ಅವರಲ್ಲಿ ಇದ್ದಂತೆ ಇಲ್ಲ. ಗಣಪತಿಯವರ ಕುಟುಂಬ ಸದಸ್ಯರನು ಎಚ್.ಡಿ.ಕುಮಾರಸ್ವಾಮಿಯವರು ಭೇಟಿ ಮಾಡಿದ ನಂತರ, ಅವರ ಕುಟುಂಬದವರು ಮೊದಲು ನಡೆದುಕೊಂಡದ್ದರ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇದರಿಂದ ಅವರುಗಳು ಸ್ಥಾಪಿತ ಹಿತಾಸಕ್ತಿಗಳ ಜೊತೆ ಕೈಜೋಡಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಕುಟುಂಬದ ಪ್ರಮುಖ ಸದಸ್ಯನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ದುಃಖದಲ್ಲಿರುವವರು ಯಾರೂ ಕೂಡ ಗಣಪತಿಯವರ ಕುಟುಂಬದ ಸದಸ್ಯರು ನಡಕೊಂಡ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ. ಅವರ ನಡಾವಳಿಕೆ ನೋಡಿದರೆ ಅವರು ದುಃಖಿತರಾಗಿಲ್ಲ, ಬದಲಾಗಿ ಸಂದರ್ಭದ ಕ್ರೂರ ಮನರಂಜನೆಯಲ್ಲಿ ಪಾಲುಗೊಳ್ಳಲು ಉತ್ಸುಕರಾಗಿದ್ದಾರೆಂದೇ ತಿಳಿಯಬೇಕಾಗುತ್ತದೆ. ಗಣಪತಿಯವರ ತಂದೆ ಪೊಲೀಸರ ಮುಂದೆ ಮೊದಲು ನೀಡಿದ ಹೇಳಿಕೆಯನ್ನೇ ನಿರಾಕರಿಸುತ್ತಾರೆ. ಇವರ ಸಹೋದರ ಇದು ಆತ್ಮಹತ್ಯೆಯಲ್ಲ, ಕೊಲೆ ಎಂದು ಬಣ್ಣಿಸುವಲ್ಲಿಯವರೆಗೆ ಮುಂದುವರೆದಿದ್ದಾರೆ.

ವಿರೋಧ ಪಕ್ಷದ ಧುರೀಣರ ಆದೇಶವನ್ನು ಶಿರಸಾವಹಿಸಿ, ಸಿ.ಐ.ಡಿ. ತನಿಖೆ ನಡೆಯುತ್ತಿರುವಾಗಲೇ ಇಲ್ಲಸಲ್ಲದ ಆರೋಪ ಹೊರಿಸಿ, ಕುಶಾಲನಗರ ಪೊಲೀಸರ ಮುಂದೆ ದೂರು ಸಲ್ಲಿಸುತ್ತಾರೆ. ಇದೆಲ್ಲ ಏನನ್ನು ಸೂಚಿಸುತ್ತದೆ? ಕುಟುಂಬದ ಬಹುಮುಖ್ಯ ಸದಸ್ಯನೊಬ್ಬನ ಆತ್ಮಹತ್ಯೆಯಿಂದ ದುಃಖಕ್ಕೊಳಗಾಗಿರುವ ಕುಟುಂಬದ ಸದಸ್ಯರು ನಡೆದುಕೊಳ್ಳುವ ರೀತಿ ಇದು ಖಂಡಿತಾ ಅಲ್ಲ, ಇವರು ವಿರೋಧ ಪಕ್ಷದವರ ಆಣತಿಯಂತೆ ಕಾರ್ಯ ನಿರ್ವಹಿಸುತ್ತಿದ್ದಾರೆಂಬುದು ಗಣಪತಿ ಕುಟುಂಬದವರ ನಡಾವಳಿಕೆಯನ್ನು ಗಮನಿಸಿದಾಗ ಅನುಮಾನ ಹುಟ್ಟು ಹಾಕುತ್ತದೆ.

ಆತ್ಮಹತ್ಯೆ ಕಾನೂನಿನ ಅಡಿಯಲ್ಲಿ ಅಪರಾಧ. ಆತ್ಮಹತ್ಯೆಯ ಪ್ರವೃತ್ತಿ ಒಂದು ಮನೋವ್ಯಾಧಿ. ಆತ್ಮಹತ್ಯೆಯನ್ನು ಖಂಡಿಸುವುದು ಬಿಟ್ಟು, ಅದನ್ನು ವೈಭವೀಕರಿಸಿ, ಆತ್ಮಹತ್ಯೆ ಮಾಡಿಕೊಂಡಿರುವವರನ್ನು ಹೀರೋ ಮಾಡುತ್ತಾ ಹೊರಟಿರುವುದು ಮತ್ತಷ್ಟು ಆತ್ಮಹತ್ಯೆಗೆ ಪ್ರಚೋದನೆ ನೀಡುತ್ತದೆ ಎಂಬ ಎಚ್ಚರಿಕೆ ಆತ್ಮಹತ್ಯೆಯನ್ನು ವೈಭವೀಕರಿಸುವವರಿಗೆ ಇರಬೇಕು. ಯಾರೂ ಕೂಡ ಹೊಣೆಗೇಡಿತನದಿಂದ ನಡೆದುಕೊಳ್ಳಬಾರದು. ಪ್ರತಿಯೊಂದು ಆತ್ಮಹತ್ಯೆಗೂ ಕಾರಣಗಳಿರುತ್ತವೆ. ಆದರೆ ಯಾವ ಕಾರಣವೂ ಆತ್ಮಹತ್ಯೆಯನ್ನು ಸಮರ್ಥಿಸಲಾಗದು. ಗಣಪತಿಯವರ ಆತ್ಮಹತ್ಯೆಗೆ ನೀಡಲಾಗಿರುವ ಕಾರಣ ಮೇಲಧಿಕಾರಿಗಳ ಕಿರುಕುಳ. ಪೊಲೀಸ್ ಇಲಾಖೆಯಲ್ಲಿ ಗಣಪತಿ ಅಲಂಕರಿಸಿದ್ದು ಡಿವೈಎಸ್‌ಪಿಯಂತಹ ಉನ್ನತ ಹುದ್ದೆ. ಅಂತಹ ಹುದ್ದೆಯಲ್ಲಿರುವವರು ಮೇಲಧಿಕಾರಿಗಳ ಕಿರುಕುಳದ ಕಾರಣವೊಡ್ಡಿ, ಆತ್ಮಹತ್ಯೆ ಮಾಡಿಕೊಂಡರೆ ಅಂತಹವರು ಆ ಹುದ್ದೆಯನ್ನು ಅಲಂಕರಿಸುವುದಕ್ಕೆ ಅರ್ಹರಲ್ಲವೆಂದೇ ಹೇಳಬೇಕು. ಆತ್ಮಹತ್ಯೆಯನ್ನು ವೈಭವೀಕರಿಸಿ, ಅಂತಹವರನ್ನು ಹೀರೋ ಮಾಡುವುದಲ್ಲ. ಆತ್ಮಹತ್ಯೆ ಎಂಬುದು ಭಯಂಕರ ದುರ್ಘಟನೆ. ಅದು ಆಘಾತಕಾರಿ ಪಿಡುಗು. ಅಂತಹದ್ದನ್ನು ತಡೆಗಟ್ಟುವ ಮಾರ್ಗೋಪಾಯಗಳ ಹುಡುಕಾಟ ನಡೆಸಬೇಕೇ ವಿನಹ, ಅದನ್ನು ವೈಭವೀಕರಿಸಿ, ಆತ್ಮಹತ್ಯೆ ಮಾಡಿಕೊಂಡವನನ್ನು ಹೀರೋ ಮಾಡುವುದಲ್ಲ. ಇಲ್ಲಿ ಹಾಲಿ ಚರ್ಚೆಯಲ್ಲಿರುವ ಆತ್ಮಹತ್ಯೆಯನ್ನೇ ತೆಗೆದುಕೊಳ್ಳೋಣ. ಗಣಪತಿಯವರು ಆತ್ಮಹತ್ಯೆ ಮಾಡಿಕೊಂಡದ್ದು ಮೇಲಧಿಕಾರಿಗಳ ಕಿರುಕುಳದಿಂದ. ಕಿರುಕುಳದ ಸ್ವರೂಪ ಸುಳ್ಳು ಕೇಸು ದಾಖಲಿಸಿ, ಒಳ್ಳೆಯ ಸ್ಥಳದಲ್ಲಿ ಕರ್ತವ್ಯಕ್ಕೆ ಅವಕಾಶ ನೀಡದಿದ್ದದ್ದು ಮತ್ತು ಬಡ್ತಿ ನೀಡದಿದ್ದದ್ದು.

ಇವೆಲ್ಲವೂ ನಡೆದದ್ದು ಆತ್ಮಹತ್ಯೆ ಮಾಡಿಕೊಂಡ ಗಣಪತಿಯವರ ಹೇಳಿಕೆಯ ಪ್ರಕಾರ 2014ರಲ್ಲಿ. ಆಗ ಗೃಹಮಂತ್ರಿಯಾಗಿದ್ದವರು ಮಾನ್ಯ ಕೆ.ಜೆ.ಜಾರ್ಜ್‌ರವರು. ಆತ್ಮಹತ್ಯೆ ಮಾಡಿಕೊಂಡದ್ದು 2016ರ ಜುಲೈ ತಿಂಗಳಿನಲ್ಲಿ, ಕಿರುಕುಳಕ್ಕೊಳಗಾದ 2 ವರ್ಷಗಳ ನಂತರ. ಅದೂ ಕೂಡ ಬಡ್ತಿ ದೊರೆತು ಅವರಿಗೆ ಇಷ್ಟವಾದ ಸ್ಥಳವಾದ ಮತ್ತು ಅವರ ಕುಟುಂಬದವರು ವಾಸಿಸುತ್ತಿರುವ ಮಂಗಳೂರಿನಲ್ಲಿ ಕರ್ತವ್ಯಕ್ಕೆ ಹಾಜರಾಗಿ ಮೂರು ತಿಂಗಳ ನಂತರ. ಈಗ ಕೆ.ಜೆ.ಜಾರ್ಜ್ ಗೃಹಮಂತ್ರಿ ಕೂಡ ಅಲ್ಲ. ಹೀಗೆ ಎರಡು ವರ್ಷದ ಹಿಂದೆ ಅನುಭವಿಸಬೇಕಾಯಿತು ಎಂಬ ಕಿರುಕುಳಕ್ಕೆ ಯಾವನೇ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವುದಾದರೆ, ಆತ ಮಾನಸಿಕ ರೋಗಿಯಾಗಿದ್ದ ಎನ್ನುವುದಕ್ಕೆ ಬೇರೆ ಆಧಾರಗಳು ಬೇಕಾಗಿಲ್ಲ.

ಹೀಗಿರುವಲ್ಲಿ ಎಫ್‌ಐಆರ್ ದಾಖಲಿಸಬೇಕು, ಸಿಬಿಐ ತನಿಖೆಯಾಗಬೇಕು ಎಂದೆಲ್ಲಾ ಅರಚಾಡುತ್ತಿರುವವರ ಬಗ್ಗೆ ಏನೆನ್ನಬೇಕು? ಇಂತಹವರನ್ನೆಲ್ಲಾ ಸಮಾಜದ್ರೋಹಿಗಳು ಎಂದು ಬಣ್ಣಿಸುವುದಕ್ಕೆ ಹಿಂಜರಿಯಬೇಕೇ? ಪ್ರಕರಣದ ಒಂದು ಮುಖ್ಯ ಭಾಗವನ್ನು ಮುಚ್ಚಿಟ್ಟು, ತಮ್ಮ ಕಾರ್ಯಸೂಚಿಗೆ ಅನುಕೂಲವಾದ ಅಂಶಗಳನ್ನೇ ತೆಗೆದುಕೊಂಡು, ಸರಕಾರ ಇಕ್ಕಟ್ಟಿಗೆ ಸಿಲುಕಿಸಿ, ಮಜಾ ಉಡಾಯಿಸುವುದೇ ತನ್ನ ಗುರಿ ಎನ್ನುವ ಬಗ್ಗೆ ಹೇಸಿಗೆ ಹುಟ್ಟುತ್ತದೆ. ಇಲ್ಲಿ ಜನಸಾಮಾನ್ಯರ ದಿಕ್ಕು ತಪ್ಪಿಸುವ ದುರುದ್ದೇಶವೂ ಇದೆ.


ಪ್ರತಿಯೊಂದು ಆತ್ಮಹತ್ಯೆ ಪ್ರಕರಣದಲ್ಲಿಯೂ ಕಾನೂನುಪ್ರಕಾರ ನಡೆಯಲೇಬೇಕಾದ ತನಿಖೆ ನಡೆಯುತ್ತದೆ. ತನಿಖೆಯ ಫಲಿತಾಂಶದ ಆಧಾರದ ಮೇಲೆ ಮುಂದಿನ ಕ್ರಮ ಜರುಗಿಸಲಾಗುತ್ತದೆ. ಇಂತಹ ತನಿಖೆಯಲ್ಲಿ ಯಾರೂ ಮೂಗು ತೂರಿಸುವುದಿಲ್ಲ, ಮೂಗು ತೂರಿಸಲೂಬಾರದು. ಇಂತಹ ತನಿಖೆ ನಡೆಯುತ್ತಿದ್ದಾಗಲೇ ತಾವೇ ತೀರ್ಪು ನೀಡುತ್ತಾ ಇಡೀ ಪ್ರಕರಣವನ್ನು ತಮ್ಮ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲು ಅರಚಾಡುತ್ತಿರುವವರು ಆತ್ಮಹತ್ಯೆ ಮಾಡಿಕೊಂಡ ಗಣಪತಿಯವರ ಹಿತಚಿಂತಕರಾಗಿರುತ್ತಾರಾ? ಆತ್ಮಹತ್ಯೆಯಂತಹ ದುಃಖದ ಪ್ರಸಂಗ ನಡೆದಿರುವಾಗ, ಈ ಬಗ್ಗೆ ಕಿಂಚಿತ್ತೂ ನೋವಿಲ್ಲದೆ, ಪ್ರಸಂಗವನ್ನು ತಮ್ಮ ಕ್ಷುಲ್ಲಕ ರಾಜಕಾರಣಕ್ಕೆ ಬಳಸಿಕೊಂಡಿರುವ ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಯಾಗಿ, ಗಣಪತಿ ಕುಟುಂಬದವರು ನಡೆದುಕೊಂಡದ್ದು ಮಾತ್ರ ಹೇಸಿಗೆ ಹುಟ್ಟಿಸುತ್ತದೆ. ಇದರಿಂದ ಆತ್ಮಹತ್ಯೆ ಮಾಡಿಕೊಂಡವರ, ಅವರ ಕುಟುಂಬದ, ಅವರ ಜನಾಂಗದ ಅಂದರೆ ಕೊಡವರ ಮಾನ, ಮರ್ಯಾದೆ ಬೀದಿಯಲ್ಲಿ ಹರಾಜಾಗುತ್ತದೆ ಎಂಬುದರ ಅರಿವು ಅವರಿಗೆ ಇದ್ದಂತೆ ಇಲ್ಲ.

ಇಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು. ಅದೆಂದರೆ ಗಣಪತಿಯವರಿಗೆ ಕೋಮು ಶಕ್ತಿಯಾದ ಸಂಘ ಪರಿವಾರದೊಡನೆಗಿದ್ದ ಸಂಪರ್ಕ. ಪೊಲೀಸ್ ಇಲಾಖೆಯಲ್ಲಿ ಕೇಸರೀಕರಣಗೊಂಡಿರುವ ಅಧಿಕಾರಿಗಳಲ್ಲಿ ಒಬ್ಬರಾಗಿದ್ದರು. ಅವರು ಬಿಜೆಪಿ ಸರಕಾರವಿದ್ದಾಗ ಬಜರಂಗದಳ, ಹಿಂದೂ ಜಾಗರಣಾ ವೇದಿಕೆ ಮುಂತಾದ ಫ್ಯಾಸಿಸ್ಟ್ ಶಕ್ತಿಗಳ ಆಜ್ಞಾನುವರ್ತಿಯಾಗಿದ್ದರ ಆಧಾರಗಳಿವೆ. ಅವರೀಗ ಆತ್ಮಹತ್ಯೆಗೆ ಬಲಿಯಾಗಿದ್ದಾರೆ. ದೇವಪಂಡ ಕುಟ್ಟಪ್ಪ ಎಂಬ ಇನ್ನೊಬ್ಬ ಕೋಮುವಾದಿ ಕೊಡವ ಟಿಪ್ಪು ಜಯಂತಿ ಸಂದರ್ಭದಲ್ಲಿ ಪ್ರತಿಭಟನೆಯ ನೆಪದಲ್ಲಿ, ಶಾಂತಿ ಕೆಡಿಸಲು ಹೋಗಿ ತಾನೇ ಸಾಯಬೇಕಾಯಿತು. ಹೀಗೆ ಕೋಮುವಾದಿಗಳ ಮುಷ್ಟಿಯಲ್ಲಿ ಸಿಕ್ಕಿದ ಕೊಡವರು ಒಬ್ಬೊಬ್ಬರಾಗಿ ಬಲಿಯಾಗುತ್ತಿದ್ದಾರೆ. ಇದು ಕೊಡವರ ಕಣ್ಣನ್ನು ಈಗಲಾದರೂ ತೆರೆಸದಿದ್ದಲ್ಲಿ ಮುಂದೆ ಅಪಾಯ ತಪ್ಪಿದ್ದಲ್ಲ. ಆತ್ಮಹತ್ಯೆ ಮಾಡಿಕೊಂಡ ಇನ್ನೊಬ್ಬ ಡಿವೈಎಸ್‌ಪಿ ಕಲ್ಲಪ್ಪ ಹಂಡಿಭಾಗ್ ಕೂಡ ಬಜರಂಗಿಗಳ ನಿಕಟವರ್ತಿಯೇ ಆಗಿದ್ದ. ಹಾಗೆಯೇ ರಾಜೀನಾಮೆ ನೀಡಿದ ಡಿವೈಎಸ್‌ಪಿ ಅನುಪಮಾ ಶೆಣೈ ಕೂಡ ಸಂಘ ಪರಿವಾರಕ್ಕೆ ಸೇರಿದವರೇ ಎಂಬುದು ಈಗ ಬಯಲಾಗುತ್ತಿದೆ. ಆತ್ಮಹತ್ಯೆಯಂತಹ ಘೋರ ಮರಣವನ್ನು ಕ್ಷುಲ್ಲಕ ರಾಜಕೀಯಕ್ಕೆ ಬಳಸಿಕೊಂಡು ಮಜಾ ಉಡಾಯಿಸುತ್ತಿರುವ ಶಕ್ತಿಗಳಿಗೆ ಹಾಗೂ ಅಂತಹವರ ಮುಖವಾಣಿಯಾಗಿ, ವಾಸ್ತವಾಂಶವನ್ನು ಮರೆಮಾಚಿ, ಜನರ ದಾರಿ ತಪ್ಪಿಸಲು ಹೆಣಗಾಡುತ್ತಿರುವ ಮಾಧ್ಯಮಗಳಿಗೆ ಧಿಕ್ಕಾರವಿರಲಿ.

ಯಾರೂ ಕೂಡ ಯಾವುದೇ ಕಾರಣಕ್ಕೂ ಆತ್ಮಹತ್ಯೆ ಮಾಡಿಕೊಳ್ಳಬಾರದು. ಆತ್ಮಹತ್ಯೆ ಖಂಡನೀಯ ಮತ್ತು ಅಸಮರ್ಥನೀಯ ಎಂದು ನಾನು ಈ ಸಂದರ್ಭದಲ್ಲಿ ಸಮಾಜಕ್ಕೆ ನೀಡುತ್ತಿರುವ ಸಂದೇಶವಾಗಿದೆ.

■ ಎ.ಕೆ.ಸುಬ್ಬಯ್ಯ

ಸುಬ್ಬಯ್ಯ ವಿರುದ್ಧ ಚೆಡ್ಡಿ ಮಾಣಿಗಳು



ಕರ್ನಾಟಕದಲ್ಲಿ ಬಿಜೆಪಿಯ ಒಡಕು, ಯಡಿಯೂರಪ್ಪ-ಶೋಭಾ ಜೋಡಿಯ ದಬ್ಬಾಳಿಕೆ ಮುಚ್ಚಿಹಾಕಲು ಸಹಕಾರ ನೀಡಿದ್ದು ಡಿವೈಎಸ್‌ಪಿ ಗಣಪತಿಯ ಆತ್ಮಹತ್ಯೆ. ಬಿಜೆಪಿಯವರ ಈ ಸ್ಥಿತಿಗೆ ಮರುಗುತ್ತಿದ್ದವರು ಬಿಜೆಪಿಯವರಲ್ಲ, ಚೆಡ್ಡಿ ಪತ್ರಕರ್ತರು. ಮುಂದೇನಾದರೂ ಬಿಜೆಪಿ ಸರಕಾರ ಬರುವುದಿದ್ದರೆ, ಅವರ ಆಂತರಿಕ ಜಗಳದಿಂದ ತಾವು ನಷ್ಟ ಅನುಭವಿಸಬೇಕಾಗುತ್ತದೆಂಬ ಆತಂಕ ಈ ಚೆಡ್ಡಿ ಪತ್ರಕರ್ತರದ್ದು. ಕರ್ನಾಟಕದಲ್ಲಿ ಬಿಜೆಪಿಯಿಂದ ಹೆಚ್ಚು ಲಾಭ ಪಡೆಯುವ ತಂಡ ಭಟ್ಟರ ತಂಡ. ಪ್ರತಾಪ ಸಿಂಹ ಎಂಬ ಗುಳ್ಳೆನರಿಯ ಗುರುದಕ್ಷಿಣೆಯ ಸಹಕಾರದಿಂದ ವಿದೇಶ ಪ್ರವಾಸವೂ ಸೇರಿ ಹಲವು ಲಾಭ ಪಡೆದಿರುವ ಭಟ್ಟರ ತಂಡಕ್ಕೆ ಋಣ ತೀರಿಸಲು ಸಿಗುವ ಅವಕಾಶಗಳು ದೊರೆತಾಗ ಋಣಮುಕ್ತರಾಗಲು ಪ್ರಯತ್ನಿಸುತ್ತದೆ.

ಭಟ್ಟರ ತಂಡ-ಸಂಘ ಪರಿವಾರ ಹಾಗೂ ಅದರ ಸಖ್ಯದಲ್ಲಿರುವವರಿಗೆ ಡಿವೈಎಸ್‌ಪಿ ಗಣಪತಿಯ ಆತ್ಮಹತ್ಯೆ ರಸಕವಳ. ಸಿದ್ದರಾಮಯ್ಯ ಸರಕಾರ ಭಟ್ಟರ ಪರವಾಗಿ ಕಾರ್ಯ ನಿರ್ವಹಿಸದೇ ಅಹಿಂದ ಪರವಾಗಿ ಅನುಕಂಪ ತೋರಿ ಕೆಲಸ ಮಾಡುತ್ತಿರುವುದು ಪತ್ರಕರ್ತ ಮಾಣಿಗಳಿಗೆ ಸಹಿಸಲು ಸಾಧ್ಯವಿಲ್ಲದ ವಿಚಾರ. ನೂರಾರು ವರ್ಷಗಳ ಕಾಲದ ತಮ್ಮ ಹಿಡಿತ ತಪ್ಪಿಹೋಗುತ್ತಿರುವ ಆತಂಕ. ಸಿದ್ದರಾಮಯ್ಯ ಸರಕಾರ ಇದ್ದಷ್ಟೂ ಕಾಲ ತಮ್ಮ ಆಟಗಳಿಗೆ ಕಡಿವಾಣ ಇರುತ್ತದೆ ಎಂಬ ಕಾರಣಕ್ಕೆ ಸಿದ್ದರಾಮಯ್ಯ ಸರಕಾರಕ್ಕೆ ಸಂಚಕಾರ ತರಲು ಸಿಕ್ಕಿದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಲು ಪ್ರಯತ್ನ ಮಾಡುತ್ತಲೇ ಇರುತ್ತದೆ ಅಥವ ಷಡ್ಯಂತ್ರವನ್ನು ರೂಪಿಸುತ್ತಲೇ ಇರುತ್ತದೆ.

ಗಣಪತಿಯ ಆತ್ಮಹತ್ಯೆಯನ್ನು ಸಿದ್ದರಾಮಯ್ಯ ಸರಕಾರದ ವಿರುದ್ಧ ಹೆಣೆಯಲು ಚೆಡ್ಡಿಗಳು ನಡೆಸಿದ ಷಡ್ಯಂತ್ರಕ್ಕೆ ಪೂರ್ಣ ಸಹಕಾರ ನೀಡಲು ಸಜ್ಜಾಗಿ ನಿಂತಿದ್ದು ಈ ಘಟನೆಯನ್ನು ವ್ಯವಸ್ಥಿತವಾಗಿ ಅಪಪ್ರಚಾರ ಮಾಡಲು ಪೂರ್ಣ ಸಿದ್ಧತೆಯಲ್ಲಿ ತುದಿಗಾಲಿನಲ್ಲಿ ನಿಂತಿದ್ದ ಮಾಣಿಗಳು. ವಿರೋಧ ಪಕ್ಷಗಳು ರಂಗಕ್ಕೆ ಇಳಿಯುವ ಮುನ್ನವೇ ಸಚಿವ ಜಾರ್ಜ್ ರಾಜೀನಾಮೆ ನೀಡಬೇಕು, ಹಿರಿಯ ಪೊಲೀಸ್ ಅಧಿಕಾರಿಗಳಾದ ಪ್ರಣಬ್ ಮೊಹಂತಿ ಹಾಗೂ ಪ್ರಸಾದ್‌ರವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂಬ ಅಭಿಯಾನವನ್ನು ಆರಂಭಿಸಿದರು. ಟಿವಿಗಳಂತೂ ತಾವೇ ಪ್ರತ್ಯಕ್ಷದರ್ಶಿಗಳು, ತಾವೇ ಸಾಕ್ಷಿಗಳು ಎನ್ನುವಂತೆ ತೀರ್ಪು ನೀಡತೊಡಗಿದವು. ಗಣಪತಿಯ ಹೇಳಿಕೆಯ ಸತ್ಯಾಸತ್ಯತೆಯನ್ನು ತಿಳಿಯುವ ಪ್ರಯತ್ನವನ್ನೂ ಟಿವಿ ಚಾನೆಲ್‌ಗಳು ಮಾಡಲಿಲ್ಲ, ಅವರ ಆರೋಪದಲ್ಲಿ ಹುರುಳು ಇದೆಯೋ ಎಂಬುದನ್ನೂ ಪರಿಶೀಲಿಸಲಿಲ್ಲ, ಅವರ ಇತಿಹಾಸವೇನು ಎಂಬುದನ್ನೂ ತಿಳಿಯುವ ಯತ್ನವನ್ನೂ ಮಾಡಲಿಲ್ಲ, ಗಣಪತಿ ಒಬ್ಬ ದಕ್ಷ ಅಧಿಕಾರಿ ಎಂಬ ಸರ್ಟಿಫಿಕೇಟ್ ಕೂಡ ನೀಡಿ ಹುತಾತ್ಮರ ಪಟ್ಟಿಗೆ ಏರಿಸಿಬಿಟ್ಟರು.

ಟಿವಿಗಳಂತೂ ಈ ಘಟನೆಯ ವಿಶ್ಲೇಷಣೆಯನ್ನು ನಡೆಸಿ ನೇಣಿಗೆ ಸಿದ್ದು ಸರ್ಕಾರವನ್ನು ಏರಿಸಲು ಎಲ್ಲಾ ಸಿದ್ಧತೆಯನ್ನು ಮಾಡಿಕೊಂಡಿದ್ದವು. ಯಾವುದೇ ಮಾಧ್ಯಮ ಭಿನ್ನ ಧ್ವನಿಯಲ್ಲಿ ಮಾತನಾಡಲಿಲ್ಲ, ಸಂಘ ಪರಿವಾರದ ಪರವಾಗಿ ಇರುವ ಪತ್ರಿಕೆಗಳೂ ಇದೇ ಧಾಟಿಯಲ್ಲಿ ಬರೆದವು. ಭಿನ್ನ ಧ್ವನಿ ಬಾರದಂತೆ, ಬಂದರೂ ಪ್ರಕಟವಾಗದಂತೆ ನೋಡಿಕೊಂಡರು. ಈ ವಿಚಾರದಲ್ಲಿ ಮಾತನಾಡಬೇಕಾಗಿದ್ದ ಕಾಂಗ್ರೆಸಿಗರು ಮಾತನಾಡಲಿಲ್ಲ, ಎಲ್ಲಿಯೋ ಒಂದೋ ಎರಡು ಕ್ಷೀಣಧ್ವನಿಗಳು ಕೇಳಿಬಂದರೂ ಸ್ಪಷ್ಟತೆ ಇರಲಿಲ್ಲ, ಕೆಲವರು ಅಡ್ಡಗೋಡೆಯ ಮೇಲೆ ದೀಪ ಇಟ್ಟು ಮಾತನಾಡಿದರು. ಹಾಗಾಗಿ ಮಾಧ್ಯಮಗಳು ಹೇಳಿದ್ದೇ ಸತ್ಯ ಎಂಬಂತಾಯಿತು. ಯಾವುದೇ ವಿಚಾರಣೆ ಇಲ್ಲದೇ ತೀರ್ಪು ನೀಡಿಯಾಗಿತ್ತು, ತಾವು ನೀಡಿದ ತೀರ್ಪನ್ನು ಜಾರಿಗೊಳಿಸಬೇಕು ಎಂದು ಮಾಧ್ಯಮಗಳು ಬಾಯಿ ಬಡಿದುಕೊಳ್ಳಲಾರಂಭಿಸಿದಾಗ ಭಿನ್ನ ಧ್ವನಿ ಕೇಳಿಬಂತು. ಅದೂ ಎ.ಕೆ.ಸುಬ್ಬಯ್ಯನವರಿಂದ. ಬೇರೆಯವರ ಧ್ವನಿಯಾಗಿದ್ದರೆ ವ್ಯವಸ್ಥಿತವಾಗಿ ಹೂತು ಹಾಕುತ್ತಿದ್ದರು. ಸುಬ್ಬಯ್ಯನವರ ಧ್ವನಿ ಮಟ್ಟ ಹಾಕುವುದು ಅಷ್ಟು ಸುಲಭವಲ್ಲ ಎಂಬ ಅರಿವು ಇರುವುದರಿಂದ ಅವರ ಹೇಳಿಕೆಯನ್ನು ಪ್ರಕಟಿಸಿದರು.

ಭಿನ್ನ ಧ್ವನಿ ಬಾರದಿದ್ದಾಗ ಸುಬ್ಬಯ್ಯನವರ ಈ ಧ್ವನಿ ತಮ್ಮ ಯೋಜನೆಗಳಿಗೆ ಅಡ್ಡಿ ಎಂಬ ಅರಿವು ಚೆಡ್ಡಿ ಪತ್ರಕರ್ತರಿಗೆ ಇತ್ತು, ಹಾಗಾಗಿ ಪೂರ್ವಯೋಜಿತವಾಗಿ ಹೇಗೆ ಪ್ರತಿಕ್ರಿಯಿಸಬೇಕು ಎಂಬ ಸಿದ್ಧತೆಗಳೊಂದಿಗೆ ಸುಬ್ಬಯ್ಯನವರ ಹೇಳಿಕೆಗಳನ್ನು ಪತ್ರಿಕೆಗಳು ಮತ್ತು ದೃಶ್ಯ ಮಾಧ್ಯಮಗಳು ಪ್ರಕಟಿಸಿದವು.

ಗಣಪತಿ ಆತ್ಮಹತ್ಯೆಯ ಬಗ್ಗೆ ಅವರ ಸೇವಾವಧಿಯಲ್ಲಿ ಆದಂತಹ ವಿಚಾರಗಳ ಬಗ್ಗೆ ಯಾವುದೇ ವಿಷಯಗಳು ಹೊರಬರಬಾರದು. ತಾವು ಹೇಳಿದ್ದೇ ಸತ್ಯ ಎಂದಾಗಬೇಕು ಎಂದು ಬಯಸಿದ್ದವರಿಗೆ ಇದು ನುಂಗಲಾರದ ವಿಚಾರವಾಗಿತ್ತು, ತಮ್ಮ ವಿರುದ್ಧವಾಗಿ ಯಾರೂ ಮಾತನಾಡಬಾರದು ಎಂಬ ಭಾವನೆ ಅವರಲ್ಲಿ ಇತ್ತು, ವಿಮರ್ಶೆಗೆ ಅವರು ಸಿದ್ಧರಿರಲಿಲ್ಲ, ಹಾಗಾಗಿ ಸುಬ್ಬಯ್ಯ ಅವರ ಕಣ್ಣಿಗೆ ವಿಲನ್ ಆಗಿದ್ದರು. ಹೇಗೂ ಸುಬ್ಬಯ್ಯ ಚೆಡ್ಡಿಗಳನ್ನು ನುಸಿಖಾ ಎಂದು ವಿರೋಧಿಸುತ್ತಾರೆ. ಹಾಗಾಗಿ ಅವರ ತೇಜೋವಧೆಯನ್ನು ಮಾಡುವ ಎನ್ನುವ ಕಾರ್ಯಕ್ಕೆ ಮಾಣಿಗಳು ಮತ್ತು ಚೆಡ್ಡಿಗಳು ಕೈಜೋಡಿಸಿದ್ದರು.

ಮಾಣಿಗಳೆಲ್ಲರೂ ಹಿಂದೆ ವಿಜಯ ಕರ್ನಾಟಕದಲ್ಲಿ ಮತ್ತು ಆನಂತರ ಕನ್ನಡ ಪ್ರಭದಲ್ಲಿ ನೆಲೆಯೂರಿದ್ದವರು. ಅವರ ಹೆಡ್‌ಮಾಸ್ಟರ್ ತಮ್ಮ ವಿಳಾಸವನ್ನು ಬದಲು ಮಾಡುತ್ತಿದ್ದಂತೆ ಶಿಷ್ಯಂದಿರೂ ಅದೇ ವಿಳಾಸಕ್ಕೆ ಹೋಗಿ ಸೇರಿಕೊಳ್ಳುತ್ತಿದ್ದರು. ಅಂದರೆ ಅವರಲ್ಲಿ ಹಲವರಿಗೆ ಸ್ವಂತಿಕೆ ಇರಲಿಲ್ಲ ಮತ್ತು ವಿಚಾರಗಳು ಇರಲಿಲ್ಲ, ಹೆಡ್‌ಮಾಸ್ಟರ್ ಆಣತಿಯಂತೆ ಕಾರ್ಯ ನಿರ್ವಹಿಸುವುದಷ್ಟೇ ಅವರ ಗುರಿಯಾಗಿತ್ತು, ಸುಬ್ಬಯ್ಯನವರು ಚೆಡ್ಡಿಗಳ ವಿರುದ್ಧ ಮಾತನಾಡುವಾಗಲೆಲ್ಲಾ ಮೈ ಪರಚಿಕೊಳ್ಳುತ್ತಿದ್ದ ಇವರಿಗೆ, ಸುಬ್ಬಯ್ಯನವರ ಈ ಹೇಳಿಕೆಯಿಂದ ಜನರನ್ನು ಅವರ ವಿರುದ್ಧ ತಿರುಗಿಸಬಹುದೇ ಎಂಬ ದುರಾಲೋಚನೆ ಹೊಕ್ಕಿತ್ತು, ಹಾಗಾಗಿ ಅವರ ಹೇಳಿಕೆಯನ್ನು ಪ್ರಕಟಿಸಿ, ಅದರ ವಿರುದ್ಧ ಬರೆಯಲು ತೊಡಗಿದರು.

ಈ ಹಿಂದೆ ಸುಬ್ಬಯ್ಯನವರಿಗೆ ಗಂಟಲು ಕ್ಯಾನ್ಸರ್ ಆಗಿ ಅವರು ಚಿಕಿತ್ಸೆ ಪಡೆದಿದ್ದರು. ಅದು ಅತ್ಯಂತ ಸೂಕ್ಷ್ಮವಾದ ಶಸ್ತ್ರಚಿಕಿತ್ಸೆಯಾಗಿತ್ತು, ಹಾಗಾಗಿ ಚಿಕಿತ್ಸೆ ನಡೆಸಿದ ವೈದ್ಯರು ಅವರ ಧ್ವನಿಪೆಟ್ಟಿಗೆಗೆ ವಿಶ್ರಾಂತಿ ಬೇಕು ಎಂದು ತಿಳಿಸಿದ್ದರು. ಹಾಗಾಗಿ ಸುಬ್ಬಯ್ಯ ಆ ಅವಧಿಯಲ್ಲಿ ಪೂರ್ಣ ಮೌನಕ್ಕೆ ಶರಣಾಗಿದ್ದರು. ಇದು ಮಾಣಿಗಳಿಗೆ ಮತ್ತು ಚೆಡ್ಡಿಗಳಿಗೆ ಸಂತೋಷದ ವಿಚಾರವಾಗಿತ್ತು,

ವೈಚಾರಿಕ ಧ್ವನಿಯೊಂದು ಅಡಗಿದೆ ಎಂಬುದು ಅವರ ಸಂತೋಷಕ್ಕೆ ಕಾರಣವಾಗಿತ್ತು. ಸುಬ್ಬಯ್ಯನವರಿಗೆ ಕಾಯಂ ಆಗಿ ಮಾತನಾಡಲು ಸಾಧ್ಯವಿಲ್ಲ ಎಂದು ಅವರು ಭಾವಿಸಿದ್ದರು. ಅನಂತಮೂರ್ತಿಯವರ ಸಾವನ್ನು ಸಂಭ್ರಮಿಸಿದ ಇವರುಗಳು, ಸುಬ್ಬಯ್ಯನವರ ವಿಚಾರವನ್ನೂ ಕೂಡ ಸಂಭ್ರಮಿಸಿದರು. ಹಾಗಾಗಿ ಯಾವುದೇ ರೀತಿಯಲ್ಲಿ ವಿಷಯವನ್ನು ಅರಿಯುವ ಗೋಜಿಗೇ ಹೋಗದೆ, ಮಾಣಿ ಪತ್ರಕರ್ತನೊಬ್ಬ ತಮ್ಮ ಸಂತಸವನ್ನು ಹಂಚಿಕೊಳ್ಳಲು ಸುಬ್ಬಯ್ಯನವರ ಬಗ್ಗೆ ಬಹಳ ಅನುಕಂಪ ಇದೆ ಎಂದು ಹೇಳುವ ರೀತಿಯಲ್ಲಿ ಕನ್ನಡ ಪ್ರಭದಲ್ಲಿ 'ವಾಗ್ದೇವಿ ಮುನಿದಳೇ' ಎಂಬ ಲೇಖನವನ್ನು ಬರೆದು, ಸುಬ್ಬಯ್ಯನವರಿಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ, ಸುಬ್ಬಯ್ಯನವರ ಬಂಡವಾಳವೇ ಮಾತುಗಾರಿಕೆ, ಅದನ್ನು ವಾಗ್ದೇವಿ ಸೆಳೆದುಕೊಂಡಿದ್ದಾಳೆ. ಆಕೆ ಮುನಿದಿದ್ದಾಳೆ ಎಂದೆಲ್ಲಾ ಬರೆದು ಸಂಭ್ರಮಿಸಿದ್ದರು.

ಸುಬ್ಬಯ್ಯನವರು ಯಾವುದೇ ಪ್ರತಿಕ್ರಿಯೆಯನ್ನು ನೀಡದೆ ತಮ್ಮ ಮೌನವ್ರತವನ್ನು ಮುಂದುವರಿಸಿದ್ದರು.

ಮಾಣಿಗಳ ಮತ್ತು ಚೆಡ್ಡಿಗಳ ದುರಾದೃಷ್ಟಕ್ಕೆ, ಸುಬ್ಬಯ್ಯನವರ ಚಿಕಿತ್ಸೆಯ ಅವಧಿ ಮುಗಿದನಂತರ ಅವರು



ಮಾತನಾಡತೊಡಗಿದರು. ಮತ್ತಷ್ಟು ಶಕ್ತಿಶಾಲಿಯಾಗಿ ಸಂಘ ಪರಿವಾರವನ್ನು ಮತ್ತು ಸಮಾಜದ ಅನಿಷ್ಟವನ್ ಟೀಕಿಸತೊಡಗಿದರು. ಇವರುಗಳ ಕುತಂತ್ರವನ್ ಬಯಲಿಗೆಳೆಯುತ್ತಿದ್ದರು. ಇದು ಸಂಘ ಪರಿವಾರದವರು ಮತ್ತು ಮಾಣಿಗಳು ಅಂದಾಜಿಸಿರಲಿಲ್ಲ, ಹಾಗಾ ಸುಬ್ಬಯ್ಯನವರ ವಿರುದ್ಧ ಷಡ್ಯಂತ್ರ ಮಾಡಲು ಸಮಯಕ್ಕಾ ಕಾಯುತ್ತಿದ್ದರು.

ಸುಬ್ಬಯ್ಯನವರು ಗಣಪತಿ ಆತ್ಮಹತ್ಯೆಯ ವಿಚಾರದಲ ಕೆಲವರು ಉನ್ಮಾದದಿಂದ ನೀಡುತ್ತಿರುವ ಹೇಳಿಕೆಯನ್ ಗಮನಿಸಿ, ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು ರಾಜಕಾರಣಿಗಳು ಸಾವಿನ ಮನೆಯಲ್ಲಿಯೂ ರಾಜಕೀಯವನ್ ಮಾಡುತ್ತಿದ್ದಾರೆ. ಕುಮಾರಸ್ವಾಮಿ ಅವರ ಮನೆಗೆ ತೆರಳ ವವರೆಗೆ ಇದ್ದ ದೃಶ್ಯ ಬೇರೆ. ಈಗ ದೃಶ್ಯವು ಬದಲಾಗಿದ ಅವರ ಪತ್ನಿಯ ಹೇಳಿಕೆಗಳನ್ನು ಗಮನಿಸಿದರೆ ಅವ ಮುಖದಲ್ಲಿ ದುಃಖದ ಛಾಯೆ ಇರುವಂತೆ ಇಲ್ಲ ಎಂಬ ವಿಚಾರವನ್ನು ಅವರು ಹೇಳಿದ್ದರು.

ಇದಕ್ಕೆ ಕಾರಣ ಯಾವುದೇ ಒಂದು ಸಾವು ನಡೆದಾ ಆ ಸಂದರ್ಭದಲ್ಲಿ ಆ ಕುಟುಂಬ ದುಃಖದಿಂದ ಮೌನಕ ಶರಣಾಗುತ್ತಾರೆ. ಮತ್ತು ದೀಕ್ಷೆಯ ಅವಧಿಯಲ್ಲಿ ಅಂದರ ತಿಥಿ ಕರ್ಮಾಂತರಗಳು ಮುಗಿಯುವರೆಗೆ ಸಾಧಾರಣವಾಗಿ ಯಾವುದೇ ಪ್ರತಿಕ್ರಿಯೆಯನ್ನು ನೀಡುವುದಿಲ್ಲ, ಆದರೆ ಅವ ಪತ್ನಿ ಮತ್ತು ಕುಟುಂಬ ವರ್ಗದವರು ನಿರಂತರವಾಗಿ ಹೇಳಿಕೆಗಳನ್ನು ನೀಡುತ್ತಿದ್ದರು. ಇದಕ್ಕಾಗಿ ಸುಬ್ಬಯ್ಯನವರು ಈ ಮಾತುಗಳನ್ನು ಹೇಳಿದ್ದರು.

ಇದನ್ನು ಕೈಗೆತ್ತಿಕೊಂಡು ಅದೇ ಮಾಣಿ ಪತ್ರಕರ್ತ ಸುಬ್ಬಯ್ಯನವರು ವಿಧವೆಯೊಬ್ಬರನ್ನು ಅವಮಾನಿಸಿದ್ದಾರೆ ಮಹಿಳಾ ಆಯೋಗ ಸುಬ್ಬಯ್ಯನವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂಬ ಅಪ್ಪಣೆಯನ್ನು ಹೊರಡಿಸಿದ್ದಾನೆ ಸುಬ್ಬಯ್ಯನವರು ಈ ರೀತಿ ಹೇಳಿಕೆ ನೀಡಲು ಕಾರಣ ಅವರ ಪುತ್ರ ಎ.ಎಸ್. ಪೊನ್ನಣ್ಣ ಈಗ ಹೆಚ್ಚುವರಿ

ಚೆಡ್ಡಿ ಗಣಪತಿಗೆ ಆತ್ಮಹತ್ಯೆಯೇ ಅಂತಿಮ ಆಯ್ಕೆ...

05 ◀◀

ಬುದ್ಧಿಪೂರ್ವಕವಾಗೇ ಧಿಕ್ಕರಿಸಿಬಿಟ್ಟಿದ್ದರು. ಯಾವಾಗ ಮಂಗಳೂರಿಂದ ಬೆಂಗಳೂರಿಗೆ ವರ್ಗವಾಯ್ತೋ ಆಗ ಆತನ ಗ್ರಹಚಾರ ಕೆಡಲು ಶುರುವಾಯ್ತು, ಆಗ ಗಣಪತಿಗೆ ಆಪ್ತವಾದ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿದ್ದರೂ ಸರಣಿಯಾಗಿ ಮೂರ್‍ನಾಲ್ಕು ಬಾರಿ ಅಮಾನತ್ತಾದರು. ಸ್ವಯಂಕೃಪಾರಾಧ, ದುಡ್ಡಿನ ವ್ಯಾಮೋಹ, ಹೆಂಗಸರ ಖಯಾಲಿಗಳಲ್ಲಿ ಸಿಕ್ಕಿಬಿದ್ದಿದ್ದ ಗಣಪತಿಯನ್ನು ಬಚಾಯಿಸಲು ಆತನ ಗಾಡ್‌ಮದರ್ ಶೋಭಾ ಕರಂದ್ಲಾಜೆಯಿಂದಲೂ ಸಾಧ್ಯವಾಗಲಿಲ್ಲ, ಈಗ ಗಣಪತಿ ಸಾವಿನ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತ ಪೊರಕೆ ರಾಜಕಾರಣದ ದುರ್ಗತಿಗೆ ಇಳಿದಿರುವ ಶೋಭಕ್ಕನಿಗೆ ಆತ ಎಂಥವನೆಂಬುದರ ಸಂಪೂರ್ಣ ಮಾಹಿತಿ ಇದೆ. ಶೋಭಕ್ಕನ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲೇ ಇನ್ಸ್‌ಪೆಕ್ಟರ್ ಆಗಿದ್ದಾಗ ಗಣಪತಿ ಮಾಡಿದ ಭಾನ್ಗಡಿಗಳೇನು ಕಮ್ಮಿಯೇ?!



ಮಂಗಳೂರು ಚರ್ಚ್ ದಾಳಿ ಮಾಡಿದ್ದ ಗಣಪತಿ

ಆರೆಸ್ಸೆಸ್ ಅಡಿಕ್ಟ್ ಆಗಿದ್ದ ಗಣಪತಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಲೇ ಒಂಥರಾ ಹತಾಶರಾಗಿಹೋಗಿದ್ದರು. ಕಲ್ಲಡ್ಕ ಭಟ್ಟ, ಯಡ್ಡಿ, ಶೋಬಕ್ಕನಂಥ ಹುಟ್ಟಾ ಚೆಡ್ಡಿಗಳಿಗೂ ಆಗದಷ್ಟು ಬೇಸರ-ಖಿನ್ನತೆ ಗಣಪತಿಗೆ ಕಾಂಗ್ರೆಸ್ ಆಡಳಿತ ಶುರುವಾದ ದಿನದಿಂದಲೇ ಆರಂಭವಾಗಿತ್ತು. ಒಂಥರಾ ಮೊಂಡು ಸ್ವಭಾವದ ಗಣಪತಿಯ ಕೌಟುಂಬಿಕ ಸಂಬಂಧಗಳೂ ಸರಿಯಿರಲಿಲ್ಲ, ಒಡ ಹುಟ್ಟಿದ ತಮ್ಮ ತಮ್ಮಯ್ಯನೊಂದಿಗೂ ಗಣಪತಿ ಮಾತುಕತೆ ಇರಲಿಲ್ಲವೆಂದು ಆತನ ಹೆಂಡತಿಯೇ ಹೇಳಿದ್ದಾರೆ.

ಪೊಲೀಸ್ ಇಲಾಖೆಯಲ್ಲೇ ನೌಕರಿ ಮಾಡುತ್ತಿರುವ ತಮ್ಮಯ್ಯ ತನಗಿಂತ ಮೊದಲೇ ಡಿವೈಎಸ್‌ಪಿಯಾಗಿ ಭಡ್ತಿ ಪಡೆದಿದ್ದು ಗಣಪತಿಯ ಖಿನ್ನತೆಗೆ ಮತ್ತೊಂದು ಪ್ರಖರ ಆಯಾಮ ನೀಡಿಬಿಟ್ಟಿತ್ತು, ಈಗ ಮಂಗಳೂರಲ್ಲಿ ಹಬ್ಬಿರುವ ಒಂದು ವದಂತಿ ಪ್ರಕಾರ ಚಿಕ್ಕಮಗಳೂರಿನ ಡಿವೈಎಸ್‌ಪಿ ಕಲ್ಲಪ್ಪ ಹಂಡಿಭಾಗ್ ಆತ್ಮಹತ್ಯೆ ನಂತರ ಗಣಪತಿ ದಿಕ್ಕೆಟ್ಟುಹೋಗಿದ್ದರು. ಹಂಡಿಭಾಗ್‌ರನ್ನು ಕ್ರಿಕೆಟ್ ಬೆಟ್ಟಿಂಗ್ ಜಾಲದ ಭಜರಂಗಿಗಳಾದ ಪ್ರವೀಣ್ ಖಾಂಡ್ಯ ಮತ್ತು ನವೀನ್ ಶೆಟ್ಟಿ ದೋಸ್ತಿಯೇ ಆತ್ಮಹತ್ಯೆಗೆ ತಳ್ಳಿತೆಂಬ ಪುಕಾರುಗಳು ಎದ್ದಿದ್ದವು. ದಕ್ಷಿಣ ಕನ್ನಡ ಮೂಲದ ಈ ಖಾಂಡ್ಯ ಹಾಗು ನವೀನ್ ಶೆಟ್ಟಿ ಮಂಗಳೂರಲ್ಲೂ ಬೆಟ್ಟಿಂಗ್ ದಂಧೆ ವಿಸ್ತರಿಸಿಕೊಂಡಿದ್ದರು. ಮಂಗಳೂರಲ್ಲೂ ಕೇಸರೀಕರಣಗೊಂಡಿರುವ ಒಂದಿಬ್ಬರು ಪೊಲೀಸ್ ಅಧಿಕಾರಿಗಳು ಖಾಂಡ್ಯ-ನವೀನ್ ಬೆನ್ನಿಗೆ ನಿಂತು ಪಾಲು ನಿಯಮಿತವಾಗಿ ಪಡೆಯುತ್ತಲೇ ಬಂದಿದ್ದರಂತೆ. ಭಜರಂಗಿಗಳ



ಸಂತೋಷ್ ಬಾಬು

ನಂಟಿನ ಗಣಪತಿ ಡಿವೈಎಸ್‌ಪಿ ಹಂಡಿಭಾಗ್ ಆತ್ಮಹತ್ ಸಿಐಡಿಗೆ ವಹಿಸುತ್ತಲೇ ಮಾನಸಿಕ ಒತ್ತಡಕ್ಕೆ ಸಿಲುಕಿದ್ದರಂತೆ ಈ ಬೆಟ್ಟಿಂಗ್ ಕೇಸಲ್ಲೂ ತಾನು ಸಿಕ್ಕಿಬಿದ್ದರೆ ಎಂಬ ಪಾಪಪ್ರಜ್ಞೆ ಗಣಪತಿಯನ್ನು ಬಾಧಿಸಿತಾ? ಅದು ಆತನನ್ನು ನೇಣಿನ ಕುಣಿಕೆಗೆ ತಂದು ನಿಲ್ಲಿಸಿತಾ?

ಇಂಥದೊಂದು ಗಂಭೀರ ಚರ್ಚೆ ಈಗ ದಕ್ಷಿಣ ಕನ್ನಡ ಹಾಗು ಕೊಡಗಲ್ಲಿ ಜೋರಾಗಿಯೇ ನಡೆಯುತ್ತಿದೆ. ಮತ್ತೊಂದು ಜಿಜ್ಞಾಸೆ ಪ್ರಕಾರ ಗಣಪತಿಯ ಖಿನ್ನತೆಗೆ ಭಜರಂಗದಳದ ಮಾಜಿ ಮಹಾರಾಜ ಮಹೇಂದ್ರ ಕುಮಾರನ ಗುಮ್ಮವೇ ಕಾರಣವಂತೆ. ಮಂಗಳೂರು ಚರ್ಚ್ ದಾಳಿಯ ರೂವಾರಿ ಈ ಮಹೇಂದ್ರ ಕುಮಾರ್. ಆಗಾತನಿಗೆ ಸಾತ್ ನೀಡಿದ್ದು ಇನ್ಸ್‌ಪೆಕ್ಟರ್ ಗಣಪತಿ. ಈ ಇಬ್ಬರು ಸೇರಿಯೇ ಚರ್ಚ್ ದಾಳಿ, ಕ್ರಿಶ್ಚಿಯನ್ನರ ಮರ್ದನರ ಯೋಜನೆ ಹಾಕಿದ್ದರು. ಈಗ ಮಹೇಂದ್ರ ಕುಮಾರ್ ಚೆಡ್ಡಿ ಗ್ಯಾಂಗಿನ

ಅಡ್ವೊಕೇಟ್ ಜನರಲ್ ಆಗಿರುವುದು ಎಂದು ಮಾಣಿ ಹೇಳಿದ್ದಾರೆ. ಹೀಗೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆಗಲು ಜಾರ್ಜ್ ಕಾರಣ. ಸುಬ್ಬಯ್ಯನವರಿಗೆ ಟಿಂಬರ್ ಬಾಬಿಯ ಜೊತೆಯೇ ಸಂಪರ್ಕ ಹೆಚ್ಚು ಎಂದು ಈ ಮಾಣಿ ಬರೆದಿದ್ದಾನೆ. ಅಂದರೆ ಒಬ್ಬ ಮನುಷ್ಯ ತಾನು ಯಾರ ಜೊತೆಯಲ್ಲಿ ಸಂಪರ್ಕವನ್ನು ಇಟ್ಟುಕೊಳ್ಳಬೇಕು ಅಥವಾ ಇಟ್ಟುಕೊಳ್ಳಬಾರದು - ಎಂಬುದನ್ನು ಚೆಡ್ಡಿಗಳು ಮತ್ತು ಈ ಮಾಣಿಗಳು ತೀರ್ಮಾನ ಮಾಡಬೇಕು ಎನ್ನುವ ರೀತಿಯಲ್ಲಿ ಬರೆದಿದ್ದಾರೆ. ಸುಬ್ಬಯ್ಯನವರಿಗೆ ಇಳಿವಯಸ್ಸಿನಲ್ಲಿ ಇದು ಬೇಕಿತ್ತೇ ಎಂದು ಪ್ರಶ್ನಿಸಿರುವ ಈ ಮಾಣಿಗೆ, ವಯಸ್ಸು ಆಗುವುದೇ ಇಲ್ಲ ಎಂಬ ಭಾವನೆ ಇರಬೇಕು. ಹಾಗೆಯೇ ತಾನು ಚಿರಂಜೀವಿ ಎಂದು ಭಾವಿಸಿರಬೇಕು. ಹಾಗಾಗಿ ಈ ಲೇಖನವನ್ನು ಬರೆದಿದ್ದಾರೆ.

ಎ.ಎಸ್. ಪೊನ್ನಣ್ಣ ಹೆಚ್ಚುವರಿ ಅಡ್ವೊಕೇಟ್ ಜನರಲ್ ಹೇಗೆ ಆದರು ಎಂಬುದರ ಚರ್ಚೆ ಈಗ ಅಪ್ರಸ್ತುತ. ಆದರೆ ಹಿಂದಿನ ಸರಕಾರದ ಅವಧಿಯಲ್ಲಿ ನ್ಯಾಯಾಲಯದಲ್ಲಿ ಚೆಡ್ಡಿಗಳೇ ತುಂಬಿಕೊಂಡಿದ್ದರು. ಈಗಲೂ ಅವರಲ್ಲಿ ಹಲವರು ಆಯಕಟ್ಟಿನ ಜಾಗದಲ್ಲಿ ಮುಂದುವರಿದಿದ್ದಾರೆ. ಸರಕಾರವೊಂದು ಬದಲಾದಾಗ ತಮ್ಮ ಸರಕಾರದ ಪರವಾಗಿ ವಾದಿಸಲು ಯಾರು ಇರಬೇಕಾಗುತ್ತದೆ ಎಂಬುದನ್ನು ಸರಕಾರ ತೀರ್ಮಾನಿಸುತ್ತದೆ.

ಆದರೆ ಮಾಣಿಗೆ ತಿಳಿದಿರಬೇಕಾದ ವಿಚಾರವೇನೆಂದರೆ ಎ.ಎಸ್. ಪೊನ್ನಣ್ಣ ಆಟ್ಟೆಪಾರಿ ವಕೀಲರಲ್ಲ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ತನ್ನದೇ ಆದ ಛಾಪನ್ನು ಬೀರಿರುವ ವಕೀಲ ಅವರು. ಅವರ ವಿಚಾರ ಹಾಗೂ ಬುದ್ಧಿವಂತಿಕೆಯನ್ನು ಮನಗಂಡೇ ರಾಜ್ಯ ಸರಕಾರ ಅವರನ್ನು ಹೆಚ್ಚುವರಿ ಅಡ್ವೊಕೇಟ್ ಜನರಲ್ ಆಗಿ ನೇಮಿಸಿದೆ. ವಾಸ್ತವದಲ್ಲಿ ಈ ನೇಮಕಾತಿ ವೈಯಕ್ತಿಕವಾಗಿ ಪೊನ್ನಣ್ಣರವರಿಗೆ ನಷ್ಟದ ಬಾಬತ್ತು ಎಂಬುದು ಮಾಣಿಗೆ ತಿಳಿದಂತಿಲ್ಲ. ಆದರೆ ಈ ರೀತಿ ಹಗುರವಾಗಿ ಮಾತನಾಡಿ, ಆರೋಪಗಳನ್ನು ಮಾಡಿದಕೂಡಲೇ ಪೊನ್ನಣ್ಣ ತನ್ನ ಹುದ್ದೆಗೆ ರಾಜೀನಾಮೆ ನೀಡಿ ಪಲಾಯನ ಮಾಡುತ್ತಾರೆ ಮತ್ತು ತಾವು ಬೇಕಾದ ವ್ಯಕ್ತಿಗಳನ್ನು ನೇಮಿಸಲು ಒತ್ತಡ ಹೇರಬಹುದು ಎಂದು ಚೆಡ್ಡಿಗಳು ಮತ್ತು ಮಾಣಿಗಳು ಅಂದಾಜಿಸಿದ್ದರೆ ಅದು ಹಗಲುಗನಸು ಆಗಬಹುದು.

ಪತ್ರಿಕೆಗಳು ಮತ್ತು ದೃಶ್ಯ ಮಾಧ್ಯಮಗಳು ಜನಾಭಿಪ್ರಾಯವನ್ನು ಮುಕ್ತವಾಗಿ ಪ್ರಕಟಿಸಿದರೆ ವಾಸ್ತವತೆ ಏನು ಎಂಬುದು ಅವರಿಗೆ ತಿಳಿಯುತ್ತದೆ. ಕೆಲವು ದೃಶ್ಯ ಮಾಧ್ಯಮಗಳಂತೂ ಪ್ರತಿಭಟನೆಗೆ ತಾವೇ ಸಜ್ಜಾಗುತ್ತಿದ್ದಾರೆ. ಅವರುಗಳು ಪತ್ರಕರ್ತರಾಗಿ ಕಾರ್ಯ ನಿರ್ವಹಿಸುವುದಕ್ಕಿಂತ ರಾಜಕಾರಣಿಗಳಾದರೆ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯ. ಸುದ್ದಿಯನ್ನು ಸುದ್ದಿಯಾಗಿ ನೋಡುವ ಜಾಯಮಾನ ಚೆಡ್ಡಿ ಪತ್ರಕರ್ತರಿಗೆ ಇಲ್ಲದಿರುವುದು ಒಂದು ದುರಂತ. ಅದಕ್ಕಿಂತಲೂ ಹೆಚ್ಚಿನ ದುರಂತ ಮುಖ್ಯವಾಹಿನಿಯ ಪತ್ರಿಕೆಗಳಲ್ಲಿ ಯೋಚನಾ ಶಕ್ತಿಯನ್ನು ಕಳೆದುಕೊಂಡ ಚೆಡ್ಡಿ ಪತ್ರಕರ್ತರೇ ತುಂಬಿಕೊಂಡಿರುವುದು.

■ ಬಿ.ಎನ್.ಮನುಶೆಟ್ಟಿ


ಕಡುವೈರಿಯಾಗಿದ್ದಾನೆ. ಸಂಘಪರಿವಾರದ ಸಂಚುಗಳನ್ನೆಲ್ಲ ಒಂದೊಂದಾಗಿ ಬಯಲಾಗಿಸುತ್ತಿದ್ದಾನೆ. ಈ ಮಹೇಂದ್ರ ಚೆರ್ಚ್ ದಾಳಿಯಲ್ಲಿ ತಾನು ಮಾಡಿದ 'ಪಾತ್ರ'ದ ಪರಿಚಯ ಮಾಡಬಹುದೆಂಬ ಆತಂಕ ಗಣಪತಿಗೆ ನಿದ್ದೆ ಮಾಡಲೂ ಬಿಡುತ್ತಿರಲಿಲ್ಲವಂತೆ.

ಇದೆಲ್ಲ ಏನೇ ಇರಲಿ, ಮಂತ್ರಿ ಜಾರ್ಜ್, ಪೊಲೀಸ್ ಅಧಿಕಾರಿಗಳಾದ ಪ್ರಣಬ್ ಮೋಹಂತಿ, ಎ.ಎಂ. ಪ್ರಸಾದ್‌ರ ಭಯವೇ ಗಣಪತಿಯನ್ನು ಖಿನ್ನತೆಗೆ ದೂಡಿತಾ? ಅಥವಾ ಸ್ವಯಂಕೃತಾಪರಾಧಗಳೇ ಮಾನಸಿಕ ಒತ್ತಡಕ್ಕೆ ಈಡು ಮಾಡಿತಾ? ಸಾಯುವಾಗಲೂ 'ವೈರಿಧರ್ಮ'ದ ಮಂತ್ರಿ ಜಾರ್ಜ್‌ರನ್ನು ಸಿಕ್ಕಿಹಾಕಿಸಿಯೇ ಹೋಗುವ ನಿರ್ಧಾರ ಗಣಪತಿಯ ಮತಾಂಧ ಮೆದುಳು ಮಾಡಿತಾ? ಸಂಘ ಪರಿವಾರದ ನಂಟು ಗಣಪತಿಯ ಮೆದುಳನ್ನು ಇಷ್ಟು ಅಪಾಯಕಾರಿಯಾಗಿ ಬದಲಿಸಿಬಿಟ್ಟಿತ್ತಾ? ಒಂದಲ್ಲ ಎರಡಲ್ಲ ನಾಲ್ಕೈದು ಪ್ರಕರಣದಲ್ಲಿ ವಿಚಾರಣೆ ಎದುರಿಸುತ್ತಿದ್ದ ಗಣಪತಿಗೆ ಬೇರೆ ದಾರಿಯೇ ಕಾಣದೆ ಗಡಿಬಿಡಿಯಲ್ಲಿ ಸಾಯುವ ನಿರ್ಧಾರಕ್ಕೆ ಬಂದರಾ? ನಂಬಿದ ಸಂಘ ಪರಿವಾರದ ಸರದಾರರೇ ಕೈಬಿಟ್ಟರಾ?

ಧರ್ಮದ ಕನ್ನಡಕ ಹಾಕಿಕೊಂಡು ಈ ಪ್ರಶ್ನೆಗಳಿಗೆ ಉತ್ತರ ಹುಡುಕಿದರೆ ಸಿಗಲು ಸಾಧ್ಯವೇ ಇಲ್ಲ. ಒಂದಂತೂ ಖರೆ. ಗಣಪತಿಗೆ ಸಂಘ ಪರಿವಾರದ ಸಖ್ಯ ಮುಳುವಾಗಿದೆ. ಹಾಗಂತ ಧರ್ಮಾಂಧತೆಯೊಂದೇ ಆತನ ಸಾವಿಗೆ ಕಾರಣವಾಗಿಲ್ಲ. ಕರ್ತವ್ಯಲೋಪ-ಹಣದ ಹಪಾಹಪಿ-ಚರ್ಮ ಚಪಲ- ತನ್ನ ವಾರಿಗೆಯವರು ತನಗಿಂತಲೂ ಮೊದಲೇ ಪ್ರಮೋಷನ್ ಪಡೆದಿದ್ದೆಲ್ಲ ಗಣಪತಿ ತನ್ನನ್ನು ತಾನೇ 'ವಿಸರ್ಜನೆ' ಮಾಡಿಕೊಳ್ಳಲು ಕಾರಣವಾಗಿರುವುದನ್ನು ಹೇಳಲು ದೊಡ್ಡ ಮನೋತಜ್ಞರೇನು ಬೇಕಾಗಿಲ್ಲ ಅಲ್ಲವಾ?

■ ನಹುಷ

ಅಂಕೋಲಾ: 'ಅಭಿವೃದ್ಧಿ'ಯಡಿ ಅಪ್ಪಚ್ಚಿಯಾದ ಬದುಕುಗಳು



ಬೊಗ್ರಿಗದ್ದೆ ನಿರಾಶ್ರಿತರ ಹೀನ ಬದುಕಿನ ಸ್ಥಿತಿ....

ಇದು ಸುದ್ದಿಯಲ್ಲ, ವರದಿಯೂ ಅಲ್ಲ, ಲೇಖನ, ವಿಮರ್ಶೆಗಳ ಸಾಲಿಗೂ ಸೇರುವಂತದ್ದಲ್ಲ. 'ಅಭಿವೃದ್ಧಿ'ಯ ಮಾಯಾಜಾಲಕ್ಕೆ ತಮ್ಮ ಬದುಕುಗಳನ್ನೇ ಬಲಿಕೊಟ್ಟ ಜೀವಗಳ ಹೀನಸ್ಥಿತಿಯ ಚಿತ್ರಣ!

ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿ ಗ್ರಾಮ ಪಂಚಾಯ್ತಿಗೆ ಸೇರುವ ಬೇಲೆಕೇರಿ ಬೊಗ್ರಿಗದ್ದೆ ಎನ್ನುವ ಊರಿನೊಳಕ್ಕೆ ಕಾಲಿಟ್ಟರೆ ಮನುಷ್ಯತ್ವವೇ ಮುದುಡಿಹೋಗುವಂತಹ ಸೂತಕ ತನ್ನಿಂತಾನೇ ಆವರಿಸಿಕೊಂಡು ಬಿಡುತ್ತೆ. ಕ್ಷಮಿಸಿ, ಅದು ಊರಲ್ಲ; ನಿರಾಶ್ರಿತ ಶಿಬಿರ. ನಾಗರಿಕತೆಯ ಮನುಷ್ಯ ಬದುಕಲಿಕ್ಕೆ ಲಾಯಕ್ಕೇ ಅಲ್ಲದ ಗುಡ್ಡಗಾಡು ಪ್ರದೇಶ. 'ಅಭಿವೃದ್ಧಿಗಳ' ಇನ್ನೊಂದು ಮುಖವನ್ನು ಕಂಡವರು ತುಂಬಾ ಕಮ್ಮಿ. ಆ ನಿರಾಶ್ರಿತ ಶಿಬಿರದಲ್ಲಿ ಸರಿದಾಡುವ ಪ್ರತಿಯೊಂದು ಆಕೃತಿಯೂ ಅಂತಹ ಅಭಿವೃದ್ಧಿಗೆ ತಮ್ಮ ಬದುಕುಗಳನ್ನು ಬಲಿಕೊಟ್ಟು ಸತತ ಮೂವತ್ತೆರಡು ವರ್ಷಗಳಿಂದ ನರಕಯಾತನೆ ಅನುಭವಿಸುತ್ತಿವೆ.

ಬೊಗ್ರಿಗದ್ದೆಯನ್ನು ಹೊಕ್ಕುತ್ತಿದ್ದಂತೆಯೇ ಮಧ್ಯವಯಸ್ಸು ದಾಟಿದರೂ ಮದುವೆಯಾಗದೆ ಮಾನಸಿಕ ಅಸ್ವಸ್ಥರಂತೆ ಕಾಣುವ ಹೆಂಗಸರು, ತಿನ್ನಲು ಅನ್ನವಿಲ್ಲದೆ ಹೊಟ್ಟೆಯನ್ನು ಬೆನ್ನಿಗಂಟಿಸಿಕೊಂಡ ಹಸುಗೂಸುಗಳು, ಬತ್ತಿದ ಕಣ್ಣುಗಳಲ್ಲೂ ಆಸೆಯನ್ನು ಅದುಮಿಟ್ಟುಕೊಂಡು ಜಗುಲಿಯ ಮೇಲೆ ಉರುಳಾಡುತ್ತಿರುವ ವೃದ್ಧ ಜೀವಗಳು, ಮಧ್ಯ ವಯಸ್ಸು ಮೀರಿದರೂ ಚಿಕ್ಕಮಕ್ಕಳಂತೆ ಕೊಟ್ಟಿಗೆಯಲ್ಲಿ ಬಿದ್ದು ಹೊರಳಾಡುವ ಮಾನಸಿಕ ಅಸ್ವಸ್ಥರು, ವಯಸ್ಸಲ್ಲದ ವಯಸ್ಸಲ್ಲಿ ಗಂಡನನ್ನು ಕಳೆದುಕೊಂಡ ವಿಧವೆಯರು, ದುಡಿಮೆಯೇ ಇಲ್ಲದೆ ಪ್ರೇತಕಳೆಯನ್ನು ಹೊತ್ತುನಿಂತ ಗಂಡಸರು.. ಹೀಗೆ ಒಂದು ಅಸಹಜ ಚಿತ್ರಣ ನಮ್ಮನ್ನು ಹಿಂಸಿಸಲು ಶುರು ಮಾಡುತ್ತದೆ.

ಇವತ್ತು ಇಷ್ಟೆಲ್ಲಾ ಹೀನಸ್ಥಿತಿಗೆ ಬಂದು ತಲುಪಿರುವ ಅವರೆಲ್ಲ ಮೂರು ದಶಕಗಳ ಹಿಂದೆ ಸಮೃದ್ಧವಾಗಿ ಬದುಕಿದಂತವರು. ಇಲ್ಲಿಂದ ಸುಮಾರಷ್ಟು ದೂರದಲ್ಲಿರುವ ಭಾವಿಕೇರಿ ಮೇಲಿನಕೇರಿ ಎನ್ನುವ ಫಲವತ್ತಾದ ನೆಲದಲ್ಲಿ ಪ್ರತಿ ಕುಟುಂಬವೂ ಹತ್ತಾರು ಎಕರೆ ಜಮೀನು ಉಳುಮೆ ಮಾಡಿ, ಗೌರವಯುತವಾಗಿ ಬಾಳಿದಂತವರು. ಆದರೆ ಭಾರತ ಸರ್ಕಾರದ ರಕ್ಷಣಾ ಇಲಾಖೆ ನೌಕಾನೆಲೆ ಅಭಿವೃದ್ಧಿ ಯೋಜನೆಗೆ ಅಂತ ಯಾವ ಘಳಿಗೆಯಲ್ಲಿ ಆ ನೆಲದ ಮೇಲೆ ಕಣ್ಣು ಹಾಕಿತೊ ಆಗಿನಿಂದ ಸುಮಾರು 150 ಕುಟುಂಬಗಳ ಅದೃಷ್ಟರೇಖೆಯೇ ಬುಡಮೇಲಾಗತೊಡಗಿತು. ಅವರು ಉಳುತ್ತಿದ್ದ ಫಲವತ್ತಾದ ನೆಲವನ್ನು ಕಿತ್ತುಕೊಂಡಿದ್ದಲ್ಲದೆ ತಲತಲಾಂತರದಿಂದ ಬದುಕು ಕಟ್ಟಿಕೊಂಡಿದ್ದ ಮನೆಗಳನ್ನೂ ನೆಲಸಮ ಮಾಡಿ ಬಲವಂತವಾಗಿ ತಂದು ಬೋಗ್ರಿಗದ್ದೆಯೆಂಬ ಕೊಂಪೆಯಲ್ಲಿ ಸುರಿದುಹೋದರು. ಭೂಮಿಗೆ ಪ್ರತಿಯಾಗಿ ಭೂಮಿ, ಬದುಕಲಿಕ್ಕೆ ನೌಕಾನೆಲೆಯಲ್ಲಿ ಪ್ರತಿ ಕುಟುಂಬಕ್ಕೆ ಒಂದೊಂದು ಉದ್ಯೋಗ ಕೊಡುತ್ತೇವೆ ಅಂತ ರಕ್ಷಣಾ ಇಲಾಖೆ ನೀಡಿದ್ದ ಭರವಸೆ ಇವತ್ತಿಗೂ ಈಡೇರಿಲ್ಲ. ದುಡಿದು ತಿನ್ನುತ್ತಿದ್ದ ಮನುಷ್ಯನನ್ನು ಕೈಕಾಲು ಕಟ್ಟಿ ಕೂರಿಸಿದರೆ ಏನೆಲ್ಲಾ ಮನೋ-ಸಾಮಾಜಿಕ ಹಿಂಸೆಗಳನ್ನು ಅನುಭವಿಸಬಲ್ಲನೋ ಆ ಎಲ್ಲಾ ಯಾತನೆಗಳನ್ನು ಹಾದು ಇವತ್ತು ಮಾನಸಿಕ ವಿಕಲತೆಯ ತುತ್ತತುದಿಗೆ ಬಂದು ತಲುಪಿದ್ದಾರೆ. ಅಲ್ಲಿ ನೆಲೆಸಿರುವ ಒಂದೆರಡು ಕುಟುಂಬಗಳ ನಿದರ್ಶನ ನೋಡಿದರೆ, ಸಮಗ್ರ ಬದುಕುಗಳ ಕರಾಳತೆ ನಮಗರ್ಥವಾಗುತ್ತೆ.

ಬುದ್ದು ಗೌಡನ ಕುಟುಂಬದ ಕರುಣಾಜನಕ ಸ್ಥಿತಿಯೊಂದೇ ಸಾಕು ನಮ್ಮಗಳ ಅಭಿವೃದ್ಧಿ ಅದೆಂತಹ ಕರಾಳ ಮಗ್ಗುಲನ್ನು ಅವಿತಿಟ್ಟುಕೊಂಡಿದೆ ಎಂಬುದನ್ನು ಮನದಟ್ಟು ಮಾಡಿಸಲು. ಇಲ್ಲಿಗೆ ನಿರಾಶ್ರಿತರಾಗಿ ಬರುವುದಕ್ಕಿಂತ ಮೊದಲು ಭಾವಿಕೇರಿ ಮೇಲಿನ ಕೇರಿಯಲ್ಲಿ ನೆಮ್ಮದಿಯ ಸುಖೀಜೀವನ ನಡೆಸಿದ್ದ ಕುಟುಂಬ ಅವನದು. ತನಗಿದ್ದ ನಾಲ್ಕಾರು ಎಕರೆ ಜಮೀನಿನಲ್ಲಿ ಶೇಂಗಾ, ಉದ್ದು, ಕಲ್ಲಂಗಡಿ ಬೇಸಾಯ ಮಾಡಿ ಸಾಕಷ್ಟು ಆದಾಯವನ್ನೂ ಕಾಣುತ್ತಿದ್ದ. ಆದರೆ ಸರ್ಕಾರ ಈ ಬೋಳುಗುಡ್ಡಕ್ಕೆ ತಂದು ಎಸೆದಮೇಲೆ ಅವನ ಬದುಕೇ ನಾಶವಾಯಿತು. ದುಡಿಯಲು ಕೆಲಸವಿಲ್ಲ; ಉಳಲು ಭೂಮಿ ಗದ್ದೆ ಇಲ್ಲ. ಇನ್ನು ತಿನ್ನಲು ಅನ್ನ ಎಲ್ಲಿಂದ ಬರಬೇಕು. ಅಲ್ಲದೇ ತನ್ನನ್ನೇ ನಂಬಿದ್ದ ಹೆಂಡತಿ, ಮೂರು ಮಕ್ಕಳು. ಇದೇ ಚಿಂತೆಯಲ್ಲಿ ನೆಲಹಿಡಿದ ಬುದ್ದುಗೌಡ ಕೊನೆಗೊಂದು ದಿನ ಕಣ್ಣುಮುಚ್ಚಿದ. ದುಡಿಯುವ ಶಕ್ತಿಯೇ ಇಲ್ಲದಂತಾದಾಗ ಅವನ ಹೆಂಡತಿ ಸುಕ್ರಿ ಆಘಾತಕ್ಕೆ ತುತ್ತಾದಳು. ಮನೆಯಿಂದ ಹೊರಬರುವುದನ್ನೇ ಕಡಿಮೆ ಮಾಡಿದಳು. ಈಗ ಆಕೆಗೆ 65 ವರ್ಷ. ತಂದೆಯ ಮೃತ್ಯು, ಖಿನ್ನತೆಗೆ ತುತ್ತಾದ ತಾಯಿ, ಮನೆಯಲ್ಲಿ (ಕ್ಷಮಿಸಿ, ಅದು ಕೊಟ್ಟಿಗೆ) ಹಾಸುಹೊದ್ದ ದಾರಿದ್ರ್ಯ. ಇಂತವನ್ನೇ ನೋಡಿ ಬೆಳೆದ ಮಕ್ಕಳು ಸಹ ನಿಧಾನಕ್ಕೆ ಮಾನಸಿಕ ಅಸ್ವಸ್ಥರಾಗಿ ಬದಲಾದರು. ಹಿರಿಯ ಮಗ ಗೋಪಾಲನಿಗೆ 35 ವರ್ಷ, ಎರಡನೇ ಮಗ ಹನುಮನಿಗೆ 34 ವರ್ಷವಾಗಿತ್ತು. ಇನ್ನು ಮಗಳು ನಾಗಿಗೆ 25 ವರ್ಷ. ಮೂವರೂ ಮಾನಸಿಕ ಅಸ್ವಸ್ಥರು!



ನಿರಾಶ್ರಿತರ ನೆರವಿಗೆ ಬಂದ ಸಹೃದಯರ ಗುಂಪು....

ಒಂದು ಕಾಲಕ್ಕೆ ನೆಮ್ಮದಿಯ ಬದುಕು ಕಂಡಿದ್ದ ಬುದ್ದುಗೌಡನ ಕುಟುಂಬಕ್ಕೆ ಈಗ ರೇಷನ್ ಕಾರ್ಡ್ ಅಕ್ಕಿಯೇ ಆಧಾರವಾಗಿತ್ತು. ಆ ರೇಷನ್ ತರಲೂ ದುಡ್ಡಿಲ್ಲದಂತಾದ ಸಮಯದಲ್ಲೇ ಹಸಿವಿಯೇ ಅವರ ಪಾಲಿಗುಳಿದ ಊಟ! ವಿಧವೆ ಸುಕ್ರಿಗೆ ಬರುತ್ತಿದ್ದ ಸಂಧ್ಯಾ ಸುರಕ್ಷ ಹಣ ಕೂಡ ಪಡೆಯಲು ಇವರಿಗೆ ಸಾಧ್ಯವಾಗಲಿಲ್ಲ. ಆ ಮೂವರು ಮಕ್ಕಳ ಮಾನಸಿಕ ಅಸ್ವಸ್ಥತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಬಂತು. ಮನೆಯ ಸಮೀಪ ಬರುವವರಿಗೆ ಕಲ್ಲು ಬೀಸುವಷ್ಟು ಅವರು ಚಿತ್ತ ವೈಕಲ್ಯಕ್ಕೆ ತುತ್ತಾದರು. ಅದೊಮ್ಮೆ ಇವರ ಬಗ್ಗೆ ಕನಿಕರು ತೋರಿಸಿ ಊಟ ಹಾಕಲೆಂದು ಬಂದ ವ್ಯಕ್ತಿಗೇ ಕಲ್ಲಿನಿಂದ ಹೊಡೆದು, ಆತ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತಾದ ಮೇಲಂತೂ ಯಾರೂ ಅವರ ಕೊಟ್ಟಿಗೆಯತ್ತ ಸುಳಿಯುತ್ತಲೇ ಇಲ್ಲ.

ಮನೆಯ ಹೆಂಚುಗಳು ಒಡೆದು ಈ ಮಳೆನೀರು ಒಳಗೆ ಬೀಳುತ್ತಿದ್ದರೂ ಹೆಂಚು ಹಾಕಿಸಿಕೊಳ್ಳಲಾರದಷ್ಟು ದುಸ್ಥಿತಿ ಅವರದು. ಮಳೆ ನೀರಿನಲ್ಲೇ ಹಗಲುರಾತ್ರಿ ಕಳೆಯಬೇಕಾಗಿದೆ. ದೇಹಕ್ಕೂ ಒಂದು ಮಿತಿ ಅಂತ ಇರುತ್ತಲ್ಲವಾ, ಅದೆಷ್ಟು ದಿನ ತಾನೆ ಚಳಿ, ಮಳೆ, ಗಾಳಿಗೆ ಮೈಯೊಡ್ಡಿಕೊಂಡಿರಲು ಸಾಧ್ಯ. ಹದಿನೈದು ದಿನಗಳ ಹಿಂದಷ್ಟೇ ಆ ವಿಧವೆಯ ಎರಡನೇ ಮಗ ಹನುಮ ತೀರಿಹೋದ! ದುರಂತವೆಂದರೆ ಆತ ಸತ್ತುಹೋಗಿದ್ದಾನೆ ಅನ್ನೋದು ಅವನ ತಾಯಿಗೇ ಆಗಲಿ, ಅಣ್ಣ-ತಂಗಿಗೇ ಆಗಲಿ ಗೊತ್ತಾಗಲೇ ಇಲ್ಲ. ಅಷ್ಟರಮಟ್ಟಿಗೆ ಅವರು ಹುಚ್ಚರಾಗಿ ಹೋಗಿದ್ದಾರೆ. ಶವದ ವಾಸನೆ ಸರಿದಾಡಿದ ಶುರು ಮಾಡಿದ ಮೇಲೆ ಅಕ್ಕಪಕ್ಕದವರಿಗೆ ಅನುಮಾನ ಬಂದು ದೇಹಕ್ಕೆ ಅಂತ್ಯಸಂಸ್ಕಾರ ಮಾಡಬೇಕಾಯ್ತು.

ಹನುಮ ಮೃತನಾದ ದಿನದಿಂದ ತಾಯಿ ಮತ್ತು ಇಬ್ಬರು ಮಕ್ಕಳು ತಮಗೆ ಸೇರಿದ ಕೊಟ್ಟಿಗೆಯಲ್ಲಿ ವಾಸವಿದ್ದಾರೆ. ಯಾರಾದರು ಅಕ್ಕಿ ಕೊಟ್ಟರೆ ಸಣ್ಣ ಪಾತ್ರೆಯಲ್ಲಿ ಗಂಜಿ ಬೇಯಿಸಿ ಉಣ್ಣುತ್ತಾರಷ್ಟೆ. ತಮ್ಮೊಟ್ಟಿಗೇ ಇದ್ದ ತಮ್ಮ ಹಠಾತ್ತನೆ ಇಲ್ಲವಾದ ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳಲಾರದ ಗೋಪಾಲ ಈಗ ವಿಪರೀತ ಭಯಗೊಂಡವನಂತೆ ತನ್ನ ತಾಯಿಗೆ ಸದಾ ಅಂಟಿಕೊಂಡೇ ಇರುವ ದೃಶ್ಯ ಎಂಥಾ ಕಲ್ಲೆದೆಯವರಲ್ಲೂ ಕಂಬನಿ ಮಿಡಿಸುತ್ತದೆ. ತಂಗಿ ನಾಗಿಯ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ!

ಇಂತಹ ಅದೆಷ್ಟೋ ಬದುಕುಗಳು ನಮ್ಮನ್ನು ತಡೆದುತಡೆದು ರೋದಿಸುತ್ತವೆ. ಹಿಂದೊಮ್ಮೆ 15 ಎಕರೆ ಫಲವತ್ತಾದ ಭೂಮಿಗೆ ಒಡೆಯನಾಗಿ, ಪ್ರಭಾವಿ ಹಾಲಕ್ಕಿ ಜನಾಂಗದ ಮುಖಂಡನಾಗಿ ಮೆರೆದಾಡಿದ್ದ ಸುಕ್ರು ಥಾಕು ಗೌಡ ಈ ನಿರಾಶ್ರಿತ ಕಾಲನಿಯಲ್ಲಿ ಸೆರೆಯೊಳಗಿನ ಬಂಧಿಯಂತೆ ಕನಿಷ್ಠ ಜೀವನಕ್ಕೆ ಒಗ್ಗಿಹೋಗಿದ್ದಾನೆ. ಕಟ್ಟಾ ಕಾಂಗ್ರೆಸ್ಸಿಗನಾಗಿದ್ದ ಈತ ಮಾಜಿ ಶಾಸಕ ಉಮೇಶ್ ಭಟ್ಟರ ಬಲಗೈ ಭಂಟನಂತೆ ವಿಜೃಂಭಿಸುತ್ತಿದ್ದ. ಅಂತವನ ಬದುಕಿಗೆ ಈಗ ರೇಷನ್ ಕಾರ್ಡ್ ಅಕ್ಕಿಯೇ ಆಧಾರ! ಬಲ್ಲವರ ಬಾಯಲ್ಲಿ ಅವನ ಗತ ಬದುಕಿನ ಕಥೆ ಕೇಳಿದರೆ ಅಂತಹ ವೈಭವಿ ಮನುಷ್ಯ ಇವನೇನಾ ಅನ್ನೋ ಅನುಮಾನ ಸಹಜವಾಗಿಯೇ ಮೂಡಿಬರುತ್ತೆ.


ಈ ಹಿಂದೆ ಪ್ರಭಾವಿ ವ್ಯಕ್ತಿ ಎನಿಸಿಕೊಂಡಿದ್ದ ಗೋವಿಂದಗೌಡರದು ಇದೇ ಕತೆ. ಜಮೀನ್ದಾರನಂತೆ ಬದುಕಿದ್ದ ಆ ವ್ಯಕ್ತಿ ಇವತ್ತು ಗುಜುರಿ ಸೈಕಲ್ಲೊಂದನ್ನು ತಳ್ಳಿಕೊಂಡು ಸಾಗುತ್ತಿದ್ದ ದೃಶ್ಯ ಮನುಷ್ಯ ಕಟ್ಟಿಕೊಂಡ ಬದುಕುಗಳ ಮೇಲೆ 'ಅಭಿವೃದ್ಧಿ'ಯ ಎದೆಭಾರವನ್ನು ಸಂಕೇತಿಸುವಂತಿತ್ತು. ಇಲ್ಲಿರುವ ಸುಮಾರು 156 ಕುಟುಂಬಗಳಲ್ಲಿ ಯಾರೊಬ್ಬರೂ ನೆಮ್ಮದಿಯಾಗಿಲ್ಲ. ಹಿಂದಿನ ಜಿಲ್ಲಾಧಿಕಾರಿ ಉಜ್ವಲ ಕುಮಾರ್ ಘೋಷ್ ಅವರು ಒಮ್ಮೆ ಭೇಟಿ ನೀಡುವ ಯೋಜನೆ ಹಾಕಿಕೊಂಡಿದ್ದರು. ಆದರೆ ಕೊನೇ ಘಳಿಗೆಯಲ್ಲಿ ಆ ಭೇಟಿಯೂ ಘಟಿಸಲಿಲ್ಲ. ಈಗಲಾದರೂ ಜಿಲ್ಲಾಧಿಕಾರಿಗಳು, ಶಾಸಕರು, ಸಚಿವರುಗಳು ಇತ್ತ ಭೇಟಿ ನೀಡಿ ಈ ನಿರಾಶ್ರಿತ ಬದುಕುಗಳಿಗೆ ಭರವಸೆ ತುಂಬುವ ಕೆಲಸ ಮಾಡಬೇಕಿದೆ. ರಕ್ಷಣಾ ಇಲಾಖೆ ತಾನು ಒಕ್ಕಲೆಬ್ಬಿಸುವಾಗ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸುವ ಮನಸ್ಸು ಮಾಡಬೇಕಿದೆ. ದೇಶದ ಗಡಿ ಕಾಯುವುದು ಸರ್ವಶ್ರೇಷ್ಠ ಕಾಯಕ; ಅದರಲ್ಲಿ ಎರಡು ಮಾತಿಲ್ಲ. ಆದರೆ, ಆ ಕಾಯುವ ಕೆಲಸದ ಮೂಲ ಉದ್ದೇಶ ತನ್ನ ಗಡಿಯೊಳಗಿನ ಬದುಕುಗಳನ್ನು ರಕ್ಷಿಸುವುದೇ ಆಗಿರುತ್ತೆ ಅಂತಹ ಮೂಲ ಉದ್ದೇಶವನ್ನೇ ಬಲಿಕೊಟ್ಟು ಗಡಿಕಾದರೆ ಏನು ಬಂತು? ರಕ್ಷಣಾ ಇಲಾಖೆ ಮೊದಲು ಇದನ್ನು ಅರ್ಥಮಾಡಿಕೊಳ್ಳಬೇಕು.

ನಾಗರಿಕ ಜಗತ್ತಿನಿಂದ ಈ ಪರಿ ಅನ್ಯಾಯಕ್ಕೊಳಗಾಗಿರುವ ಆ ನಿರಾಶ್ರಿತರಿಗೆ ಮೊನ್ನೆಯಷ್ಟೇ ತಾ.ಪಂ ಸದಸ್ಯ ಸಂಜೀವ ಕುಚಿನಾಡ, ಈ ನಿರಾಶ್ರಿತರ ಪರವಾಗಿ ಹೋರಾಟ ಮಾಡುತ್ತಲೇ ಬಂದಿರುವ ಭಾವಿಕೇರಿ ಗ್ರಾ.ಪಂ ಸದಸ್ಯ ಉದಯ ವಾಮನ ನಾಯಕ, ಬೇಲೇಕೇರಿ ಗ್ರಾ.ಪಂ. ಸದಸ್ಯ ಲಕ್ಷ್ಮಣ ನಾಯಕ, ಸಾಮಾಜಿಕ ಕಾರ್ಯಕರ್ತ ಕೆ.ಆರ್. ನಾಯಕ್, ಲಕ್ಷ್ಮಣ ಬಿ. ನಾಯಕ್ ಮೊದಲಾದವರು ಒಂದಷ್ಟು ಹೊದಿಕೆ, ಬಟ್ಟೆಗಳನ್ನು ನೀಡಿದರು. ಅದರಿಂದ ಅವರ ಬದುಕುಗಳಲ್ಲಿ ಭಾರೀ ಬದಲಾವಣೆಯೇನೂ ಬರುವುದಿಲ್ಲ. ಆದರೆ, ಅಂತಹದ್ದೊಂದು ಸಣ್ಣ ಕಾಳಜಿ ಆಳುವ ವರ್ಗದಲ್ಲೂ ಕಾಣಿಸಿಕೊಳ್ಳಲು ಅದು ನೆರವಾಗಬಹುದೆನ್ನುವ ಭರವಸೆ ಅಲ್ಲಿ ನೆರೆದಿದ್ದವರದಾಗಿತ್ತು.

■ ಅಂಕೋಲಾ ರಮೇಶ್

ಮುರುಘಾ ಶರಣರ 'ಮಠೋತ್ಪತ್ತಿ' ಕಾಯಕ

ಇದೀಗ ಹರಳಯ್ಯ ವರ್ಸಸ್ ಮಾದಾರ ಚೆನ್ನಯ್ಯ


ಮುರುಘಾ ಶರಣರು

ಜುಲೈ 10ರಂದು ಹಿರಿಯೂರಿನಲ್ಲಿ ಭರ್ಜರಿ ಕಾರ್ಯಕ್ರಮವೊಂದು ಆಯೋಜನೆಗೊಂಡಿತ್ತು. ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯ, ಚಿತ್ರದುರ್ಗ ಶಾಸಕ ತಿಪ್ಪಾರೆಡ್ಡಿ, ಮುರುಘಾ ಮಠದ ಶಿವಮೂರ್ತಿ ಶರಣರು ಸೇರಿದಂತೆ ಪ್ರಭಾವಿಗಳೇ ಭಾಗವಹಿಸಿದ್ದ ಆ ಕಾರ್ಯಕ್ರಮದ ಮೂಲ ಉದ್ದೇಶ 'ಶಿವಶರಣ ಹರಳಯ್ಯ ಗುರುಪೀಠ' ಅನ್ನೋ ಹೊಸ ಮಠವನ್ನು ಹುಟ್ಟುಹಾಕುವುದಾಗಿತ್ತು. ಅದು ಯಶಸ್ವಿಯಾಗಿಯೂ ಮುಗಿಯಿತು. ಹೊಸ ಮಠಕ್ಕೆ ಕಾವಡಿಗರ ಹಟ್ಟಿಯ ಸುರೇಶ ಎಂಬಾತನನ್ನು ಪೀಠಾಧಿಪತಿಯನ್ನಾಗಿ ಪಟ್ಟ ಕಟ್ಟಲಾಗಿದೆ. ವಿಷಯ ಇಷ್ಟೇ ಆಗಿದ್ದಿದ್ದರೆ ಯಾರೂ ತಲೆಕೆಡಿಸಿಕೊಳ್ಳುವ ಅಗತ್ಯವೇ ಇರುತ್ತಿರಲಿಲ್ಲ. ಆದರೆ ಹೊಸ ಮಠ ಕಟ್ಟುವ ಇಡೀ ಪ್ರಕ್ರಿಯೆ ಹಿಂದಿನ 'ಕಾವಿ ರಾಜಕಾರಣ'ವಿದೆಯಲ್ಲ ಅದೀಗ ಮಾದಿಗ ಸಮುದಾಯವನ್ನೇ ಇಬ್ಭಾಗ ಮಾಡುವ ಆತಂಕವನ್ನು ತಂದಿಟ್ಟಿದೆ.

ಅಂದಹಾಗೆ, ಹೊಸ ಮಠದ ಉದಯದ ಹಿಂದಿರುವ ಪ್ರಧಾನ ಶಕ್ತಿ ಮುರುಘಾ ಮಠದ ಶಿವಮೂರ್ತಿ ಶರಣರು. ಜಾತಿಗೊಂದು ಮಠವನ್ನು ಹುಟ್ಟು ಹಾಕುವ ಕಾಯಕ ಮುರುಘಾ ಮಠಕ್ಕೆ ಅಂಟಿದ್ದೇ ಶಿವಮೂರ್ತಿ ಶರಣರು ಪೀಠಾಧಿಪತಿಯಾದ ನಂತರ. ಗೊಲ್ಲರು, ನಾಯಕರು, ಮಾದಿಗರು, ಮ್ಯಾದಾರರು, ಲಂಬಾಣಿಗಳು, ಛಲವಾದಿಗಳು... ಹೀಗೇ ನೆನಪಾದ ಜಾತಿಗೆಲ್ಲ ಜಗದ್ಗುರುಗಳನ್ನು ಹುಟ್ಟುಹಾಕುತ್ತಾ ಬಂದ ಶಿವಮೂರ್ತಿ ಶರಣರು ಆರಂಭದಲ್ಲಿ ತಮ್ಮ ಈ ಕಾರ್ಯಕ್ಕೆ ಶೋಷಿತ ಸಮುದಾಯಗಳ ಸಂಘಟನೆಯ ನೆಪ ಕೊಟ್ಟಾಗ ಪ್ರಜ್ಞಾವಂತರೆಲ್ಲ ತಲೆದೂಗಿದ್ದರು. ಆದರೆ ಈ 'ಮಠೋತ್ಪತ್ತಿ' ಕಾಯಕದ ಹಿಂದೆ ಮುರುಘಾ ಮಠದ ಕಾರ್ಯದರ್ಶಿಯಾಗಿದ್ದ ಸಮಯಸಾಧಕ ಬಸವರಾಜನ್‌ನ ಪೊಲಿಟಿಕಲ್ ಇಂಗಿತ ಅಡಗಿರೋ ಸತ್ಯ ಬಯಲಾಗಲು ಹೆಚ್ಚೇನೂ ಸಮಯ ಬೇಕಾಗಲಿಲ್ಲ.

ಮಠದ ಆಡಳಿತಾಧಿಕಾರಿಯಾಗಿ ಶಿವಮೂರ್ತಿ ಶರಣರನ್ನೇ ತನ್ನ ಕೈಗೊಂಬೆಯಾಗಿಸಿಕೊಂಡಿದ್ದ ಬಸವರಾಜನ್‌ಗೆ ಸಮಾಜದ ಉದ್ಧಾರದ ಉದ್ದೇಶ ಕಿಂಚಿತ್ತೂ ಇರಲಿಲ್ಲ. ಜಾತಿಗೊಂದು ಮಠ, ಮಠಕ್ಕೊಬ್ಬ ಜಾತಿ ಜಗದ್ಗುರುವನ್ನು ಹುಟ್ಟುಹಾಕಬೇಕೆಂದು ಬಸವರಾಜನ್‌ಗೆ ಅನ್ನಿಸಿದ್ದರ ಹಿಂದೆ ಅವನ ಪೊಲಿಟಿಕಲ್ ಸೋಲುಗಳ ಪ್ರಭಾವ ಇತ್ತು. ಬಸವರಾಜನ್ 1996-97ರಲ್ಲಿ ಪದವೀಧರ ಕ್ಷೇತ್ರದಿಂದ ನಿಂತು ಮಣ್ಣುಮುಕ್ಕಿದ್ದ. ಅಲ್ಲದೇ 2004ರಲ್ಲಿ ಗೆದ್ದು ಆತ ಶಾಸಕನಾಗುವಲ್ಲಿ ಈ ಜಾತಿ ಜಗದ್ಗುರುಗಳ ಫರ್ಮಾನುಗಳು ಬಹಳವಾಗಿಯೇ ಕೆಲಸ ಮಾಡಿದ್ದವು.

ಹರಳಯ್ಯ ವರ್ಸಸ್ ಮಾದಾರ ಚೆನ್ನಯ್ಯ

ಯಾವಾಗ ಇಂತಹ ದುಷ್ಟ ಹಕೀಕತ್ತಿನ ಬಸವರಾಜನ್‌ನನ್ನು ಮುರುಘಾ ಮಠದಿಂದ ಹೊರದಬ್ಬಲಾಯ್ತೊ ಆಗಿನಿಂದ

ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಿಂದ ಎಂಎಲ್‌ಎ ಆಕಾಂಕ್ಷಿಯಾಗಿ ಜೆಡಿಎಸ್‌ನಿಂದ ಸ್ಪರ್ಧಿಸಿದಾಗಲೂ ಅವನಿಗೆ ಸೋಲೇ ಗತಿಯಾಗಿತ್ತು. ಮೇಲಿಂದಮೇಲೆ ಎರಗಿಬಂದ ಸೋಲುಗಳಿಂದ ಕಂಗೆಟ್ಟ ಬಸವರಾಜನ್ ತನ್ನ ಗೆಲುವಿಗಾಗಿ ಒಂದು ಫಾರ್ಮುಲಾ ಕಂಡುಕೊಳ್ಳಲು ತಲೆಕೆಡಿಸಿಕೊಂಡಾಗಲೇ ಈ ಮಠೋತ್ಪತ್ತಿ ಐಡಿಯಾ ಅಮರಿಕೊಂಡದ್ದು. ಎಲೆಕ್ಷನ್‌ಗಳಲ್ಲಿ ಹಣ, ಹೆಂಡದಂತೆಯೇ ಜಾತಿ ಕೂಡಾ ಒಂದು ಪ್ರಧಾನ ಫ್ಯಾಕ್ಟರು. ಹಾಗಾಗಿ ಒಂದು ಜಾತಿಯ ಲೀಡರ್ ಎನ್ನಿಸಿಕೊಂಡವನನ್ನು ತನ್ನತ್ತ ಸೆಳೆದುಕೊಂಡರೆ ಆ ಜಾತಿಯ ಓಟುಗಳು ಸರಾಗವಾಗಿ ತನ್ನ ಜೋಳಿಗೆಗೆ ಬಂದುಬೀಳುತ್ತವೆ. ಹಾಗಂತ ಒಂದು ಜಾತಿಯ ಪೊಲಿಟಿಕಲ್ ಲೀಡರ್‌ನನ್ನು ತನ್ನತ್ತ ಸೆಳೆದುಕೊಂಡರೆ ಮುಂದೊಂದು ದಿನ ಅವನೇ ನನಗೆ ಪ್ರತಿಸ್ಪರ್ಧಿಯಾದರೂ ಆಗಬಹುದು. ಯಾಕೆಂದರೆ ಪೊಲಿಟಿಕ್ಸ್ ಅಂತಹ ನೂರಾರು ನಿದರ್ಶನಗಳನ್ನು ತನ್ನ ಚರಿತ್ರೆಯೊಳಗೆ ಕಾಪಿಟ್ಟುಕೊಂಡಿದೆ. ಅಂತಹ ದುಸ್ಸಾಹಸಕ್ಕೆ ಕೈಹಾಕುವ ಬದಲು ಜಾತಿಗೊಂದು ಮಠ ಕಟ್ಟಿ, ತನ್ನ ಕೈಗೊಂಬೆಯಂತಹ ವ್ಯಕ್ತಿಯನ್ನೇ ಮಠಾಧಿಪತಿ ಮಾಡಿಬಿಟ್ಟರೆ ಅವನ ಫರ್ಮಾನನ್ನು ಇಡೀ ಜಾತಿ ಶಿರಸಾವಹಿಸಿ ಪಾಲಿಸುತ್ತೆ ಅಂತೆಲ್ಲಾ ಲೆಕ್ಕಾಚಾರ ಹಾಕಿದ ಬಸವರಾಜನ್, ಶಿವಮೂರ್ತಿ ಶರಣರ ತಲೆತೀಡಿ 'ಮಠೋತ್ಪತ್ತಿ' ಮಹಾಕಾರ್ಯಕ್ಕೆ ಅಣಿಗೊಳಿಸಿದ್ದ. ಅಲ್ಲಿಂದಾಚೆಗೆ ಮುರುಘಾ ಮಠವೆನ್ನುವುದು ಜಾತಿಮಠಗಳನ್ನು ಹುಟ್ಟುಹಾಕುವ ಕಾರ್ಖಾನೆಯಂತೆ ಬದಲಾಗಿಹೋಯ್ತು. ಬಸವರಾಜನ್‌ಗೆ ಈ ಫಾರ್ಮುಲಾ ನಿಜಕ್ಕೂ ವರ್ಕ್‌ಔಟ್ ಆಯ್ತು. 2008ರ ಚಿತ್ರದುರ್ಗ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ ನಿಂತು


ಶಿವಮೂರ್ತಿ ಶರಣರು ತಮ್ಮ ಈ ಖಯಾಲಿಗೆ ಕೊಂಚ ಬ್ರೇಕ್ ಹಾಕಿದಂತೆ ಕಂಡುಬಂತು. ಆದರೆ ಮೊನ್ನೆ ಹೊಸದಾಗಿ ಹರಳಯ್ಯ ಗುರುಪೀಠವನ್ನು ಸ್ಥಾಪಿಸುವ ಮೂಲಕ ಹಳೇ ಖಯಾಲಿಯ ಜೊತೆಗೆ ಹೊಸ ಅಪವಾದವನ್ನೂ ಮೈಮೇಲೆ ಎಳೆದುಕೊಂಡಿದ್ದಾರೆ.


ಅಷ್ಟಕ್ಕೂ ಮಾದಿಗ ಸಮುದಾಯವನ್ನು ಪ್ರತಿನಿಧಿಸುವ ಹರಳಯ್ಯ ಗುರುಪೀಠವನ್ನು ಸ್ಥಾಪಿಸುವುದರಲ್ಲಿ ಅಂತ ಅನಾಹುತ ಏನಿದೆ? ಅನ್ನೋ ಪ್ರಶ್ನೆ ಕಾಡಬಹುದು. ಅಸಲೀ ಹಕೀಕತ್ತು ಇರುವುದೇ ಅಲ್ಲಿ. ಮಠಗಳು ಸಮುದಾಯಗಳ ಸಂಘಟನೆಗೆ ಸಾಕ್ಷಿಯಾಗಬೇಕೆ ವಿನಃ ಅದೇ ಸಮುದಾಯಗಳ ವಿಘಟನೆಗೆ ವೇದಿಕೆಯಾಗಬಾರದು. ಹರಳಯ್ಯ ಮಠ ಸ್ಥಾಪಿಸುವ ಮೂಲಕ ಶಿವಮೂರ್ತಿ ಶರಣರು ಅಂತಹ ಅನಾಹುತಕ್ಕೆ ನಾಂದಿಯಾಡಿದ್ದಾರೆ. ಯಾಕೆಂದರೆ ಮಾದಿಗ ಸಮುದಾಯವನ್ನು ಪ್ರತಿನಿಧಿಸಲು ಈಗಾಗಲೇ ಹಿರಿಯೂರಿನ ಕೋಡಿಹಳ್ಳಿಯಲ್ಲಿ ಐತಿಹಾಸಿಕ ಹಿನ್ನೆಲೆಯಿರುವ ಆದಿಜಾಂಬವ ಮಠವಿದೆ.

ಅದಕ್ಕೆ ಈ ಮೊದಲು ರುದ್ರಮುನಿ ಸ್ವಾಮಿಗಳು ಪೀಠಾಧಿಪತಿಯಾಗಿದ್ದರು. ಅವರ ನಂತರ ಈಗ ಮಾರ್ಕಂಡೇಯ ಮುನಿಗಳು ಪೀಠಾಧಿಪತಿಯಾಗಿದ್ದರೆ, ಮುಂದಿನ ಮರಿಸ್ವಾಮಿಗಳಾಗಿ ಷಡಾಕ್ಷರ ಮುನಿಗಳಿದ್ದಾರೆ. ಅದೂ ಸಾಲದು ಎಂಬಂತೆ ಬಸವರಾಜನ್‌ನ ನೇತೃತ್ವದಲ್ಲಿ ಮುರುಘಾ ಮಠ 'ಮಠೋತ್ಪತ್ತಿ' ಕಾಯಕಕ್ಕೆ ಇಳಿದಾಗ ಅದೇ ಮಾದಿಗ ಸಮುದಾಯಕ್ಕೆ 'ಮಾದಾರ ಚೆನ್ನಯ್ಯ' ಅನ್ನೋ ಹೊಸ ಮಠ ಹುಟ್ಟುಹಾಕಿ ಅದಕ್ಕೊಬ್ಬ ಸ್ವಾಮಿಯನ್ನೂ ಪ್ರತಿಷ್ಠಾಪಿಸಿದ್ದರು. ಶೋಷಿತ ಮಾದಿಗ ಸಮುದಾಯವನ್ನು ಪ್ರತಿನಿಧಿಸಲು ಎರಡು ಮಠಗಳಿದ್ದಾಗ್ಯೂ (ಅದರಲ್ಲಿ ಒಂದನ್ನು ತಾವೇ ಈ ಹಿಂದೆ ನಿರ್ಮಿಸಿದ್ದಾಗ್ಯೂ) ಮತ್ತೊಂದು ಮಠ ಕಟ್ಟುವ ಜರೂರು ಏನಿತ್ತು ಎನ್ನುವುದೇ ಇಡೀ ಕಾವಿ ಪೊಲಿಟಿಕ್ಸ್ ಹುನ್ನಾರವನ್ನು ಬಯಲು ಮಾಡುವ ಯಕ್ಷಪ್ರಶ್ನೆಯಾಗಿದೆ.

ಮುರುಘಾ ಮಠದ ಆಡಳಿತಾಧಿಕಾರಿಯ... ಬಸವರಾಜನ್ ಅದೆಂತಹ ಲೆಕ್ಕಾಚಾರದ ಆಸಾಮಿಯ... ಮುಂದೊಂದು ದಿನ ತಾನು ಮಠದಿ... ಹೊರದಬ್ಬಿಸಿಕೊಳ್ಳುವಂತಹ ಪರಿಸ್ಥಿತಿ ಬಂದರೂ ... ಮಠದ ಪೊಲಿಟಿಕ್ಸ್ ತನ್ನ ಕೈಯಲ್ಲೇ ಇರುವಂತೆ ... ಮಾಡಿಕೊಂಡಿದ್ದ. ಅವನನ್ನು ಅಪಾರವಾಗಿ ... ಕಂಡಕಂಡಲ್ಲೆಲ್ಲ ಸಹಿ ಹಾಕಿದ್ದ ಶಿವಮೂರ್ತಿ ಶರ... ಇವತ್ತು ಮೈಪರಚಿಕೊಳ್ಳುತ್ತಿರೋದು ರಹಸ್ಯವಾಗೇನೂ... ಬಿಡಿ. ಬಸವರಾಜನ್ ಜಾತಿಗೊಂದು ಮಠ ಎನ್ನುವ ಸಿ... ಹಿಡಿದುಕೊಂಡು ಶಿವಮೂರ್ತಿ ಶರಣರನ್ನೇ ಮುಂದೆ ... ಕಾರ್ಯ ಸಾಧಿಸಿಕೊಳ್ಳುತ್ತಿರುವಾಗಲೂ ಹೊಸದಾಗಿ ... ಜಗದ್ಗುರುವಾಗಿ ಉದ್ಭವಿಸುತ್ತಿದ್ದವರ ಮೇಲೆ ತಾನೇ ... ಬಿಗಿಹಿಡಿತ ಹೊಂದಿರುತ್ತಿದ್ದ. ಶಿವಮೂರ್ತಿ ಶರ... ಪ್ರಚಾರಕಷ್ಟೇ ಸೀಮಿತಗೊಂಡರೆ ವಿನಃ ಬಸವರಾ... ಭವಿಷ್ಯದ ಹಕೀಕತ್ತನ್ನು ಅರ್ಥಮಾಡಿಕೊಳ್ಳಲೇ ಇಲ್ಲ. ... ಅವರಿಗೆ ಅರ್ಥವಾದದ್ದು ಬಸವರಾಜನ್ ಮುರ... ಮಠದಿಂದ ಹೊರಬಿದ್ದ ನಂತರ.

ತಾನು ಹುಟ್ಟುಹಾಕಿದ ಮಠಗಳಿಗೆ ತಾನು ದೀಕ್ಷೆ... ಜಾತಿ ಜಗದ್ಗುರುಗಳು ತನ್ನ ಆಳತೆಯಲ್ಲೇ ಇರು... ಅಂತ ಶಿವಮೂರ್ತಿ ಶರಣರು ಅಂದುಕೊಂಡದ್ದು ... ದಮ್ ಉಲ್ಟಾ ಹೊಡೆಯಿತು. ಬಸವರಾಜನ್ ಮಠ... ಹೊರದಬ್ಬಿಸಿಕೊಳ್ಳುತ್ತಿದ್ದಂತೆಯೇ ಹೆಚ್ಚೂಕಮ್ಮಿ ಅಷ್ಟೂ ... ಮಠಾಧೀಶರು ಬಸವರಾಜನ್ ಪರವಾಗಿಯೇ ನಿಂತುಬಿ... ಇದು ಶಿವಮೂರ್ತಿ ಶರಣರನ್ನು ಒಳಗಿಂದೊ... ಕನಲುವಂತೆ ಮಾಡಿತ್ತು. ಅಕ್ಷರಶಃ ಅವರನ್ನೆಲ್ಲಾ ... ವಿರೋಧಿಗಳಂತೆಯೇ ಕಾಣಲು ಶುರು ಮಾಡಿ... ಆದರಲ್ಲೂ ತಾವೇ ಹುಟ್ಟುಹಾಕಿದ್ದ ಮಾದಾರ ಚೆ... ಸ್ವಾಮಿಯ ಮೇಲೆ ಶಿವಮೂರ್ತಿ ಶರಣರಿಗೆ ಕೊ... ಕುದಿಯತೊಡಗಿತ್ತು. ಇವತ್ತು ಹಿರಿಯೂರು ತಾಲ್ಲು... ಐಮಂಗಳದ ಬಳಿ ಹರಳಯ್ಯ ಗುರುಪೀಠವನ್ನು ಮಾ... ಚೆನ್ನಯ್ಯ ಪೀಠಕ್ಕೆ ಪರ್ಯಾಯವಾಗಿ ಶಿವಮೂರ್ತಿ ಶರ...


ಹಿರಿಯೂರಿನಲ್ಲಿ ನಡೆದ ಹೊಸ ಮಠದ ಉದ್ಘಾಟನಾ ಕಾರ್ಯಕ್ರಮ


ಕೇಸರಿ ಸಹವಾಸದಲ್ಲಿ ಮಾದಾರ ಚೆನ್ನಯ್ಯ


ಕಾವಿ ಧರಿಸಿದ ಮಹಾತಾಯಿಯರೆಲ್ಲಿ?

ಒಂದು ಮಠದ ಪೀಠಾಧಿಪತಿಯನ್ನಾಗಿ ಆಯ್ಕೆ ಮಾಡುವ ಮೊದಲು ಆ ವ್ಯಕ್ತಿಯ ಸಾಮರ್ಥ್ಯವನ್ನು ಕಿಂಚಿತ್ತಾದರೂ ಅಳೆಯುವುದು ಒಳಿತು. ಸಂಸ್ಕೃತ, ವೇದ, ಉಪನಿಷತ್ತುಗಳಂತಹ ಅಧ್ಯಯನವಂತೂ ಬೇಡ, ಕಡೇಪಕ್ಷ ತನ್ನೊಳಗಿರುವ ಸಾಮಾಜಿಕ ಹೊಣೆಯನ್ನು ಕಾಯ್ದುಕೊಳ್ಳುವ ಬದ್ಧತೆಯಾದರೂ ಅಂತವರಲ್ಲಿ ಇದೆಯಾ ಅಂತ ಪರಾಮರ್ಶಿಸಬೇಕಾಗುತ್ತದೆ. ಆದರೆ ಶಿವಮೂರ್ತಿ ಶರಣರು 'ಕಾವಿಕ್ರಾಂತಿ'ಯ ಹೆಸರಲ್ಲಿ ಮಠಕ್ಕೆ ಬಂದವರಿಗೆಲ್ಲ ಕಾವಿ ಎಸೆದು ದೀಕ್ಷೆ ನೀಡತೊಡಗಿದ್ದು ಇವತ್ತು ಅಪಹಾಸ್ಯಕ್ಕೆ ಈಡಾಗುವ ಹಂತಕ್ಕೆ ಬಂದುನಿಂತಿದೆ. ಮನೆ-ಮನೆತನ ಅಂತೆಲ್ಲಾ ಬೇಸರಗೊಂಡು ಬಂದ ಮಹಿಳೆಯರಿಗೆಲ್ಲ ಕಾವಿ ಸೀರೆ ತೊಡಿಸಿ ಮಾತೆಯರೆಂಬ ಹೆಸರಿಟ್ಟು ಈಶ್ವರಮ್ಮಗಳನ್ನೇ ಸೃಷ್ಟಿಸಿ... ಸ್ಮೃಡುಹೊಡೆಯುವಂತೆ ಶರಣ ಪಡೆಯನ್ನು ಕಟ್ಟಿದ ಮುರುಘಾ ಶರಣರ ಸಾಹಸ ಬಹಳ ದಿನ ಮುಂದುವರೆಯಲೇ ಇಲ್ಲ. ಮಠದಲ್ಲಿ ನಿನ್ನೆಯಿದ್ದ ಮಾತೆಯರು ಇಂದಿಲ್ಲ ಎನ್ನುವಂತಾಗಿದೆ. ಯಾವ ಕಾವಿ ಮಾತೆಯರನ್ನು ಮುರುಘಾ ಶರಣರು 'ಸಾಧಕಿ'ಯರು ಅಂತಾ ಕರೆದು ದೀಕ್ಷೆ ಕೊಟ್ಟಿದ್ದರೋ ಅವರಲ್ಲಿ ಬಹಳಷ್ಟು ಜನ ಈಗ ಶರಣ ಪಥದಲ್ಲಿ ಇದ್ದಾರಾ ಅಂತ ಹುಡುಕಿದರೆ ನಿರಾಸೆಯೇ ಎದುರಾಗುತ್ತದೆ.

ನಿವೇದಿತಾ ಎಂಬ ಸಾಧಕಿ ಹೊಳಲ್ಕೆರೆ ಪಕ್ಕದ ಬೆಂಕಿಕೆರೆಯವಳು. ಅದೇನು ಲವ್ ಡಿಸಪಾಯಿಂಟಾಯಿತೋ ಏನೊ ಬೇಸರಗೊಂಡು ಸೀದಾ ಮುರುಘಾ ಶರಣರ ಆಶ್ರಯಕ್ಕೆ ಬಂದುನಿಂತಳು. ಆಕೆಯನ್ನು 'ಸಾಧಕಿ' ಅಂತ ಕರೆದ ಶರಣರು ಕಾವಿಸೀರೆ ಉಡುಸಿ ಮಠದಲ್ಲಾಡಿಕೊಂಡಿರು ಅಂದು ಬಿಟ್ಟುಕೊಂಡರು. ಚಂಚಲ ಮನಸ್ಸಿಗೆ ವೈರಾಗ್ಯ ಎಷ್ಟು ಬೇಗ ಆವರಿಸಿಕೊಳ್ಳುತ್ತೋ ಭೋಗವ್ಯಾಮೋಹವೂ ಅಷ್ಟೇ ತರಾತುರಿಯಲ್ಲಿ ಅಮರಿಕೊಂಡುಬಿಡುತ್ತೆ. ಪ್ರೀತಿ-ಪ್ರೇಮದ ಕರೆಗೆ ಓಗೊಟ್ಟ ಆಕೆ ಚೇತನನೊಂದಿಗೆ ಸಂಸಾರ ಹೂಡಿದಳು. ಶರಣರು ಕೊಟ್ಟಿದ್ದ ಕಾವಿ ಕಿತ್ತುಬಿಸಾಕಿ ಪ್ರಿಯಕರ ಕೊ... ಬಣ್ಣದ ಸೀರೆ ತೊಟ್ಟು ಹೊರಟೇಹೋದಳು.

ಇನ್ನು ಇಂದಿರಮ್ಮ ಎನ್ನುವ ಬುಕ್ಕಾಂಬುದಿಯ ಮಹಿಳೆ ತನ್ನ ಮೈಮೇ... ಬಂಗಾರವನ್ನೆಲ್ಲಾ ಶರಣರ ಬೊಗಸೆಗೆ ತುಂಬಿಸಿ ತನಗೆ ವೈರಾಗ್ಯ ಕಾಡುತ್ತಿದೆ ಎಂದ... ತಡ ಹೊಳಲ್ಕೆರೆ ಒಂಟಿಕಲ್ ಮಠಕ್ಕೆ ಸಾಧಕಿಯನ್ನಾಗಿ ನೇಮಕ ಮಾಡಿದ್ದರು. ಆ... ವಿಚಿತ್ರವೆಂದರೆ ಯಾವ ಶಿವಮೂರ್ತಿ ಶರಣರು ಇಂದಿರಮ್ಮನನ್ನು ಅಕ್ಕಮಹಾದೇವಿ... ಅವತಾರದಲ್ಲಿ ಕಲ್ಪಿಸಿಕೊಂಡು ತಾವೇ ಸಾಧಕಿ ಅಂತ ಕರೆದಿದ್ದರೋ ಅದೇ ಶರಣ... ಆಕೆಯ ಎದುರು ಪುರುಷನೊಬ್ಬನ ಫೋಟೋ ಹಿಡಿದು ಇವನನ್ನು ವಿವಾಹ... ಸಂಸಾರ ಬಂಧನಕ್ಕೆ ಮರಳು ಅಂದರು. ಅಂದಿನಿಂದ ಇಂದಿರಮ್ಮ ಮಠದಿಂದ ನಾ...

ಅದೇರೀತಿ ಅಕ್ಕಮಹಾದೇವಿಯೆನ್ನುವ ಸಾಧಕಿ ಶರಣರು ತೊಡಿಸಿದ ಕಾವಿ ... ಬಿಸಾಕಿ ಬಣ್ಣದ ಸೀರೆ ತೊಟ್ಟು ಹೊಸದುರ್ಗದಲ್ಲಿ ಗಂಡ, ಮನೆ, ಮಕ್ಕಳೊ ... ಸುಖವಾಗಿದ್ದಾಳೆ. ಇಂತಹ ಅದೆಷ್ಟೋ ಉದಾಹರಣೆಗಳು ಸಿಗುತ್ತವೆ. ಕಾವಿ ಕ್ರಾಂತಿ... ನೆಪದಲ್ಲಿ ಕಂಡಕಂಡ ಮಹಿಳೆಯರಿಗೆಲ್ಲ ದೀಕ್ಷೆ ಕೊಟ್ಟು ಮಠ ಸೇರಿಸಿಕೊಂಡ ಶರಣ... ಕಾಲ ಸರಿದಂತೆ ಅವರನ್ನೆಲ್ಲಾ ಸಾಕುವುದು ದುಬಾರಿ ಹೊರೆಯೆನ್ನುವ... ಮನವರಿಕೆಯಾದ್ದರಿಂದಲೇ ತಾವಾಗಿಯೇ ಹಣಕೊಟ್ಟೊ, ಮದುವೆ ಮಾಡಿಸಿ... ಶರಣರು ಸಾಗ ಹಾಕುತ್ತಿದ್ದಾರೆ ಅನ್ನೋ ಪುರಾವೆಯಿಲ್ಲದ ಮಾತುಗಳು ಮಠದ ... ಹರಿದಾಡುತ್ತಿರುವುದಕ್ಕೂ ದಿನದಿಂದ ದಿನಕ್ಕೆ ಇಂತಹ ಸಾಧಕಿಯರ ಪ್ರಕ... ಹೆಚ್ಚಾಗುತ್ತಿರುವುದಕ್ಕೂ ಏನು ಸಂಬಂಧವೋ ಆ ಮುರುಘೇಶನೇ ಬಲ್ಲ.



ಬಸವ ಹರಳಯ್ಯ ಸ್ವಾಮಿ

...ಸ್ಥಾಪಿಸಲು ಇದೇ ಮುಖ್ಯ ಕಾರಣ.

ನಾಲ್ಕು ವರ್ಷದ ಹಿಂದೆ.....

ಮೊನ್ನೆ ಉದ್ಘಾಟನೆಗೊಂಡ ಹರಳಯ್ಯ ಪೀಠದ ಬೆಳವಣಿಗೆಗಳು ಮುರುಘಾ ಮಠದ ಆವರಣದಲ್ಲಿ ಸುಮಾರು ನಾಲ್ಕು ವರ್ಷಗಳ ಹಿಂದೆಯೇ ಶುರುವಾಗಿದ್ದವು. 2012ರಲ್ಲಿ ಮುರುಘಾಮಠದಲ್ಲಿ ನಡೆದ ಶರಣ ಸಂಸ್ಕೃತಿ ಉತ್ಸವದ ವೇದಿಕೆಗೆ 'ಶಿವಶರಣ ಹರಳಯ್ಯ ವೇದಿಕೆ' ಎಂದು ನಾಮಕರಣ ಮಾಡಿದಾಗಲೇ ಹಲವರಲ್ಲಿ ಒಂದು ಸಣ್ಣ ಅನುಮಾನ ಮೂಡಿತ್ತು. ಸಮಾರಂಭದ ವೇದಿಕೆಯನ್ನೇ ಸಂಘಟನೆಯ ವೇದಿಕೆಯನ್ನಾಗಿಸಬಹುದೆನ್ನುವ ಅನುಮಾನಕ್ಕೆ ಇಂಬು ನೀಡುವಂತೆ 'ಶ್ರೀ ಮಹಾ ಶಿವಶರಣ ಹರಳಯ್ಯ ವೇದಿಕೆ' ವತಿಯಿಂದ ಮುರುಘಾ ಶರಣರಿಗೆ ಸನ್ಮಾನ ಎಂಬ ಕರಪತ್ರವೂ ಹರಿದಾಡಿ ಸದ್ದು ಮಾಡಿತ್ತು. ಆಗಲೇ ಇಡೀ ಮಾದಿಗ ಸಮುದಾಯದ ಪ್ರಜ್ಞಾವಂತರು ಮತ್ತು ಮಾದಾರ ಚನ್ನಯ್ಯ ಮಠದೊಳಗೂ ಆತಂಕದ ಚರ್ಚೆ ಶುರುವಾಗಿತ್ತು. ಆಗೆಲ್ಲ ಶಿವಮೂರ್ತಿ ಶರಣರು 'ಇಲ್ಲ ಇಲ್ಲಾ ಅದು ಬರೀ ಹರಳಯ್ಯನ ವೇದಿಕೆ ಅಷ್ಟೆ' ಅಂತಾನೇ ಸಮಜಾಯಿಷಿ ನೀಡುತ್ತಾ ಬಂದಿದ್ದರು. ಆದರೆ 9.10.2012ರಂದು ನಡೆದ ಶರಣರ ಅಭಿನಂದನಾ ಸಮಾರಂಭಕ್ಕೆಂದು ಮುದ್ರಿಸಿದ್ದ ಆಹ್ವಾನ ಪತ್ರಿಕೆಯಲ್ಲಿ ಸಾನಿಧ್ಯ ವಹಿಸುವ ಜಗದ್ಗುರುಗಳ ಹೆಸರಿನ ಸಾಲಿನಲ್ಲಿ ಶ್ರೀ ಬಸವ ಹರಳಯ್ಯ ಮಹಾಸ್ವಾಮಿಗಳು, ಶ್ರೀ ಮಹಾ ಶಿವಶರಣ ಹರಳಯ್ಯ ಗುರುಪೀಠ, ಚಿತ್ರದುರ್ಗ ಅಂತ ಪ್ರಿಂಟಾಗಿತ್ತು. ಅಲ್ಲಿಗೆ ಮಾದಾರ ಚೆನ್ನಯ್ಯ ಮಠಕ್ಕೆ ಪರ್ಯಾಯ ಮಠ ಸ್ಥಾಪಿಸುವ ಶರಣರ ಅಸಲಿ ಹುನ್ನಾರ ಜಗಜ್ಜಾಹೀರು ಗೊಂಡಿತ್ತು.

ಮಾದಿಗ ಸಮುದಾಯದೊಳಗೆ ಮೂರು ಉಪಜಾತಿಗಳಿವೆ. ಇವಿಷ್ಟೂ ಉಪಜಾತಿಗಳು ಮಾದಾರ ಚೆನ್ನಯ್ಯ ಪೀಠಕ್ಕೆ ನಡೆದುಕೊಂಡು ಬರುತ್ತಿದ್ದಾರೆ. ಹೀಗಿರುವಾಗ ಮತ್ತೊಂದು ಪೀಠ ಸ್ಥಾಪಿಸುವ ಅಗತ್ಯವೇನು ಅಂತ ಪ್ರಶ್ನೆಗಳು ಭುಗಿಲೆದ್ದಿದ್ದರಿಂದ ಮುರುಘಾ ಶರಣರು ಹರಳಯ್ಯ ಪೀಠ ಸ್ಥಾಪನೆಯನ್ನು ಕೊಂಚ ಕಾಲ ಮುಂದಕ್ಕೆ ಹಾಕಿದ್ದರು. ಆದರೆ ಮಾದಾರ ಚೆನ್ನಯ್ಯ ಸ್ವಾಮಿಯ ಮೇಲೆ ಅವರಿಗಿದ್ದ ಮುನಿಸು ಒಳಗಿಂದೊಳಗೇ ಅದಕ್ಕೆ ಮುಹೂರ್ತವನ್ನಿಡುತ್ತಲೇ ಇತ್ತು. ಅದು ಜುಲೈ 10ರಂದು ಈಡೇರಿದೆ. ಮಾದಿಗ ಸಮುದಾಯವನ್ನು ಹೊಡೆಯುವ ಯಾವ ಹುನ್ನಾರವೂ ತನಗಿಲ್ಲ ಎಂಬುದನ್ನು ಸಾಬೀತುಮಾಡುವ ಅನಿವಾರ್ಯತೆಯ ಕಾರಣಕ್ಕಾಗಿ ಉದ್ಘಾಟನೆಯ ಸಮಾರಂಭಕ್ಕೆ ಮಾದಾರ ಚೆನ್ನಯ್ಯ ಸ್ವಾಮೀಜಿಗೂ ಆಹ್ವಾನ ಕಳುಹಿಸಲಾಗಿತ್ತು. ಆದರೆ ಶಿವಮೂರ್ತಿ ಶರಣರ ಉದ್ದೇಶವನ್ನು ಚೆನ್ನಾಗಿಯೇ ಅರಿತಿರುವ ಚೆನ್ನಯ್ಯ ಸ್ವಾಮಿ ಆ ಸಮಾರಂಭಕ್ಕೆ ಹಾಜರಾಗಲಿಲ್ಲ. ಆದರೆ ಅಚ್ಚರಿಯ ಬೆಳವಣಿಗೆಯಲ್ಲಿ ಅದೇ ಮಾದಾರ ಚೆನ್ನಯ್ಯ ಮಠದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಎಚ್.ಆಂಜನೇಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಸಚಿವ ಆಂಜನೇಯರಿಗೂ ಮಾದಾರ ಚೆನ್ನಯ್ಯ ಸ್ವಾಮೀಜಿಗೂ ವೈಮನಸ್ಸು ಉಂಟಾಗಿದೆ ಅಂತ ಇಷ್ಟುದಿನ ಅನಧಿಕೃತವಾಗಿ ಹರಿದಾಡುತ್ತಿದ್ದ ಸುದ್ದಿಗೆ ಆಂಜನೇಯರ ಉಪಸ್ಥಿತಿ ಮತ್ತಷ್ಟು ಪುಷ್ಟಿ ನೀಡುವಂತಿರುವುದು ಸುಳ್ಳಲ್ಲ.

ಒಟ್ಟಿನಲ್ಲಿ ಮುರುಘಾ ಮಠದಲ್ಲಿ ಶರಣನಾಗಿ ಒಂದೆರಡು ವರ್ಷ ಓಡಾಡಿಕೊಂಡಿದ್ದರೆ, ಎರಡು ಎಕರೆ ಜಮೀನು ಕೊಟ್ಟು, ಒಂದು ಮಠವನ್ನೂ ಕಟ್ಟಿಕೊಟ್ಟು ಪೀಠಾಧಿಪತಿ ಯನ್ನಾಗಿ ಮಾಡಿಬಿಡುತ್ತಾರೆ ಅನ್ನೋ ಹಳೆಯ ಜೋಕಿಗೆ ಶಿವಮೂರ್ತಿ ಶರಣರು ಹೊಸ ಭಾಷ್ಯ ಬರೆದಿರೋದು ದುರಂತ. ಅತಿಯಾದರೆ ಅಮೃತವೂ ವಿಷವೆನ್ನುವ ಸತ್ಯ ಮುರುಘಾ ಶರಣರಿಗೆ ಈಗಲಾದರೂ ಅರ್ಥವಾದರೆ ಮಠದ 'ಜಗತಿಕರ' ಛಾಯೆ ಕಿಂಚಿತ್ತಾದರೂ ಉಳಿದುಕೊಂಡೀತು.

■ ಟಿ.ಎನ್. ಷಣ್ಮುಖಿ

ದಲಿತ ದೌರ್ಜನ್ಯ
ಗುಜರಾತ್ ಮಾದರಿ ಅಂದ್ರೆ ಇದೇನಾ?

ಗುಜರಾತ್ ಹೊತ್ತಿ ಉರಿಯುತ್ತಿದೆ. ಸೌರಾಷ್ಟ್ರ ಪ್ರಾಂತ್ಯದ ಜುನಾಗಢ್, ಗೊಂಡಾಲ್, ಅಹ್ಮದಾಬಾದ್, ಗಿರ್ ಸೋಮನಾಥ್ ಜಿಲ್ಲೆಗಳಂತೂ ಅಕ್ಷರಶಃ ಅಗ್ನಿಗೆ ಆಹುತಿಯಾದಂತೆ ಧಗಧಗಿಸುತ್ತಿವೆ. ಅದು ಅಂತಿಂಥ ಜ್ವಾಲೆಯಲ್ಲ, ಶತಮಾನಗಳಿಂದ ಶೋಷಣೆಗೆ ತುತ್ತಾಗಿ ನೊಂದ ಜೀವಗಳ ಆಕ್ರೋಶಭರಿತ ಜ್ವಾಲೆಗಳು. ಮೊನ್ನೆ ಜುಲೈ 11ರಂದು ಆರ್‌ಎಸ್ಸೆಸ್ ಬೆಂಬಲಿತ 'ಗೋರಕ್ಷಕ ಸಮಿತಿ'ಯ ಒಂದಷ್ಟು ಖೂಳರು ಮಾನವೀಯತೆಯನ್ನು ಮನೆಯಲ್ಲೇ ಮರೆತುಬಂದವರಂತೆ ದಲಿತರನ್ನು ಅಮಾನುಷವಾಗಿ ಬಡಿದ ಹೀನಕೃತ್ಯಕ್ಕೆ ಪ್ರತಿಯಾಗಿ ಇಡೀ ದೇಶದ ದಲಿತ ಸಮುದಾಯವೇ ಸಿಡಿದು ನಿಂತಿದೆ.

ಯಾವ ಗುಜರಾತ್ ಮಾದರಿಯನ್ನು ತೋರಿಸಿ ಮೋದಿ ಪ್ರಧಾನಿ ಹುದ್ದೆ ಗಿಟ್ಟಿಸಿಕೊಂಡನೋ ಆ ಮಾದರಿಯ ಅಸಲೀ ಮುಖವಾಡವನ್ನು ಗುಜರಾತಿ ದಲಿತರೇ ಬೆತ್ತಲಾಗಿಸುತ್ತಿದ್ದಾರೆ. ಮನುವಾದ, ಕೋಮುವಾದ, ದಲಿತದ್ರೋಹಿ ಸೈತಾನಿ ತತ್ವಗಳೇ ಮೋದಿ ಮಾದರಿಯ ಅಜೆಂಡಾಗಳು. ಹಾಗಾಗಿ ಅಲ್ಲಿ ಅಲ್ಪಸಂಖ್ಯಾತರು ಮತ್ತು ದಲಿತರಿಗೆ ಕಿಂಚಿತ್ತೂ ಗೌರವವಿಲ್ಲ. ಸಮುದಾಯದ ಆತ್ಮಗೌರವವನ್ನು ಸರ್ವಾಧಿಕಾರಿಯೊಬ್ಬ ಅದೆಷ್ಟು ದಿನ ತಾನೆ ಅದುಮಿಡಲು ಸಾಧ್ಯ? ದಲಿತರ ಸಿಟ್ಟಿನ ಕಟ್ಟೆಯೊಡೆದಿದೆ. ಉನಾ ಘಟನೆ ಅದಕ್ಕೊಂದು ನೆಪ.


ಮುಗಿಬಿದ್ದ ಮೃಗಗಳು

ಶಾಂತಿದೂತನ ನೆಲದಲ್ಲಿ 'ಗೋಧ್ರಾ'ದ ನೆತ್ತರು ಹರಿಸಿದ ದಿನದಿಂದಲೂ ಗುಜರಾತ್ ಸೌಹಾರ್ದತೆಯ ಪ್ರತೀಕವಾಗಿ ಉಳಿದಿಲ್ಲ. ಅಂತಹ ಗುಜರಾತ್‌ನ ಗಿರ್ ಸೋಮನಾಥಪುರ ಜಿಲ್ಲೆಯ ಮೋಟಾ ಸಮಾಧಿಯಾಲ್ ಎಂಬ ಊರಿನಲ್ಲಿ ಜುಲೈ 11ರಂದು ಎರಡು ದನಗಳು ಸತ್ತುಬಿದ್ದಿದ್ದವು. ಹೇಳಿಕೇಳಿ ಸಿಂಹಗಳ ರಕ್ಷಿತಾರಣ್ಯ ಗಿರ್ ಕಾಡುಗಳಿಗೆ ಅಂಟಿಕೊಂಡಿರುವ ಆ ಊರಿನ ದನಗಳನ್ನು ಸಿಂಹಗಳು ಹಿಂದಿನ ದಿನವಷ್ಟೇ ಕೊಂದು, ಅರ್ಧಂಬರ್ಧ ತಿಂದು ಬಿಸಾಕಿ ಹೋಗಿದ್ದವು.


ಈ ಸಮಾಜ ಸತ್ತ ದನಗಳ ವಿಲೇವಾರಿ ಕಾರ್ಯವನ್ನು ತಮ್ಮ ಹೆಗಲಿಗೆ ಹೊರಿಸಿರುವುದರಿಂದ ಅದೇ ಊರಿನ ಬಾಲು ಸರವಯ್ಯ ಎಂಬ ದಲಿತ ಕುಟುಂಬ ಸಿಂಹಗಳಿಗೆ ಆಹುತಿಯಾಗಿದ್ದ ದನಗಳ ಚರ್ಮ ಸುಲಿಯಲು ಮುಂದಾಗಿದ್ದು ಅವರ ಪಾಲಿಗೆ ದೊಡ್ಡ ಅನಾಹುತವನ್ನೇ ತಂದಿಟ್ಟಿತ್ತು. ಗುಜರಾತಿನಲ್ಲಿ ಕೋಮು ರಾಜಕಾರಣದ ಫಲವಾಗಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ಜನಸಮುದಾಯದಲ್ಲಿ ತಮ್ಮ ಭೀತಿಯನ್ನು ಕಾಪಿಟ್ಟುಕೊಳ್ಳಲು ಬಲಪಂಥೀಯ ಸಂಘಟನೆಗಳು 'ಗೋ ರಕ್ಷಕರ ಸಮಿತಿ' ಅನ್ನೋ ಒಂದಷ್ಟು ಗೂಂಡಾಗಳನ್ನು ಚಲಾವಣೆಗೆ ಬಿಟ್ಟಿವೆ.

ಅಂತಹದ್ದೇ ನಾಲ್ಕು ಜನರ ಗುಂಪೊಂದು ಬಾಲು ಸರವಯ್ಯಾ ಸತ್ತ ದನಗಳ ಚರ್ಮ ಸುಲಿಯುತ್ತಿದ್ದ ಸ್ಥಳಕ್ಕಾಗಮಿಸಿ 'ನೀವು ದನಗಳನ್ನು ಕೊಂದು ಚರ್ಮ ಸುಲಿಯುತ್ತಿದ್ದೀರಿ' ಅಂತ ವರಾತ ತೆಗೆದಿದ್ದರು. ಅವು ತಾವು ಸಾಯಿಸಿದ ದನಗಳಲ್ಲ, ಸಿಂಹಗಳಿಗೆ ಬಲಿಯಾದ ದನಗಳು ಅಂತ ಎಷ್ಟೇ ಸಮಜಾಯಿಷಿ ಕೊಟ್ಟರೂ ಒಪ್ಪದೆ ದಲಿತ ಕುಟುಂಬದ ನಾಲ್ವರನ್ನೂ ಹಿಗ್ಗಾಮುಗ್ಗಾ ಥಳಿಸಿದ್ದರು. ಅವರ ವಿಕೃತಿ ಅದೆಷ್ಟು ವಿಪರೀತಕ್ಕೆ ಹೋಗಿ ತಲುಪಿತ್ತೆಂದರೆ ತಮ್ಮ ಆ ಘನಕಾರ್ಯವನ್ನು ಇಂಚಿಂಚೂ ಮೊಬೈಲ್‌ನಲ್ಲಿ ವೀಡಿಯೋ ಮಾಡಿಕೊಂಡು ಹಿಗ್ಗಿದ್ದರು.


ಅಷ್ಟಾದರೂ ಅವರ ವಿಕೃತಿ ತಣಿಯಲಿಲ್ಲ. ಕೂಡಲೇ ಊರಿಗೆ ಧಾವಿಸಿ ಮತ್ತೊಂದಷ್ಟು 'ಗೋಮುಖ' ವ್ಯಾಘ್ರಗಳನ್ನು ಕರೆತಂದು ದಲಿತರ ಮೇಲೆ ಹಲ್ಲೆ ನಡೆಸಿದ್ದರು. ಆ ಅಮಾಯಕ ಜೀವಗಳು ದಮ್ಮಯ್ಯ ಅಂತ ಬೇಡುತ್ತಿದ್ದರೆ ಗೋರಕ್ಷಕರು ಮನದಲ್ಲಿ ಮನುಷ್ಯತ್ವ ಬತ್ತಿಹೋದವರಂತೆ ವಿಜೃಂಭಿಸುತ್ತಿದ್ದರು. ಒಬ್ಬರಾದ ನಂತರ ಒಬ್ಬರು ಸರದಿ ಸಾಲಿನಲ್ಲಿ ಕಬ್ಬಿಣದ ರಾಡುಗಳಿಂದ ಹೊಡೆಯುತ್ತಿದ್ದ ಅವರ ಪಾಲಿಗೆ ಬಿದ್ದು ನರಳಾಡುತ್ತಿದ್ದ ದಲಿತರು ಮನುಷ್ಯರು ಅಂತಿರಲಿ, ಪ್ರಾಣಿಗಳೇ ಅಲ್ಲವೇನೋ ಎಂಬ ಭಾವನೆಯಿದ್ದಂತಿದೆ. ಅಷ್ಟಕ್ಕೂ, ಆರೆಸ್ಸೆಸ್ ಮತ್ತು ಸಮಸ್ತ ಬಲಪಂಥೀಯ ಧೋರಣೆಯೇ ಇದಲ್ಲವೆ....!



ಆನಂದಿಬೆನ್



ಮೋದಿ



ಗುಜರಾತ್ ಉನಾ ಘಟನೆ

ಮೋದಿಯ ಗುಜರಾತ್‌ನಲ್ಲಿ ಕಾನೂನು ಸುವ್ಯವಸ್ಥೆ ಅದೆಷ್ಟು ಕುಸಿದು ಹೋಗಿದೆಯೆಂದರೆ ಮೋಟಾ ಸಮಾಯಲ್ ಗ್ರಾಮದಿಂದ ಅಷ್ಟು ದಲಿತರನ್ನು ಟ್ರಕ್‌ನಲ್ಲಿ ತುರುಕಿಕೊಂಡು ಬಂದು ಉನಾ ಎಂಬ ಪಟ್ಟಣದ ಪೊಲೀಸ್ ಠಾಣೆಯ ಮುಂದೆಯೇ ಮತ್ತಷ್ಟು ಹೀನ ಹಲ್ಲೆಗಿಳಿದಿದ್ದರು. ಸರ್ವರಿಗೂ ಸಮಾನ ಬದುಕಿನ ಭರವಸೆ ನೀಡುವ ಸಂವಿಧಾನವನ್ನು ಆಧಾರವಾಗಿಟ್ಟುಕೊಂಡು ವೃತ್ತಿಗಿಳಿದ ಪೊಲೀಸರು ಸಹ ದಲಿತರ ಮೇಲೆ ನಡೆಯುತ್ತಿದ್ದ ಆ ಅಮಾನವೀಯ ದೌರ್ಜನ್ಯಕ್ಕೆ ಮೂಕಸಾಕ್ಷಿಯಂತೆ ನಿಂತಿದ್ದು ವಿಪರ್ಯಾಸ.

ಆ ದಲಿತರ ಮೈಮೇಲೆ ಬೀಳುತ್ತಿದ್ದ ಒಂದೊಂದು ಏಟು ಇಡೀ ಶೋಷಿತ ಸಮುದಾಯದ ಆತ್ಮಗೌರವದ ಮೇಲೆ ನಡೆಸುತ್ತಿದ್ದ ಹಲ್ಲೆಯನ್ನು ಪ್ರತಿನಿಧಿಸಿದ್ದು ಸುಳ್ಳಲ್ಲ. ಅದೇ ರೀತಿ ರಾಜ್ಯ ಮತ್ತು ಕೇಂದ್ರಗಳೆರಡಲ್ಲೂ ನಮ್ಮವರೇ ಅಧಿಕಾರದಲ್ಲಿದ್ದಾರೆ ಅನ್ನೋ ಹುಂಬತನವೇ 'ಗೋರಕ್ಷಕರು' ಆ ಪರಿ ವಿಜೃಂಭಿಸಲು ಕಾರಣ ಅನ್ನೊದು ಕೂಡಾ ಅಷ್ಟೇ ಸತ್ಯ!

ಅದು ಪ್ರತಿಭಟನೆಯಲ್ಲ

ಉನಾ ಘಟನೆಯ ವೀಡಿಯೋ ವೈರಲ್ ಆಗಿ ಹರಿದಾಡುತ್ತಿದ್ದಂತೆಯೇ ದಲಿತ ಸಮುದಾಯ ರೊಚ್ಚಿಗೆದ್ದಿದೆ. ಮುಖ್ಯವಾಹಿನಿ ಮೀಡಿಯಾಗಳು ಗುಜರಾತ್‌ನ ಜ್ವಾಲೆಯನ್ನು ದಲಿತರ ಪ್ರತಿಭಟನೆ ಅಂತ ಬಣ್ಣಿಸುತ್ತಿವೆ. ಆದರೆ ಅದು ಪ್ರತಿಭಟನೆಯಲ್ಲ; ಒಡಲಾಳದ ಆಕ್ರೋಶ, ಆತ್ಮಗೌರವದ ಕಿಚ್ಚು! ಅದನ್ನು ಪ್ರತಿಭಟನೆ ಅಂತ ತಣ್ಣಗಿನ ದೃಷ್ಟಿಯಲ್ಲೇ ಅಳೆಯುವುದೇ ತಪ್ಪು.

ಈಗಾಗಲೇ ಸುಮಾರು ದಲಿತರು ಸಾಮೂಹಿಕ ಆತ್ಮಹತ್ಯೆಗೆ ಮುಂದಾಗಿದ್ದಾರೆ. ಅನಿಲ್ ಮಹ್ದದ್ ಎಂಬ ಕಾಂಗ್ರೆಸ್‌ನ ದಲಿತ ಮುಖಂಡ ಕೂಡ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದು ದಲಿತರ ಆಕ್ರೋಶದ ಆಳವನ್ನೂ ಅರ್ಥ ಮಾಡಿಸುತ್ತದೆ. ಅದರಲ್ಲಿ ಖಂಬಾಲಿಯಾ ಊರಿನ ಹೇಮಂತ ಭಾಕಾ ಸೋಲಂಕಿ ಎಂಬ ದಲಿತ ಸಾವನ್ನೇ ಅಪ್ಪಿದ್ದಾನೆ. ದಿನದಿಂದ ದಿನಕ್ಕೆ ಇಂತಹ ಆತ್ಮಹತ್ಯೆಯ ಆಕ್ರೋಶಗಳು ಗುಜರಾತ್ ಸರ್ಕಾರವನ್ನೇ ಅಲ್ಲಾಡಿಸುತ್ತಿವೆ. ಗುಜರಾತ್ ಸಿಎಂ ಆನಂದಿಬೆನ್‌ರಂತೂ ಅಕ್ಷರಶಃ ದಿಕ್ಕೆಟ್ಟು ಹೋಗಿದ್ದಾರೆ. ಕೇವಲ 60 ದಿನಗಳ ಒಳಗೆ ಇಡೀ ಪ್ರಕರಣದ ಎಲ್ಲಾ ಆರೋಪಿಗಳನ್ನು ಜೈಲಿಗಟ್ಟುತ್ತೇವೆ ಅಂತ ಆನಂದಿ ಮೇಡಂ ಬೇಡಿಕೊಂಡ ಮೇಲೂ, ಅದಾಗಲೇ ಪ್ರಕರಣಕ್ಕೆ ಸಂಬಂಧಿಸಿ 16 ಜನರನ್ನು ಬಂಧಿಸಿದ ಮೇಲೂ ದಲಿತರ ಆಕ್ರೋಶ ತಣ್ಣಗಾಗುತ್ತಿಲ್ಲ ಎಂದಾದರೆ, ಅದು ಕೇವಲ ಉನಾ ಘಟನೆಗೆ ಪ್ರತಿಯಾಗಿ ಹೊಮ್ಮಿದ್ದ ಕಿಚ್ಚಲ್ಲ; ದಲಿತರ ಶೋಷಣೆಯನ್ನು ಧಿಕ್ಕರಿಸಿ ಹಬ್ಬಿದ ಕಿಚ್ಚು ಎನ್ನುವುದನ್ನು ಈ ಸಮಾಜ ಅರ್ಥಮಾಡಿಕೊಳ್ಳಬೇಕಿದೆ.

ರಾಜಕೋಟ್ ಮತ್ತು ಧರೋಜಿ ನಗರಗಳು ಘಟನೆಯ ನಂತರ ಪ್ರಕ್ಷುಬ್ಧ ಪರಿಸ್ಥಿತಿಗೆ ತಲುಪಿದ್ದರೆ ರಾಜ್ಯದ ಮೂಲೆಮೂಲೆಯಲ್ಲಿ ಸತ್ತ ದನಗಳ ರಾಶಿಗಳನ್ನು ಟ್ರಕ್‌ನಲ್ಲಿ ಹೇರಿಕೊಂಡು ಬಂದು ಸರ್ಕಾರಿ ಕಚೇರಿಗಳ ಮುಂದೆ ಸುರಿದು ಸಿಡಿದು ನಿಲ್ಲುತ್ತಿದ್ದಾರೆ. ಹಾಗೆ ಸುರಿಯುತ್ತಿರುವವರ ಆಕ್ರೋಶದ ಮಾತು ಒಂದೇ "ಇಷ್ಟು ದಿನ ಇವರು ಹೆಸರು ಹೇಳುವುದಕ್ಕೂ ಅಸಹ್ಯ ಪಟ್ಟುಕೊಳ್ಳುವ ಕೆಲಸಗಳನ್ನು ನಮ್ಮಿಂದ ಮಾಡಿಸಿದರು. ನಾವೂ ಅವರ ಮಾತಿಗೆ ತಲೆದೂಗಿ ಹಾಗೆಯೇ ನಡೆದುಕೊಂಡು ಬಂದೆವು. ಈಗ ಅವರೇ ಹೇಳಿದ್ದ ಆ ಕಾಯಕಗಳನ್ನು ಮಾಡಿದ್ದಕ್ಕೂ ನಮ್ಮ ಮೇಲೆ ಹಲ್ಲೆ ನಡೆಸುವುದಾದರೆ ನಾವ್ಯಾಕೆ ಅಂತಹ ಹೀನ ಬದುಕನ್ನು ಬಯಸಿ ಬಯಸಿ ಬಿಗಿದಪ್ಪಿಕೊಳ್ಳಬೇಕು. ನಾವು ತಂದು ಸುರಿದಿರುವ ಈ ದನಗಳನ್ನು 'ಗೋರಕ್ಷಕರೇ' ಬಂದು ಎತ್ತಿ ಬಿಸಾಡಲಿ, ತಮಗೆ ತಿಳಿದಂತೆ ಮಾಡಿಕೊಳ್ಳಲಿ."

ಜಾಗೃತರಾಗಿ, ಶಿಕ್ಷಿತರಾಗಿ, ಸಂಘಟಿತರಾಗಿ, ಪ್ರಶ್ನೆ ಮಾಡಿ ಅಂತ ಅಂಬೇಡ್ಕರ್ ಕನವರಿಸಿದ್ದು ಇದನ್ನೇ ಅಲ್ಲವೇ? ದಲಿತ ಸಮುದಾಯ ಇದನ್ನೊಂದು ಘಟನೆಯಂತೆ ನೋಡುತ್ತಿಲ್ಲ. ಚಳವಳಿಯಾಗಿ ಆವಾಹಿಸಿಕೊಳ್ಳುತ್ತಿದೆ. ಅವರ ಹತಾಶೆ ಅದೆಷ್ಟು ಕಂಗಾಲಾಗಿದೆಯೆಂದರೆ "ನಮ್ಮ ಮೇಲಿನ ಇಂತಹ ದೌರ್ಜನ್ಯಗಳಿಗೆ ಇತಿಶ್ರೀ ಹಾಡಿ, ಆ ಮನಸ್ಥಿತಿಯನ್ನು ನೀವು ಬದಲಾಯಿಸಿಕೊಳ್ಳದಿದ್ದರೆ, ನಮಗೆ ನಿಮ್ಮ ಹಿಂದೂ ಧರ್ಮವೇ ಬೇಡ. ನಾವು ಸಾಮೂಹಿಕವಾಗಿ ಹಿಂದೂ ಧರ್ಮವನ್ನು ತ್ಯಜಿಸುತ್ತೇವೆ" ಅನ್ನೋ ಎಚ್ಚರಿಕೆಗಳನ್ನೂ ಸೋಕಾಲ್ಡ್ ಧರ್ಮರಕ್ಷಕ ಸಂತತಿಯವರಿಗೆ ರವಾನಿಸಿದ್ದಾರೆ.

ಉನಾ ಘಟನೆಗೆ ಸಂಬಂಧಿಸಿ ರಚಿಸಲಾದ ಸತ್ಯಶೋಧನಾ ಸಮಿತಿಯಲ್ಲಿರುವ ಮಾನವ ಹಕ್ಕು ಹೋರಾಟಗಾರ ಕೌಶಿಕ್ ಪಾರ್ಕರ್ ಹೀಗೆ ಷರಾ ಬರೆದಿದ್ದಾರೆ. "ಈ ಘಟನೆ ದೇಶದಲ್ಲಿ ದಲಿತರ ಸ್ಥಿತಿಗೆ ಹಿಡಿದ ಕನ್ನಡಿ. ದಲಿತ ದ್ರೋಹಿ ಮನುಸ್ಮೃತಿಗರ ಜೊತೆಗೆ ಪೊಲೀಸರೂ ಇದರಲ್ಲಿ ಶಾಮೀಲಾಗಿರುವುದು ಸಾಬೀತಾಗಿದೆ. ಈಗಾಗಲೇ ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿರುವುದರಿಂದ ಸರ್ಕಾರ ಮತ್ತು ಪೊಲೀಸರೇ ಗೋಹತ್ಯೆಯನ್ನು ತಡೆಗಟ್ಟಬಲ್ಲರು. ಅಂತದ್ದರಲ್ಲಿ ಸರ್ಕಾರದ ಪರವಾಗಿ ಕೆಲಸ ಮಾಡಲು ಈ 'ಗೋರಕ್ಷಕರು' ಯಾರು? ಕೂಡಲೇ ರಾಜ್ಯದಲ್ಲಿ ಈ ಗೋರಕ್ಷಕ ಸಮಿತಿಗಳ ಮೇಲೆ ನಿಷೇಧ ಹೇರಬೇಕಾಗಿದೆ." ಕೌಶಿಕ್ ತಮ್ಮ ಮಾತಿನಲ್ಲಿ ಗೋರಕ್ಷಕರನ್ನಷ್ಟೇ ಪ್ರಸ್ತಾಪಿಸಿದ್ದಾರೆ. ಆದರೆ ಇಡೀ ಇಂಡಿಯಾದಲ್ಲಿ ಚಲಾವಣೆಯಲ್ಲಿರೋ ಗೋರಕ್ಷಕರು, ಅನೈತಿಕ ಪೊಲೀಸರು, ಸಂಸ್ಕೃತಿ ಸಿಪಾಯಿಗಳಿಗೆ ಇಂತದ್ದೇ ಗತಿ ಕಾಣಿಸದಿದ್ದರೆ ದೇಶ ಹಿಟ್ಲರನ ಜರ್ಮನಿ ಹಾದಿಯಲ್ಲಿ ಸಾಗುವುದನ್ನು ನಾವೆಲ್ಲ ಸುಮ್ಮನೇ ನೋಡುತ್ತಾ ಕೂರಬೇಕಾಗುತ್ತೆ.

ಗುಜರಾತ್ ದಲಿತರು ಅಂತಹದೊಂದು ಅವಕಾಶವನ್ನು ದೇಶದ ಮುಂದಿಟ್ಟಿದ್ದಾರೆ. ಇದು ಕೇವಲ ಗುಜರಾತ್‌ಗಷ್ಟೇ ಸೀಮಿತವಾದರೆ ದಲಿತ ಸಮುದಾಯಗಳ ಪಾಲಿಗೆ ಇದಕ್ಕಿಂತ ದೊಡ್ಡ ಸೋಲು ಮತ್ತೊಂದಿರಲಾರದು. ಹಾಗಂತ ಇದು ದಲಿತ ಸಮುದಾಯಗಳಿಗಷ್ಟೇ ಸೀಮಿತವಾಗಲೂಬಾರದು. ಮನುಷ್ಯ ಸಂಬಂಧಗಳನ್ನು ಗೌರವಿಸುವ ಪ್ರತಿಯೊಬ್ಬರೂ ಇದರ ಸುತ್ತ ತಮ್ಮನ್ನು ತೊಡಗಿಸಿಕೊಂಡು ಹೋರಾಟವನ್ನೂ ಘನೀಭವಿಸಬೇಕಾಗಿದೆ. ಇಲ್ಲದೆ ಹೋದರೆ ಕೆಲವೇ ದಿನಗಳಲ್ಲಿ ದಲಿತರ ದನಿಯನ್ನೂ ಅಡಗಿಸಿ, ಗುಜರಾತ್‌ನಲ್ಲಿ ಮತ್ತೆ 'ಅಭಿವೃದ್ಧಿ' ತಾಂಡವವಾಡಿಸುವುದು ಮೋದಿ ಟೀಮಿಗೇನು ಕಷ್ಟದ ಕೆಲಸವಲ್ಲ. ಕೆಲದಿನಗಳ ಹಿಂದಷ್ಟೇ ಹಾರ್ದಿಕ್ ಪಟೇಲ್ ನೇತೃತ್ವದಲ್ಲಿ ಪಟೇಲ್ ಸಮುದಾಯ ದಂಗೆ ಎದ್ದಿದ್ದಾಗ ಜಲಫಿರಂಗಿ ಹಾರಿಸುತ್ತಾ ಮೂಕಪ್ರೇಕ್ಷಕರಾಗಿದ್ದ ಪೊಲೀಸರು ಇವತ್ತು ದಲಿತರ ಮೇಲೆ ಮುರಕೊಂಡು ಬಿದ್ದು ಹಲ್ಲೆ ನಡೆಸುತ್ತಿದ್ದಾರೆ. ಲಾಠಿ ಚಾರ್ಜ್‌ನಿಂದ ದಲಿತರ ನೆತ್ತರನ್ನು ಚೆಲ್ಲಾಡುತ್ತಿದ್ದಾರೆ. ಮೋದಿ ಮತ್ತವರ ಕೇಸರಿ ಪಡೆಯಿಂದ ಇನ್ನೆಂಥ ಪ್ರತಿಕ್ರಿಯೆ ನಿರೀಕ್ಷಿಸಲು ಸಾಧ್ಯ.

ಇದಕ್ಕೆ ಉತ್ತರವನ್ನು ಇಂಡಿಯಾವೇ ಕೊಡಬೇಕು!

● ವರದಿಗಾರ









ಕಬಾಲಿ ಮೇನಿಯಾ!

ನೂರು ರೂಪಾಯಿಯ ಟಿಕೆಟ್ಟೊಂದಕ್ಕೆ ಥೇಟರಿನವರೇ ಇನ್ನೂರು ರೂಪಾಯಿಗೇರಿಸಿದಾಗಲೂ ಮುಗಿಬಿದ್ದ ಜನರನ್ನು ಚದುರಿಸಲು ಪೊಲೀಸರು ಲಾಠಿ ಚಾರ್ಜ್ ಮಾಡಬೇಕಾಯಿತು. 80ರ ದಶಕದಲ್ಲಿ ರಾಜ್‌ಕುಮಾರ್ ಚಿತ್ರಗಳಿಗೆ ಮುಗಿಬೀಳುತ್ತಿದ್ದ ರಸಿಕರನ್ನು ಹೇಗೆ ಪೊಲೀಸರು ಲಾಠಿ ಬೀಸಿ ಚದುರಿಸುತ್ತಿದ್ದರೋ ಅಂಥಾದ್ದೊಂದು ಪರಿಸ್ಥಿತಿಯನ್ನು ಬೆಂಗಳೂರಿನ ಮಟ್ಟಿಗೆ ಮತ್ತೆ ಹುಟ್ಟಿಹಾಕಿದ್ದು ರಜನಿಯ ಕಬಾಲಿ. ಶೇಷಾದ್ರಿಪುರದ ನಟರಾಜ್ ಚಿತ್ರಮಂದಿರದಲ್ಲಿ ಸದ್ಯ 'ಕಬಾಲಿ'ಯ ಟಿಕೆಟ್ಟೊಂದಕ್ಕೆ ಎರಡು ಸಾವಿರದ ಬ್ಲಾಕ್ ರೇಟು.

ಬೆಂಗಳೂರಿನ ಅರವತ್ತಕ್ಕೂ ಅಧಿಕ ಮಲ್ಟಿಪ್ಲೆಕ್ಸ್‌ಗಳಲ್ಲಿ ಮೂರೂ ದಿನದ ಷೋಗಳು ಈಗಾಗಲೇ ಸೋಲ್ಡ್ ಔಟ್. ಇನ್ನು ಥೇಟರುಗಳಲ್ಲೂ ಮೂರು ದಿನಕ್ಕೆ ಮೊದಲು ಕಬಾಲಿ ನೋಡಲೇಬೇಕೆಂದರೆ ಕಮ್ಮಿಯೆಂದರೂ ಸಾವಿರ ರೂಪಾಯಿ ತೆರಲೇಬೇಕು. ಯಾವುದೇ ನ್ಯೂಸ್ ಚಾನಲ್ ನೋಡಿದರೂ ಕಬಾಲಿಯದ್ದೇ ಸುದ್ದಿ. ಫೇಸ್‌ಬುಕ್, ವಾಟ್ಸಪ್ಪುಗಳಲ್ಲೂ ಇಂಥದ್ದೇ ತುಣುಕುಗಳು. ದಿನಪತ್ರಿಕೆಗಳಲ್ಲಂತೂ ಈ ಬಗ್ಗೆ ಒಂದಲ್ಲ ಒಂದು ಸುದ್ದಿ ಇದ್ದೇ ಇರುತ್ತದೆ.

ಏರ್ ಏಷಿಯಾ ಎಂಬ ವಿಮಾನಯಾನ ಸಂಸ್ಥೆಯೊಂದು ಬೆಂಗಳೂರಿನಿಂದ ಚೆನ್ನೈಗೆ ಕರೆದೊಯ್ದು ಅಲ್ಲಿನ ಸತ್ಯಂ ಚಿತ್ರಮಂದಿರದಲ್ಲಿ ಕಬಾಲಿ ತೋರಿಸಿ ಜೊತೆಗೊಂದು ಊಟವನ್ನೂ ಹಾಕಿಸಿ ಅದಕ್ಕೊಂದು ವಿಧಿಸುವುದು 7860 ರೂ.ಗಳನ್ನು. ಈ ಪಾಟಿ ಮೊತ್ತವನ್ನು ತೆತ್ತಾದರೂ ರಜನಿಯ ಕಬಾಲಿ ನೋಡಿಬರುವ ಭಕ್ತರಿಗೇನೂ ಬೆಂಗಳೂರಿನಲ್ಲಿ ಕೊರತೆಯಿಲ್ಲ. ಮುತ್ತೂಟ್ ಫೈನಾನ್ಸ್ ತನ್ನ ಗಿರವಿ ಗಿರಾಕಿಗಳಿಗೆಂದೇ ಕಬಾಲಿಯ ಬೆಳ್ಳಿ ನಾಣ್ಯಗಳನ್ನು ಬಿಟ್ಟಿದೆ. ಎಫ್‌ಎಂ ರೇಡಿಯೋ ಚಾನಲ್ಲೊಂದು 'ಕಬಾಲಿ' ಟಿಕೆಟ್ಟುಗಳನ್ನೇ ಬಹುಮಾನವಾಗಿಟ್ಟು ವಿಚಿತ್ರ ಸ್ಪರ್ಧೆಯೊಂದನ್ನಿಟ್ಟಿದೆ. ಬೆಂಗಳೂರಿನ ಎರಡು ಪ್ರತಿಷ್ಠಿತ ಕಂಪೆನಿಗಳಂತೂ 'ಕಬಾಲಿ' ಚಿತ್ರದ ಬಿಡುಗಡೆಯ ದಿನದಂದು ರಜಾ ಘೋಷಿಸಿ ತಮ್ಮ ಸಿಬ್ಬಂದಿಗಳಿಗೆಂದೇ ಪಿವಿಆರ್‌ನಲ್ಲಿ ವಿಶೇಷ ಪ್ರದರ್ಶನಗಳನ್ನೇರ್ಪಡಿಸಿದೆ. ಒಂದು ಥೇಟರಿನಲ್ಲಿ ಬೆಳಗ್ಗೆ ಮುಸುಕಿನ ನಾಲ್ಕು ಗಂಟೆಗೇ 'ಕಬಾಲಿ'ಯ ವಿಶೇಷ ಪ್ರದರ್ಶನವಂತೆ. ಮತ್ತೊಂದರಲ್ಲಿ ಮುಂಜಾನೆ ಐದಕ್ಕಂತೆ. ವಿಚಿತ್ರವೆಂದರೆ ಬೆಳಕು ಹರಿಯುವ ಮೊದಲೇ ಇಟ್ಟ ಷೋಗಳ ಟಿಕೆಟ್ಟುಗಳೂ ಸೋಲ್ಡ್ ಔಟಂತೆ!

ಇದು ರಜನಿ ಮೇನಿಯಾ! ಈ ಹಿಂದೆ 'ಲಿಂಗಾ' ತೆರೆಕಂಡಾಗಲೂ ಈ ಪಾಟಿ ಹುಚ್ಚು ಹೆಚ್ಚಿರಲಿಲ್ಲ. ಅದಕ್ಕೂ ಮುನ್ನ 'ಯಂದಿರನ್' ಇಡೀ ದೇಶಾದ್ಯಂತ ಆರ್ಭಟಿಸಿದ್ದಾಗಲೂ ಈಗಿನಷ್ಟು ಅತಿರೇಕಗಳಾಗಿದ್ದಿಲ್ಲ. 'ಕಬಾಲಿ' ಹೆಸರಾಂತ ಡೈರೆಕ್ಟರ್ ಶಂಕರ್‌ನ ಚಿತ್ರವಾಗಿದ್ದರೆ ಆ ಮಾತು ಬೇರೆ. ಪಿ. ರಂಜಿತ್ ಎಂಬ ಸಾಧಾರಣ ಮಟ್ಟದ ಡೈರೆಕ್ಟರ್‌ನ ಅದ್ದೂರಿ ಚಿತ್ರವೇನೋ ಸರಿ. ಆದರೆ ರಜನಿ ಚಿತ್ರವೆಂಬ ಒಂದೇ ಕಾರಣಕ್ಕೆ ಬೆಂಗಳೂರಿನಲ್ಲೇ ಈಪಾಟಿ ಹುಚ್ಚೆಂದರೆ ಇನ್ನು ತಮಿಳುನಾಡಿನ ಅತಿರೇಕ ಇನ್ನಾವ ಮಟ್ಟಕ್ಕಿರಬೇಡ?

ಕನ್ನಡದ ಯಾರೇ ಸೂಪರ್ ಸ್ಟಾರ್‌ಗೂ ಇಲ್ಲದ ಕ್ರೇಜ್ ರಜನಿಯ 'ಕಬಾಲಿ'ಗೆ ಹುಟ್ಟಿಕೊಂಡಿದ್ದಾದರೂ ಹೇಗೆ? ಬಾಲಿವುಡ್‌ನ ಸಲ್ಮಾನ್‌ನ 'ಸುಲ್ತಾನ್' ರಾಜಮೌಳಿಯ 'ಬಾಹುಬಲಿ', ಚಿರಂಜೀವಿ, ಶಾರುಖ್, ಅಮಿತಾಭ್ ಇತ್ಯಾದಿ ಯಾರೇ ನಟರ ಬೇರೆ ಯಾವುದೇ ಚಿತ್ರಗಳಿಗಿಲ್ಲದ ಕ್ರೇಜ್ ಕಬಾಲಿಗೇ ಏಕೆ? 'ಕಬಾಲಿ'ಯಲ್ಲಿ ಅಂಥಾದ್ದೇನಿದೆ? ಕಬಾಲಿಯನ್ನು ಈ ಮಟ್ಟದ ಸಮೂಹ ಸನ್ನಿಯೊಂದಕ್ಕೆ ರೂಪಿಸಿದ ತಂತ್ರವಾದರೂ ಏನು?

ರಜನಿಯ ಹಿಂದಿನ ಚಿತ್ರಗಳಾದ ಲಿಂಗಾ, ಯಂದಿರನ್, ಶಿವಾಜಿ ಮುಂತಾದ ಚಿತ್ರಗಳು ಹೆಸರಾಂತ ಡೈರೆಕ್ಟರ್ ಶಂಕರ್‌ನ ಪ್ರತಿಭೆಗೋ ಅಥವಾ ತಮಿಳುನಾಡು-ಕೇರಳಗಳ ನಡುವಿನ ಮುಲ್ಲೈ ಪೆರಿಯಾರ್ ಜಲಾಶಯದ ವಿವಾದದ ಕಾರಣಕ್ಕೋ ಕುತೂಹಲ ಹುಟ್ಟಿಸಿದ್ದವಾದರೂ ಅವು ಬಿಡುಗಡೆಯಾಗುವ ಹೊತ್ತಿಗೆ ಕ್ರೇಜ್ ಹಿಂದಿಗಿಂತಲೂ ದುಪ್ಪಟ್ಟು ಹೆಚ್ಚಾಗಿದ್ದಂತೂ ಸತ್ಯವೇ. ಇದರರ್ಥ ರಜನಿಯ ಕ್ರೇಜ್ ಚಿತ್ರದಿಂದ ಚಿತ್ರಕ್ಕೆ ವಿಸ್ತರಿಸುತ್ತಲೇ ಬಂದಿದೆ. ಅಂಥದ್ದೇ ನಿರೀಕ್ಷೆ ಈ ಹಿಂದಿನ 'ಲಿಂಗಾ'ದ ಮೇಲಿತ್ತು. ಯಾವತ್ತು 'ಲಿಂಗಾ' ನಿರೀಕ್ಷಿತ ಮಟ್ಟ ಮುಟ್ಟಲಿಲ್ಲವೋ ರಜನಿ ರಸಿಕರ ದಾಹ ತಣಿಯದೇ ಉಳಿದುಬಿಟ್ಟಿತ್ತು. ಯಂದಿರನ್, ಶಿವಾಜಿ, ಪಡೆಯಪ್ಪ, 'ಬಾಷಾ' ಇತ್ಯಾದಿಗಳೆಲ್ಲದರಲ್ಲೂ ರಜನಿಯ ವಿಲಕ್ಷಣ ಮ್ಯಾನರಿಸಮ್ಮೇ ವಿಜೃಂಭಿಸಿತ್ತು. ಅದರಲ್ಲೂ ಭಾಷಾ ರಜನಿಯ ಟಿಪಿಕಲ್ ಇಮೇಜ್‌ಗೆಂದೇ ಹೇಳಿಮಾಡಿಸಿದಂತಿತ್ತು. ಭಾಷಾದ ನಂತರ ಬಂದ ಶಿವಾಜಿ, ಯಂದಿರನ್ ಮತ್ತು ಲಿಂಗಾ ಚಿತ್ರಗಳಲ್ಲಿ ಅಂಡರ್‌ವರ್ಲ್ಡ್ ಮುಖ್ಯ ವಸ್ತುವಾಗಿರಲಿಲ್ಲ.

'ಲಿಂಗಾ'ದ ಹಿನ್ನಡೆಯ ನೀರಸ ಪರಿಸ್ಥಿತಿಯಲ್ಲೇ ರಜನಿ ಘೋಷಿಸಿದ್ದು ಕಬಾಲಿ. ಅಮಿತಾಬ್‌ನ ಸರ್ಕಾರ್ ಶೈಲಿಯಲ್ಲೇ ಡಾನ್‌ನ ಪಾತ್ರಧಾರಿಯಾಗಿ ರಜನಿ ವಿಶಿಷ್ಟ ಗೆಟಪ್ಪಿನಲ್ಲಿ ಕಾಣಿಸಿಕೊಂಡ ಫೋಟೋ ಬಿಡುಗಡೆಯಾಗಿದ್ದೇ ರಜನಿ ಭಕ್ತರಿಗೆಲ್ಲ ತಕ್ಷಣಕ್ಕೆ ನೆನಪಾಗಿದ್ದು 'ಬಾಷಾ'. ಉತ್ತರ ಚೆನ್ನೈನ ಡಾನ್ ಓರ್ವನನ್ನು ಆತನ ವಿರೋಧಿ ಗ್ಯಾಂಗ್ ಮೈಲಾಪೂರ್ ಏರಿಯಾದ ಕಪಾಲೀಶ್ವರನ್ ದೇವಸ್ಥಾನದ ಎದುರೇ ಅಟ್ಟಾಡಿಸಿ ಕೊಂದು ಹಾಕಿದ ಸತ್ಯ ಘಟನೆಯನ್ನಾಧರಿಸಿ 'ಕಬಾಲಿ' ರೂಪುಗೊಂಡಿದೆಯೆಂಬ ಸಂಗತಿಯೇ ಕತೆಯ ವೈಶಿಷ್ಟ್ಯವನ್ನ… ಬಿಂಬಿಸುತ್ತಿತ್ತು. ಆ ಕಾರಣಕ್ಕೇ ಡಾನ್‌ಗೆ ಕಬಾಲಿ ಎಂಬ… ಹೆಸರು ಕೊಟ್ಟು ಭೂಗತ ರಕ್ತಗಾಥೆಯೊಂದನ್ನು ಬಿಚ್ಚಿಡು… ನಿರ್ದೇಶಕ ಪ. ರಂಜಿತ್‌ರ ಪ್ರಯತ್ನಕ್ಕೆ ವಿಶಿಷ್ಟ ರಾಜಕೀಯ… ಆಯಾಮವೂ ಇತ್ತು.

ರಂಜಿತ್ ಹೇಳಿಕೇಳಿ ಅಂಬೇಡ್ಕರ್‌ವಾದಿ; ಜೊತೆ… ಪೆರಿಯಾರ್ ವಿಚಾರಧಾರೆಯನ್ನು ಮೈಗೂಡಿಸಿಕೊಂಡಾತ… ಆತನ ಈ ಹಿಂದಿನ 'ಮೆದ್ರಾಸ್' ಚಿತ್ರ ತಮಿಳುನಾಡಿ… ದಲಿತ ರಾಜಕಾರಣವನ್ನು ಎಳೆಎಳೆಯಾಗಿ ಬಿಡಿಸಿಟ್ಟ ವಿಶಿ… ಚಿತ್ರವಾಗಿತ್ತು. ಚೆನ್ನೈ ಉತ್ತರ ಭಾಗದಲ್ಲಿ ದಲಿತರೇ ಹೆಚ್ಚಿರು… ಬಡಾವಣೆಗಳಲ್ಲಿನ ತಮಿಳರ ಪಕ್ಕಾ ಗಲ್ಲೀಭಾಷೆಯನ್ನ… ಚಿತ್ರದುದ್ದಕ್ಕೂ ಬಳಸಿದ್ದ ರಂಜಿತ್ ಮೆದ್ರಾಸ್ ಚಿತ್ರಕ್ಕೆಂದ… ತಮಿಳುನಾಡಿನ ಖ್ಯಾತ ದಲಿತ ಚಿಂತಕಿ ಪ್ರೊಫೆಸರ… ಉಮಾದೇವಿಯವರಿಂದ ಹಾಡೊಂದನ್ನು ಬರೆಸಿದ್ದು ವಿಶೇ… ಗಮನ ಸೆಳೆದಿತ್ತು. ದಲಿತ ಚಿಂತನೆಗಳ ನೆರಳಲ್ಲೇ ಸಿನಿಮ… ಮಾಡುವ ರಂಜಿತ್ ರಜನಿಯನ್ನು ಗುರಿಯಾಗಿಸಿ ಹೆಣೆ… ಕತೆಗೆ 'ಕಪಾಲಿ' ಎಂಬ ಹೆಸರಿಟ್ಟದ್ದೇ ಮತ್ತೊಂದು ವಿವಾದ… ಕಾರಣವಾಯಿತು.

ಕಪಾಲಿ ಎಂಬುದು ತಮಿಳುನಾಡಿನುದ್ದಕ್ಕೂ ದಲಿ… ಸಮುದಾಯದವರು ತಮ್ಮ ಮಕ್ಕಳಿಗಿಡು… ಸರ್ವೇಸಾಮಾನ್ಯವಾದ ಹೆಸರು. ಶಿವ, ವೈಷ್ಣವರ ಅಂದ… ಬ್ರಾಹ್ಮಣರ ಕಡುವೈರಿ. ವಿಷ್ಣು ತಮಿಳುನಾಡಿನ ಬ್ರಾಹ್ಮಣ್ಯ… ಸಂಕೇತವಾದರೆ ಶಿವ ಶೂದ್ರರ ಸಂಕೇತ. ಶಿವ… ಅವತಾರಗಳಲ್ಲೊಂದಾದ ಕಪಾಲೇಶ್ವರನ ಹೆಸರನ್ನೇ ರಜನಿಯ… ಡಾನ್ ಪಾತ್ರಕ್ಕಿಟ್ಟು ಆ ಮೂಲಕ ಪೆರಿಯಾರ್ ಮತ್ತು… ಅಂಬೇಡ್ಕರ್ ಚಿಂತನೆಗಳಿಗೆ ಚಾಲನೆ ಕೊಡುವ ನಿರ್ದೇಶ… ರಂಜಿತ್‌ನ ಉದ್ದೇಶ ಒಂದಲ್ಲ ಒಂದು ರೂಪದಲ್ಲಿ… 'ಕಬಾಲಿ'ಯಲ್ಲಿ ಅಂತರ್ಗತವಾಗಿದ್ದೇ ಇರುತ್ತದೆಯೆಂಬ ನಿರೀ… ವಿಶೇಷವಾಗಿ ತಮಿಳುನಾಡಿನ ಪೆರಿಯಾರ್ ಮತ್ತು… ಅಂಬೇಡ್ಕರ್‌ವಾದಿಗಳಲ್ಲಿ ಹುಟ್ಟಿಕೊಂಡಿತ್ತು. ಇದಕ್ಕೆ ತಕ್ಕಂ… ಕಬಾಲಿಯ ಹಾಡೊಂದು ದಿನೇದಿನೆ… ಜನಪ್ರಿಯಗೊಳ್ಳತೊಡಗಿತು. ಅದು ರಜನಿಯ ಕನ್ನಡ… ಹಿನ್ನೆಲೆ ಕುರಿತಾಗಿತ್ತು. ರಜನಿ ಕನ್ನಡಿಗನೋ ಮರಾಠಿಯೋ… ಆ ಪ್ರಶ್ನೆ ಬೇರೆಯಾದರೂ ತಮಿಳುನಾಡಿನ ಬಲಾಢ… ರಾಜಕಾರಣಿಗಳನೇಕರು ಕಾಲಾನುಕಾಲಕ್ಕೆ ರಜನಿಯ… ಕರ್ನಾಟಕ ಮೂಲವನ್ನೇ ಗುರಿಯಾಗಿಸಿಕೊಂಡು… ದಾಳಿಯಿಡುತ್ತಲೇ ಬಂದಿದ್ದಾರೆ.

ರಂಜಿತ್ ಇದಕ್ಕೂ ಛಾಟಿಯೇಟು ಕೊಟ್ಟಂತಿದ… ತಮಿಳುನಾಡಿನ ಶೋಷಕವರ್ಗ ರಜನಿಯ ವಿರುದ್ಧ… ಭಾಷಾಂಧತೆಯ ಆಯುಧ ಬಳಸಿ ಹಣಿಯುತ್ತಿರುವುದ…



ಪಾಂಡಿಚೇರಿಯ 'ಕಬಾಲಿ' ಸನ್ನಿ ಮತ್ತು ಮೋದಿಯ ಸ್ವಚ್ಛ ಭಾರತ್!

ಕಬಾಲಿ ಬೆಳ್ಳಿ ನಾಣ್ಯ, ಕಬಾಲಿ ಟೀಶರ್ಟ್, ಕಬಾಲಿ ಕೀ ಚೈನ್, ಕಬಾಲಿ ಸೆಲ್‌ಫೋನ್ ಗಾರ್ಡ್ ಮತ್ತು ಕಬಾಲಿ ಕಾರು!


ಇದು ರಜನಿ ಮೇನಿಯಾದ ಕಬಾಲಿ ಕ್ರೇಜ್‌ನ ಕೆಲ ಸ್ಯಾಂಪಲ್ಲುಗಳಷ್ಟೆ. ಲಂಡನ್‌ನ ಪ್ರಮುಖ ಐಟಿ ಕಂಪೆನಿಯ ಮ್ಯಾನೇಜರ್ ಒಬ್ಬ ತನ್ನ ಕೆಲಸಕ್ಕೇ ರಜೆ ಹಾಕಿ ಜುಲೈ 22 ರಂದು ಚೆನ್ನೈಗೆ ಬಂದು ಕಬಾಲಿಯ ಮೊದಲ ಷೋ ಅನುಭವಿಸುತ್ತಾನಂತೆ. ಇದನ್ನು ರಜನಿ ಭಕ್ತರು ಹೇಳುವುದು FDFS ಎಂದು. ಅಂದರೆ First day first show. ಈ ಎಫ್‌ಡಿಎಫ್‌ಎಸ್ ಸನ್ನಿ ಅಮೆರಿಕದಂಥ ದೇಶಕ್ಕೂ ಹೊರತೇನಲ್ಲ. ಹ್ಯೂಸ್ಟನ್ ಕಂಪೆನಿ ಮುಖ್ಯಸ್ಥನೊಬ್ಬ ಸಾವಿರಾರು ಕಿಲೋಮೀಟರ್‌ಗಳ ಪ್ರಯಾಣ ಬೆಳೆಸಿ ಕಬಾಲಿಯ ಮೊದಲ ಷೋ ಚಟ ತೀರಿಸಿಕೊಳ್ಳುತ್ತಾನಂತೆ. ಅಮೆರಿಕದಲ್ಲಿ ಕಬಾಲಿಯ ಟಿಕೆಟ್ ಬುಕ್ಕಿಂಗ್‌ಗೆ ಎಂಥಾ ನೂಕುನುಗ್ಗಲೆಂದರೆ ಕೇವಲ ಎರಡೇ ಗಂಟೆಯೊಳಗೆ ಮೂರು ದಿನದ ಷೋಗಳ ಟಿಕೆಟ್ ಸೋಲ್ಡ್ ಔಟಂತೆ-

ಇತ್ತ ಪಾಂಡಿಚೇರಿಯ ಜಿಲ್ಲಾಧಿಕಾರಿಯೊಬ್ಬರು ಇದೇ ಕಬಾಲಿ ಕ್ರೇಜ್ ಬಳಸಿಕೊಂಡು ವಿಶಿಷ್ಟ ಘೋಷಣೆಯೊಂದನ್ನು ಹೊರಡಿಸಿದ್ದಾರೆ. ಸ್ವಚ್ಛ ಭಾರತ್ ಅಭಿಯಾನದಲ್ಲಿ ಗ್ರಾಮೀಣ ವಸತಿಯ ಮಹಿಳೆಯರಿಗೆ ಶೌಚಾಲಯ ಕಟ್ಟಿಸಿಕೊಡುವ 120 ಕೋಟಿ ರೂಪಾಯಿಗಳ ಯೋಜನೆಯನ್ನು ಬಳಸಿಕೊಂಡು ಯಾರು ಶೌಚಾಲಯ ಕಟ್ಟಿಸಿಕೊಳ್ಳುವಲ್ಲಿ ಮುಂದೆ ಬರುತ್ತಾರೋ ಅಂಥ ಪ್ರತಿ ಮಹಿಳೆಗೂ 'ಕಬಾಲಿ' ಚಿತ್ರದ ಮೊದಲ ಷೋನ ಟಿಕೆಟ್ ಉಚಿತ!

ಇದಕ್ಕೆ ಪಾಂಡಿಚೇರಿಯ ಲೆಫ್ಟಿನೆಂಟ್ ಗವರ್ನರ್ ಕಿರಣ್ ಬೇಡಿಯೇ ಟ್ವೀಟ್ ಮಾಡಿ ಬಹಿರಂಗವಾಗಿ ಬೆಂಬಲ ಸೂಚಿಸುತ್ತಾರೆಂದರೆ 'ಕಬಾಲಿ'ಯ ಸನ್ನಿ ಯಾವ ಮಟ್ಟಕ್ಕಿರಬೇಡ?










ರುದ್ಧವೂ ಅಂಬೇಡ್ಕರ್ ಚಿಂತನೆಯ ನೆಲೆಯಲ್ಲೇ ಉತ್ತರ ಟ್ಟಿಂತೆ ಗೀತೆಯೊಂದನ್ನು ಕಬಾಲಿಗೆ ಅಳವಡಿಸಿದ್ದು ಜಿತ್‌ನ ಮಾನವೀಯತೆಯನ್ನು ಎತ್ತಿ ಹಿಡಿದಿತ್ತು. ಕತೆ ಗಿಸ ಡಾನ್‌ನದ್ದಾದರೂ ರಂಜಿತ್ ಅದಕ್ಕೆ ಕಲ್ಪಿಸಿದ ಾನವೀಯ ಆಯಾಮದಿಂದಾಗಿ ತಮಿಳುನಾಡಿನಾದ್ಯಂತ ಬಾಲಿಯ ಬಗ್ಗೆ ಚಿತ್ರವಿಚಿತ್ರ ಕುತೂಹಲಗಳು ಾಗೆಯಾಡುತ್ತಲೇ ಬಂದವು.

ಮತ್ತೊಂದು 'ಬಾಷಾ' ಆಗಬಹುದೆಂಬ ನಿರೀಕ್ಷೆ ಭೂಗತ ನ್‌ನ ಕತೆ, ಅದಕ್ಕೆ ಬ್ರಾಹ್ಮಣ ವಿರೋಧಿ ಚಿಂತನೆ, ಬೇಡ್ಕರ್-ಪೆರಿಯಾರ್‌ವಾದಗಳ ಬೆಂಬಲ, ದಲಿತ ತ್ರವೊಂದರಲ್ಲಿ ರಜನಿಯ ನಟನೆ, ನಿರ್ದೇಶಕ ರಂಜಿತ್‌ರ ಮಾಜಿಕ ಹಿನ್ನೆಲೆ ಇವೆಲ್ಲವೂ ಕಬಾಲಿಯಲ್ಲಿ ಪ್ರತ್ಯಕ್ಷವಾಗೋ ರೋಕ್ಷವಾಗೋ ಪ್ರಕಟಗೊಂಡೇ ತೀರುತ್ತದೆಯೆಂಬ ರೀಕ್ಷೆಯೇ ಕಬಾಲಿಯನ್ನು ಎತ್ತರಕ್ಕೇರಿಸಿತ್ತು. ರಜನಿಯ ದುರು ಹೀರೋಯಿನ್ನಾಗಿ ಬಾಲಿವುಡ್ ಬೆಡಗಿ ರಾಧಿಕಾ ಪ್ಟೆಯನ್ನು ಹಾಕಿದ್ದು ಮುಂಬಯಿ ಮಾರುಕಟ್ಟೆಗೆ ಳಿಮಾಡಿಸಿದಂತಿತ್ತು. ಕತೆಯ ಬಗ್ಗೆಯಾಗಲಿ, ಪಾತ್ರದ ರಿತಾಗಲಿ ರಜನಿ ಬಾಯಿಬಿಡಲೇ ಇಲ್ಲ. ನಿರ್ದೇಶಕ ಜಿತ್ ನಿರ್ಮಾಪಕ ತನು ಸೇರಿದಂತೆ ಯಾರೊಬ್ಬರೂ ಬಾಲಿ' ಕುರಿತಂತೆ ಸಣ್ಣ ಸುಳಿವನ್ನೂ ಕೊಡುತ್ತಿರಲಿಲ್ಲ.

ರಜನಿಯ ಚಿತ್ರವೆಂದರೆ ಅದು ಕಮ್ಮಿಯೆಂದರೂ ನೂರು ೋಟಿಯ ಬಾಬತ್ತೆ. ಇಲ್ಲಿಗೆ ಆರುತಿಂಗಳ ಹಿಂದೆ ಕಬಾಲಿಯ ಲರ್ ಬಿಡುಗಡೆಯಾದರೂ ಅದು ಈ ಮಟ್ಟದ ಕ್ರೇಜ್ ಟ್ಟಿಸಬಹುದೆಂಬ ನಿರೀಕ್ಷೆ ಯಾರಿಗೂ ಇರಲಿಲ್ಲ. ಆದರೆ ರೇ ತಿಂಗಳಲ್ಲಿ 25 ಮಿಲಿಯನ್ ಅಂದರೆ ಎರಡೂವರೆ ೋಟಿ ಮಂದಿ ಯೂಟ್ಯೂಬ್‌ನಲ್ಲಿ ಅದರ ಟ್ರೈಲರ್ ೕಕ್ಷಿಸಿದ್ದರು. ಬಾಲಿವುಡ್ ದೊರೆ ಸಲ್ಮಾನ್‌ನ ಸುಲ್ತಾನ್‌ಗೆ ೋಲಿಸಿದರೆ 'ಕಬಾಲಿ'ಯ ಟ್ರೈಲರ್ ಹೆಚ್ಚೂಕಮ್ಮಿ ಂದೂವರೆ ಪಟ್ಟು ಹೆಚ್ಚಿತ್ತು. ಬಿಡುಗಡೆಗೆ ಮೊದಲೇ ುನ್ನೂರು ಕೋಟಿ ಸಂದಾಯವಾಗಿತ್ತು. ಶುರುವಿನಲ್ಲಿ 0.5 ಕೋಟಿಗೆ ರಾಕ್‌ಲೈನ್‌ಗೆ ಮಾರಿದ್ದ ಕರ್ನಾಟಕದ ಂಚಿಕೆಯ ಹಕ್ಕನ್ನು ಆರೇ ತಿಂಗಳಿಗೆ ಹನ್ನೆರಡೂವರೆ ತೆತ್ತು ಗೋಕುಲ್ ರಾಜ್ ಫಿಲಂ ಖರೀದಿಸಿತ್ತು. ಅದನ್ನು ಕರ್ನಾಟಕದ ಏಳೂ ವಲಯಗಳಿಗೆ ಹಂಚಿಕೆ ಮಾಡಿದ ಗೋಕುಲ್ ರಾಜ್ ಫಿಲಂಗೆ 18.5 ಕೋಟಿ ಅಂದರೆ ಆರು ಕೋಟಿಯ ಲಾಭವಾಗಿತ್ತು. ಕರ್ನಾಟಕವೊಂದರಲ್ಲೇ 275 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ 'ಕಬಾಲಿ' ಈ ಹಿಂದಿನ ಗಳಿಕೆಯ ಎಲ್ಲಾ ದಾಖಲೆಗಳನ್ನು ಮುರಿದರೂ ಆಚ್ಚರಿಯಿಲ್ಲ. ಬೆಂಗಳೂರಿನ ಮಲ್ಟಿಪ್ಲೆಕ್ಸ್‌ಗಳ ಹಂಚಿಕೆ ಪಡೆದ ಲಹರಿಯ ವೇಲು ಅದೊಂದೇ ಬಾಬತ್ತೆಂದು ಆರು ಕೋಟಿ ಕೊಟ್ಟರೆಂದರೆ 'ಕಬಾಲಿ'ಯ ಕ್ರೇಜ್ ಇನ್ನೆಂಥದ್ದಿರಬೇಡ!





ಸದ್ಯ ತಮಿಳು, ತೆಲುಗು ಮತ್ತು ಹಿಂದಿಯಲ್ಲಿ ಬಿಡುಗಡೆಯಾಗುತ್ತಿರುವ ಕಬಾಲಿ ರಜನಿಯ ಈ ಹಿಂದಿನ ಎಲ್ಲಾ ಚಿತ್ರಗಳ ದಾಖಲೆ ಮುರಿದಿದೆ. ಅಮೆರಿಕ, ಬ್ರಿಟನ್, ಜಪಾನ್, ಚೀನಾ, ಇಂಡೋನೇಷಿಯಾ, ಮಲೇಷಿಯಾ ಸೇರಿದಂತೆ ವಿಶ್ವದ ಹದಿನೈದಕ್ಕೂ ಅಧಿಕ ದೇಶಗಳಲ್ಲಿ ಬಿಡುಗಡೆಯಾಗುತ್ತಿರುವುದು ಬಾಲಿವುಡ್ ದಿಗ್ಗಜರನ್ನೇ ಥಂಡಾ ಹೊಡೆಸಿದೆ. ವಿಶ್ವದ ಒಟ್ಟು ಐದು ಸಾವಿರ ತೆರೆಗಳನ್ನು ಏಕಕಾಲಕ್ಕೆ 'ಕಬಾಲಿ' ಅಪ್ಪಳಿಸಲಿದೆ. ಇದು ಈ ಹಿಂದಿನ ಯಾವುದೇ ಚಿತ್ರಗಳಿಗಿಂತಲೂ ದೊಡ್ಡಮಟ್ಟದ ಅಗಾಧವಾದ ಬಿಡುಗಡೆಯೇ. ಸಲ್ಮಾನ್‌ನ 'ಸುಲ್ತಾನ್' ಮೊದಲ ವಾರದಲ್ಲಿ ಮುನ್ನೂರು ಕೋಟಿ ಗಳಿಸಿದರೆ ರಜನಿಯ 'ಕಬಾಲಿ' ಆ ಮೊತ್ತವನ್ನು ಬಿಡುಗಡೆಯಾದ ಮೂರೇ ದಿನದಲ್ಲಿ ಹಿಂದಿಕ್ಕುವ ನಿರೀಕ್ಷೆಯಿದೆ.

ಇದ್ಯಾವುದೂ ಉತ್ಪ್ರೇಕ್ಷೆಯ ನಿರೀಕ್ಷೆಯೇನಲ್ಲ. ಬಹುಶಃ ದೇಶದ ಬೇರೆ ಯಾವುದೇ ನಟನ ಯಾವುದೇ ಚಿತ್ರವೊಂದು ಹುಟ್ಟಿಸದ ಕ್ರೇಜ್ ಒಂದನ್ನು 'ಕಬಾಲಿ' ಹುಟ್ಟುಹಾಕಿದೆ. ಅದಕ್ಕೆ ಸಾಕ್ಷಿಯಾಗಿದ್ದು ಬೆಂಗಳೂರಿನ **innovative structural solutions** ಎಂಬ ಐಟಿ ಕಂಪನಿ. ಜುಲೈ 22ಕ್ಕೆ ಕಬಾಲಿ ಬಿಡುಗಡೆಯಾಗಲಿದೆ ಎಂದು ಗೊತ್ತಾಗಿದ್ದೇ ತಡ, ಅದರ ಒಬ್ಬೊಬ್ಬರೇ ಉದ್ಯೋಗಿಗಳ ಚಿತ್ರವಿಚಿತ್ರ ಕಾರಣ ಕೊಟ್ಟು ರಜಾ ಅರ್ಜಿ ಹಾಕಲಾರಂಭಿಸಿದರು. ಒಬ್ಬ ತನಗೆ ಅನಾರೋಗ್ಯವೆಂದರೆ ಮತ್ತೊಬ್ಬ ತನ್ನ ತಾಯಿಗೆ ಆಪರೇಷನ್ ಎಂದೋ, ಹೆಂಡತಿಗೆ ಹುಷಾರಿಲ್ಲವೆಂದೋ ರಜೆ ಕೋರಿ ಅರ್ಜಿ ಕೊಟ್ಟಿದ್ದೇ ಕೊಟ್ಟಿದ್ದು. ಇದು 'ಕಬಾಲಿ'ಯ ಎಫೆಕ್ಟ್ ಎಂದು ಕಂಪೆನಿಯ ಆಡಳಿತ ವರ್ಗಕ್ಕೆ ಮನದಟ್ಟಾಗಲು ಎಷ್ಟು ಹೊತ್ತು?

ಜುಲೈ 22 ಕ್ಕೆ ಇನ್ನೆಷ್ಟು ಉದ್ಯೋಗಿಗಳು ಹೇಳದೇಕೇಳದೆ ಚಕ್ಕರ್ ಹಾಕುತ್ತಾರೋ ಎಂಬ ಭೀತಿಗೆ ಬಿದ್ದೇ ಆ ಕಂಪೆನಿ ಕಬಾಲಿಯ ಬಿಡುಗಡೆಯ ದಿನ ತನ್ನ ಕಚೇರಿಗೆ ರಜಾ ಘೋಷಿಸಿದೆ. ಅಷ್ಟೇ ಅಲ್ಲ, ಪಿವಿಆರ್‌ನಲ್ಲಿ ತನ್ನೆಲ್ಲಾ ಉದ್ಯೋಗಿಗಳಿಗೂ ಚಿತ್ರದ ವೀಕ್ಷಣೆಯ ವ್ಯವಸ್ಥೆ ಮಾಡಿದೆ. ಇದು ಬೆಂಗಳೂರಿನ ಎರಡು ಐಟಿ ಕಂಪೆನಿಗಳ ಕತೆಯಾದರೆ ಅತ್ತ ಇಡೀ ಚೆನ್ನೈ ಜುಲೈ 22 ರಂದು ಅಘೋಷಿತವಾದ ರಜೆಗೆ ಈಡಾದಂತಿದೆ. ಚೆನ್ನೈನ ಪ್ರಮುಖ ಹದಿನಾಲ್ಕು ಐಟಿ ಕಂಪೆನಿಗಳು ಜುಲೈ 22ರಂದು ರಜಾ ಘೋಷಿಸಿದ್ದನ್ನು ಕಂಡ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರೇ ದಂಗಾಗಿಹೋಗಿದ್ದಾರೆ. ಇನ್ನೆರಡು ದಿನದಲ್ಲಿ ಚೆನ್ನೈನ ಮತ್ತಷ್ಟು ಕಂಪೆನಿಗಳು ರಜೆ ಘೋಷಿಸುವ ಸಾಧ್ಯತೆಯಿದೆಯಂತೆ. ಅವತ್ತು ಪ್ರಮುಖ ಟ್ಯಾಕ್ಸಿ ಸೇವಾ ಸಂಸ್ಥೆಯೊಂದು ತನ್ನ ಸೇವೆಯನ್ನೇ ಸ್ಥಗಿತಗೊಳಿಸುವ ನಿರ್ಧಾರ ಕೈಗೊಂಡಿದೆಯಂತೆ.

ನಟನೊಬ್ಬನ ಚಿತ್ರವೊಂದು ಈಪಾಟಿ ಕಲ್ಲೋಲವೊಂದಕ್ಕೆ ಕಾರಣವಾಗುತ್ತದೆಯೆಂದರೆ ಆತನ ಹೊಸ ಚಿತ್ರವೊಂದು ಸಮಾಜದ ಆರ್ಥಿಕತೆಯನ್ನೇ ಅಲ್ಲಾಡಿಸುತ್ತದೆಯೆಂದರೆ, ಚಿತ್ರವೊಂದನ್ನು ಆಧರಿಸಿ ನಾನಾ ಕಂಪೆನಿಗಳು ಏನೇನೋ ವ್ಯಾಪಾರಿ ತಂತ್ರಗಳನ್ನು ರೂಪಿಸುತ್ತವೆಯೆಂದರೆ ಅದು ಪವಾಡವಲ್ಲದೆ ಮತ್ತೇನು? ಅದು ರಜನಿಯ ತಾಕತ್ತು. ಈ ಹಿಂದೆ ಬಾಬಾ ಬಿಡುಗಡೆಗೂ ಮುನ್ನ ಇಂಥದ್ದೇ ಆರ್ಭಟವಿತ್ತು. ಆದರದು ವಾರಕ್ಕೆ ಮೊದಲೇ ಹುಸಿಯಾಗಿಹೋಗಿತ್ತು. ಶಿವಾಜಿ ಆ ಮಟ್ಟದ ಕ್ರೇಜ್ ಹುಟ್ಟಿಸದೇ ಹೋದರೂ ಬಾಕ್ಸ್ ಆಫೀಸ್ ಚಿಂದಿಯೆಬ್ಬಿಸಿತ್ತು. 'ಕಬಾಲಿ' ಮತ್ತೊಂದು ಬಾಬಾ ಆಗುತ್ತಾ ಅಥವಾ ಭಾಷಾ ಎನಿಸಿಕೊಳ್ಳುತ್ತಾ ಎಂಬುದಷ್ಟೇ ಬಾಕಿಯ ಪ್ರಶ್ನೆ. ಜುಲೈ ಇಪ್ಪತ್ತೆರಡು ಅದಕ್ಕೆ ಉತ್ತರ ಸಿಗುವುದಂತೂ ಸತ್ಯ.

■ ರಾ. ಸೋಮನಾಥ್







3 ⏮

ಲಿಗಟ್ಟಿದರು. ಹನ್ನೊಂದು ವರ್ಷಗಳ ಕಾಲ ಸೆರೆವಾಸವನ್ನು ಅನುಭವಿಸಿದ ಅಬ್ದುಲ್ಲಾ ವಿರುದ್ಧದ ಎಲ್ಲಾ ದೂರುಗಳನ್ನು ನ್ಯಾಯಾಲಯ ವಜಾಗೊಳಿಸಿದ್ದರಿಂದ 1964ರಲ್ಲಿ ಅವರು ಬಿಡುಗಡೆಗೊಂಡರು. ಕಾಶ್ಮೀರದ ಜನ ತಮ್ಮ 'ಶೇಖ್'ನನ್ನು ಭಾರೀ ಪ್ರಮಾಣದಲ್ಲಿ ಸ್ವಾಗತಿಸಿದರು.

ಅಬ್ದುಲ್ಲಾ ಸಾಮಾನ್ಯ ಮನುಷ್ಯರಾಗಿದ್ದರೆ ಅವರು ನೆಹರೂ ವಿರುದ್ಧ ಕೆಂಡಕಾರುತ್ತಿದ್ದರು. ಆದರೆ ಅವರದ್ದು ಅಂತಹ ವ್ಯಕ್ತಿತ್ವವಾಗಿರಲಿಲ್ಲ. ತನ್ನನ್ನು ಜೈಲಿಗೆ ದೂಡಿದ ನೆಹರೂ ಅವರ ಬಗ್ಗೆ ಅವರಿಗಿನ್ನೂ ಭರವಸೆ ಇತ್ತು. ಆ ಕಾರಣಕ್ಕೇ ನೆಹರೂ ಅವರು ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸಿ ಕಾಶ್ಮೀರದ ಸಮಸ್ಯೆಯನ್ನು ಪರಿಹರಿಸಲು ಅದೇ ಅಬ್ದುಲ್ಲಾರನ್ನು ಸಂಪರ್ಕಿಸಿಕೊಳ್ಳಬೇಕಾಯಿತು. ಆದರೆ ಅದು ಕೂಡುವ ಮೊದಲೇ ನೆಹರೂ ತೀರಿಕೊಂಡರು. ನೆಹರೂ ನಂತರ ಪ್ರಧಾನಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿ ಕೂಡ ಶೇಖ್ ಅಬ್ದುಲ್ಲಾರನ್ನು 1965ರಲ್ಲಿ ಬಂಧಿಸಿದರು. ಮೂರು ವರ್ಷಗಳ ನಂತರ ಅವರ ಬಿಡುಗಡೆ ಆಯಿತು.

ಆಮೇಲೆ ಬಾಂಗ್ಲಾದೇಶದ ಸೃಷ್ಟಿ, ಭಾರತ ಮತ್ತು ಪಾಕಿಸ್ತಾನದ ನಡುವೆ ಎರಡನೆ ಯುದ್ಧ ಸಂಭವಿಸಿದವು. ಈ ರಕ್ತಪಾತಗಳಿಂದ ಬೆಚ್ಚಿಬಿದ್ದ ಶೇಖ್ ಅಬ್ದುಲ್ಲಾ ಭಾರತ ಸರ್ಕಾರ ಕಾಶ್ಮೀರದಲ್ಲಿ ಜನಾಭಿಪ್ರಾಯ ಸಂಗ್ರಹಕ್ಕೆ ಮುಂದಾಗದೆ ಇರುವುದರಿಂದ ಅಲ್ಲೂ ಸಮಸ್ಯೆ ಭುಗಿಲೇಳಬಹುದೆಂದು ಆತಂಕಗೊಂಡರು. ಆಗ ಅವರು ಆಗಿನ ಪ್ರಧಾನಿ ಇಂದಿರಾ ಗಾಂಧಿ ಜೊತೆ ಮಾತುಕತೆ ನಡೆಸಿ ಒಂದು ಒಪ್ಪಂದಕ್ಕೆ ಸಹಿ ಹಾಕಿದರು. ಅದರಂತೆ ಸದ್ಯಕ್ಕೆ ಜನಾಭಿಪ್ರಾಯ ಸಂಗ್ರಹಣೆ ಇಲ್ಲದಿದ್ದರೂ ಕನಿಷ್ಠ ಸ್ವಯಂ ಆಡಳಿತಕ್ಕಾದರೂ ಅನುವು ಮಾಡಿಕೊಡಬೇಕೆಂಬುದಾಗಿತ್ತು. ಆಗ ಚುನಾವಣೆ ನಡೆದು ಅಬ್ದುಲ್ಲಾ ಕಾಶ್ಮೀರದ ಮೊದಲ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. (ಆ ಚುನಾವಣೆ ಮತ್ತು 1978 ರಲ್ಲಿ ಮೊರಾರ್ಜಿ ದೇಸಾಯಿ ಪ್ರಧಾನಿ ಆಗಿದ್ದಾಗ ನಡೆದ ಚುನಾವಣೆ ಬಿಟ್ಟರೆ ಇಲ್ಲಿಯತನಕ ಕಾಶ್ಮೀರದಲ್ಲಿ ನಡೆದಿರುವ ಚುನಾವಣೆಗಳಲ್ಲಿ ಬರೀ ಮೋಸ ಅಥವ ದಬ್ಬಾಳಿಕೆಗಳೆ ಪ್ರಧಾನವಾಗಿದ್ದವು). ಅಬ್ದುಲ್ಲಾ ಅವರು 1982ರಲ್ಲಿ ಮರಣಹೊಂದುವ ತನಕ ಆ ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಅಬ್ದುಲ್ಲಾ ಕಾಲದಿಂದಲೂ ಅತಂತ್ರತೆಯಲ್ಲೇ ಬದುಕಿದ ಕಾಶ್ಮೀರಿಗಳ ಬದುಕು ಕಾಲ ಉರುಳಿದಂತೆ ಉಲ್ಬಣಿಸುತ್ತಾ ಮುಂದೆ ಸಾಗಿತೇ ಹೊರತು ಕಡಿಮೆಯಾಗಲೇ ಇಲ್ಲ. ಅದೀಗ ಮತ್ತೊಮ್ಮೆ ಇನ್ನೊಂದು ರೂಪದಲ್ಲಿ ತಲೆ ಎತ್ತಿ ನಿಂತಿದೆ.

ಕಳೆದ ದಶಕದ ತನಕ ಬಿಜೆಪಿಗೆ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ನೆಲೆಯೇ ಇರಲಿಲ್ಲ. ಆದರೀಗ ಕಾಶ್ಮೀರದಲ್ಲಿ ಎಂತಹ ವಿಚಿತ್ರ ಸ್ಥಿತಿ ಏರ್ಪಟ್ಟಿದೆ ನೋಡಿ. ಅಲ್ಲೀಗ ಶೇಖ್ ಅಬ್ದುಲ್ಲಾ ಅವರ ಪುತ್ರ ಫಾರೂಕ್ ಅಬ್ದುಲ್ಲಾ ಮತ್ತು ಮೊಮ್ಮಗ ಒಮರ್ ಅಬ್ದುಲ್ಲಾ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ವಿರುದ್ಧ ಕಾಂಗ್ರೆಸ್ ಪಕ್ಷ ಮುಫ್ತಿ ಮೊಹಮ್ಮದ್ ಎಂಬಾತನನ್ನು ಎತ್ತಿ ಕಟ್ಟಿದ್ದು. ಈಗ ಆತನ ಪುತ್ರಿ ನಾಯಕಿ ಆಗಿರುವ ಪಿಡಿಪಿ ಪಕ್ಷ ಮತ್ತು ಬಿಜೆಪಿ ಮೈತ್ರಿಕೂಟ ಅಧಿಕಾರದಲ್ಲಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯ ಮುಸ್ಲಿಮ್ ವಿರೋಧಿ ನಿಲುವು ಮತ್ತು ಪಿಡಿಪಿ ಪಕ್ಷದ ಅದಕ್ಷತೆಯಿಂದ ಅಲ್ಲಿ ಮತ್ತೊಮ್ಮೆ ಜನಾಕ್ರೋಶ ಭುಗಿಲೆದ್ದಿದೆ.

ಭಾರತ ಸರ್ಕಾರ, ಜಮ್ಮು ಮತ್ತು ಕಾಶ್ಮೀರದ ಸರ್ಕಾರ ಹಾಗೂ ಮಾಧ್ಯಮಗಳು "ಅಲ್ಲಿನ ಜನರು ಪೊಲೀಸರು ಮತ್ತು ಸೈನಿಕರ ಮೇಲೆ ದಾಳಿ ಮಾಡಿದಾಗ ಪೆಲ್ಲೆಟ್‌ಗಳನ್ನು ಹಾರಿಸದೆ ಕೈಕಟ್ಟಿಕೂರಬೇಕಾ?" ಎಂದು ಪ್ರಶ್ನಿಸುತ್ತಿದ್ದಾರೆ. ಅಲ್ಲ ದೇಶಕ್ಕೆ ಇರುವುದು ಒಂದೇ ನ್ಯಾಯ. ಆದ್ದರಿಂದ ಗುಜರಾತಿನಲ್ಲಿ ಹಾರ್ದಿಕ್ ಪಟೇಲ್ ನೇತೃತ್ವದಲ್ಲಿ ದಂಗೆ ಎದ್ದರೆ ಅವರ ವಿರುದ್ಧ ಪೊಲೀಸರು ಉಪಯೋಗಿಸುವುದು ಜಲಫಿರಂಗಿಯನ್ನು. ಹರ್ಯಾಣದಲ್ಲಿ ಜಾಟರು ಪ್ರತಿಭಟಿಸಿದಾಗ ಅವರ ವಿರುದ್ಧವೂ ಪೊಲೀಸರು ಹೆಚ್ಚೆಂದರೆ ಪ್ರಯೋಗಿಸುವುದು ಲಾಠಿಗಳನ್ನು. ಆದರೆ ಕಾಶ್ಮೀರದ ಜನ ಬೀದಿಗಿಳಿದರೆ ಮಾತ್ರ ಹೊರಬರುತ್ತವೆ ನೋಡಿ ಬಂದೂಕುಗಳು. ಯಾಕೆ? ಪಟೇಲರಂತೆ, ಜಾಟರಂತೆ, ಕಾಶ್ಮೀರದ ಜನ ಭಾರತೀಯರಲ್ಲವೆ? ಅವರಿಗೆ ಮಾತ್ರ ಯಾಕೆ ಗುಂಡುಗಳ ಸುರಿಮಳೆ?

ಕಾಶ್ಮೀರ ನೋಡಲು ಸ್ವರ್ಗದಂತೆ ಇದೆ ಎಂಬುದು ನಿಜವಾದರೂ ಅಲ್ಲಿನ ಜನರ ಬದುಕು ನರಕಸದೃಶವಾಗಿದೆ. ಅಲ್ಲಿ ತಾಂಡವವಾಡುವ ಬಡತನ, ದಮನ ಮತ್ತು ದೌರ್ಜನ್ಯ ಸ್ಥಳೀಯರನ್ನು ಕಂಗಾಲಾಗಿಸಿದೆ. ಅವರ ಆತಂಕ ಮತ್ತು ಅಸಹಾಯಕತೆಯನ್ನು ಅರ್ಥಮಾಡಿಕೊಂಡು ಸರ್ಕಾರಗಳು ವರ್ತಿಸಬೇಕೆ ಹೊರತು ಅವರನ್ನು ಬೆದರಿಸುವುದಲ್ಲ. ಇಷ್ಟು ಸೂಕ್ಷ್ಮತೆಯನ್ನು ಮೋದಿ ಸರ್ಕಾರದಿಂದ ಮತ್ತು [illegible] ಬೆಂಬಲಿತ ಆ ರಾಜ್ಯದ ಸರ್ಕಾರದಿಂದ ನಿರೀಕ್ಷಿಸುವುದು ಅಸಾಧ್ಯವೇ ಸರಿ. ■

ಫೇಸ್‌ಬುಕ್‌ನಲ್ಲಿ ಮೋದಿ ಭಕ್ತರು ಬಳಸುವ ವಾಮಮಾರ್ಗ

"...ನೀನ್ ಎಲ್ ಇದ್ರಾ ಅಲ್ಲೆ ಹುಡಿಕ್ಕೊಂಡು ಬಂದು ಹೊಡೀತೀನಿ... ಮುಚ್ಕೊಂಡು ಇದ್ರೆ ಸರಿ..."

ಇದು ಫೇಸ್‌ಬುಕ್‌ನಲ್ಲಿ ನಡೆಯುತ್ತಿದ್ದ ಚರ್ಚೆಯೊಂದರಲ್ಲಿ ಬಿದ್ದಿ ಚಿಂತನೆಯ ಯುವಕನೊಬ್ಬ ಪ್ರಗತಿಪರ ಚಿಂತನೆಯ ಯುವಕನೊಬ್ಬನಿಗೆ ಹಾಕಿದ ಧಮಕಿ. ಹಾಗೆ ನೋಡಿದರೆ ಈ ಧಮಕಿ ಇವತ್ತು, ಅದರಲ್ಲೂ ನರೇಂದ್ರ ಮೋದಿಯವರು ಪ್ರಧಾನಿಯಾದ ಮೇಲೆ, ದೇಶದಲ್ಲಿ ಬಲಪಂಥೀಯ ಶಕ್ತಿಗಳು ಭಿನ್ನ ವಿಚಾರಧಾರೆ ಹೊಂದಿರುವ ತಮ್ಮ ವಿರೋಧಿಗಳತ್ತ ತೋರುತ್ತಿರುವ ಆಕ್ರಮಣಶೀಲತೆಗೆ ಕೈಗನ್ನಡಿ ಹಿಡಿದಂತಿದೆ. ವಾದ ಮಾಡಲು ಅವರಲ್ಲಿ ಬೌದ್ಧಿಕ ಬಂಡವಾಳವೇ ಇರುವುದಿಲ್ಲ, ಹಾಗಾಗಿ ವಾದದಲ್ಲಿ ಗೆಲ್ಲಲಾಗದಾಗ ಅವರು ವೈಯಕ್ತಿಕ ತೇಜೋವಧೆಯ ಮೂಲಕ, ದೈಹಿಕ ಹಲ್ಲೆಯ ಮೂಲಕ ಎದುರಾಳಿಗಳನ್ನು ಮೌನಗೊಳಿಸಲು ಯತ್ನಿಸುತ್ತಾರೆ. ಅಂಕಣಕಾರ ಆಕಾರ್ ಪಟೇಲ್ ಹೇಳುವಂತೆ "ಈ ಬಲಪಂಥೀಯರಲ್ಲಿ ಬುದ್ಧಿಜೀವಿಗಳಿಲ್ಲ. ಇರುವವರೆಲ್ಲರೂ ಬರೇ ಕಿರುಚಾಡುವವರು (ಚಿಲ್ಲಾನೇವಾಲೇ)".


ನಾನಿಲ್ಲಿ ಉಲ್ಲೇಖಿಸಿದ ಇಬ್ಬರು ಯುವಕರಾದ ಉದಯ ಎಂಬ ಬಲಪಂಥೀಯ ಯುವಕನಿಗೂ ಸೂರ್ಯ ಎಂಬ ಪ್ರಗತಿಪರ ಚಿಂತಕ ಯುವಕನಿಗೂ (ಹೆಸರು ಬದಲಿಸಲಾಗಿದೆ. ಇಲ್ಲಿ ಉದಯ ತಾನು ಸಾಫ್ಟ್‌ವೇರ್ ಎಂಜಿನಿಯರ್ ಎಂದು ಹೇಳಿಕೊಳ್ಳುತ್ತಾನೆ: ಉಗ್ರ ಹಿಂದೂತ್ವ ವಿಚಾರಧಾರೆಯಾತ. ಸೂರ್ಯ ಸ್ನಾತಕೋತ್ತರ ಪದವೀಧರ ಮತ್ತು ಅಪ್ಪಟ ಜಾತ್ಯತೀತ ಮನೋಭಾವದಾತ. ಉದಯ ಇಂಗ್ಲಿಷ್ ಲಿಪಿಯಲ್ಲಿ ತಪ್ಪುತಪ್ಪಾಗಿ ಕನ್ನಡ ಬರೀತಾನಾದರೆ, ಸೂರ್ಯನದ್ದು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳ ಮೇಲೆ ಅದ್ಭುತ ಹಿಡಿತ) ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ನಡೆದ ಚರ್ಚೆಯನ್ನು ಗಮನಿಸಿ. ಬಲಪಂಥೀಯ ಯುವಕ ಎಷ್ಟೊಂದು ಸುಳ್ಳುಗಳನ್ನು ಸತ್ಯ ಎಂದು ನಂಬಿಕೊಂಡಿದ್ದಾನೆ (ಅಥವಾ ಆತನನ್ನು ನಂಬಿಸಿದ್ದಾರೆ), ಆತನ ವಾದ ಎಷ್ಟು ಟೊಳ್ಳು, ಆತ ಎಷ್ಟು ಅಸಭ್ಯ ಭಾಷೆ ಬಳಸುತ್ತಿದ್ದಾನೆ ಹಾಗೆಯೇ ಪ್ರಗತಿಪರ ಚಿಂತಕ ಯುವಕನ ವಾದ ಎಷ್ಟೊಂದು ಗಟ್ಟಿಯಾಗಿದೆ, ಆತ ಎಷ್ಟೊಂದು ಓದಿಕೊಂಡಿದ್ದಾನೆ, ಎಷ್ಟೊಂದು ತಿಳಿದುಕೊಂಡಿದ್ದಾನೆ, ಎಷ್ಟೊಂದು ಸಂಯಮದಿಂದ ವಾದ ಮಂಡಿಸುತ್ತಾನೆ ಎನ್ನುವುದನ್ನು ನೋಡಿ. ಈ ಚರ್ಚೆಯ ಬಗ್ಗೆ ಹೆಚ್ಚುವರಿ ವಿಶ್ಲೇಷಣೆಯ ಅಗತ್ಯವಿಲ್ಲ, ಬಲಪಂಥೀಯ ತಿಳಿಗೇಡಿಗಳ ಬೌದ್ಧಿಕ ಬಂಡವಾಳವನ್ನು ಮತ್ತು ವಾದದಲ್ಲಿ ಮೇಲುಗೈ ಸಾಧಿಸಲು ಹಾಗೂ ನೀವು ವಾದದಿಂದ ಹಿಂದೆ ಸರಿಯುವಂತೆ ಮಾಡಲು ಅವರು ಬಳಸುವ ವಾಮಮಾರ್ಗವನ್ನು ಈ ಚರ್ಚೆಯೇ ನಿಮಗೆ ಪರಿಚಯಿಸಿಕೊಡುತ್ತದೆ.


ಹಿನ್ನೆಲೆ: ವಿದೇಶೀ ಯುವತಿಯೊಬ್ಬಳು ನಂದಿ ವಿಗ್ರಹಕ್ಕೆ ನಮಸ್ಕರಿಸುತ್ತಿರುವ ಚಿತ್ರವಿದೆ. ಈ ಪೋಸ್ಟ್ ಹಾಕಿದ ಬಾಲಕೃಷ್ಣ ಎಂಬವರು "ಇದು ನಿಜವೇ?" ಎಂದು ಸ್ಟೇಟಸ್ ಬರೆಯುತ್ತಾರೆ. "ನಿಮಗೆ ಇದರಲ್ಲಿ ಅನುಮಾನವಿದೆಯೇ?" ಎಂದು ಉದಯ ಕೇಳುತ್ತಾನೆ ಮತ್ತು "ನಾವೆಲ್ಲ ಮೂಲತಃ ಹಿಂದೂ ಆದರೆ ಮುಂದೆ ಮುಸ್ಲಿಮರಾಗಿ ಮತಾಂತರಗೊಂಡವರು" ಎಂದು ಪಾಕಿಸ್ತಾನದ ಪತ್ರಕರ್ತೆಯೊಬ್ಬಳು ಹೇಳಿದ್ದಳೆನ್ನಲಾದ ಫೋಟೋಶಾಪ್ ಚಿತ್ರ ಹಾಕುತ್ತಾನೆ. ಇದಕ್ಕೆ "ಪಾಕಿಸ್ತಾನಿ ಪತ್ರಕರ್ತೆ ಹೇಳಿದ್ದು ನಿಜ. ಅದು ಬಿಟ್ಟು ಬೇರೆಯೆಲ್ಲ ಭಕ್ತರ ಫೋಟೋಶಾಪ್ ಮಹಿಮೆ" ಎಂದು ಸೂರ್ಯ ಕಮೆಂಟ್ ಮಾಡುತ್ತಾನೆ.

ಉದಯ: (ಸೂರ್ಯನಿಗೆ) ಅತಿ ಬುದ್ಧಿವಂತರೆ ನಮಸ್ಕಾರ.. ಫೋಟೋಶಾಪ್ ಅಲ್ಲ, ಜಾಂಟ ರೋಡ್ಸ್ ಹಿಂದೂ ಸಂಸ್ಕೃತಿಯಿಂದ ಪೂಜೆ ಮಾಡ್ತಿರೋದು.. ಗೇನ್ ಸಮ್ ನ್ಹಾಲೆಜ್ ದುಡೆ.. ಗ್ರೋ ಅಪ್.. ಮಕ್ಕಾದೊಳಗೆ ಶಿವಲಿಂಗ ಇದೆ ಅಂತ ಪ್ರೂ ಆಗಿದೆ.. ಗೊತ್ತಿಲ್ದೆ ಮಾತಾಡಾಕ್ ಹೋಗ್ಬೇಡ...

ಸೂರ್ಯ: ಮೆಕ್ಕಾ ಒಳಗೆ ಶಿವಲಿಂಗ ಇರಬಹುದು. ಆದರೆ ಇಡೀ ವಿಶ್ವವೇ ಹಿಂದೂ ಧರ್ಮದತ್ತ ಆಕರ್ಷಿತವಾಗ್ತಿದೆ ಅನ್ನೋದು ಅಪಹಾಸ್ಯ ಮುಠ್ಠಾಳತನ. ಜಗತ್ತಿನಲ್ಲಿ ಅತಿವೇಗವಾಗಿ ಬೆಳೀತಿರೋದು ನಾಸ್ತಿಕತೆ. ಪ್ರಪಂಚದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಶೇಕಡ 60 ರಷ್ಟು ಜನ ನಾಸ್ತಿಕರು. ಎಲ್ಲಾ ಧರ್ಮಗಳೂ ಲೊಳಲೊಟ್ಟೆ. ಅದೂ ಈ ಮೋದಿ ಬಂದ ಮೇಲೆ ಕೇಸರಿಗಳು ಮಾಡ್ತಿರೋದು ಹಿಂದೂ ಧರ್ಮದ ಅಪಹಾಸ್ಯ ಪ್ರಚಾರ ಮಾಡೋ ಭರದಲ್ಲಿ ಕಾಮನ್ ಸೆನ್ಸಿನ ಲಿಮಿಟ್ ಮೀರಬಾರ್ದು.

ಉದಯ: ಗುರು ನೀನ್ ನಾಸ್ತಿಕ ಇರಬಹುದು.. ಆದರೆ ನಾವು ಹಿಂದೂ ಆಗಿ ಹೆಮ್ಮೆ ಇದೆ.. ನಾಸ್ತಿಕರಂತೆ.. ನಿಮ್ಮಂಥ ಏಲಿಯನ್‌ಗಳೇ ಹೇಳ್ಬೇಕು.. 80% ವಿಜ್ಞಾನಿಗಳು ಕೂಡಾ ದೇವರನ್ನು ನಂಬ್ತಾರೆ. ಆದರೆ, ನಿಮ್ಮಂಥವರು ಅತಿಮಾನುಷ ಶಕ್ತಿ ಇರೋರು, ಈ ತರಾ ಮಾತಾಡ್ತೀರಾ.. ಹಿಂದೂ ಅನ್ನೋದು ಬರೀ ಹಿಂದೂ ಅಲ್ಲ, ನಮ್ ಹಿಂದೂಸ್ಥಾನದ ಒಳಗೆ ಇರೋ ಮುಸ್ಲಿಮ್ಸ್, ಕ್ರಿಶ್ಚಿಯನ್ಸ್ ಎಲ್ಲ ಹಿಂದೂಗಳೇ.. ರೆಸ್ಪೆಕ್ಟ್ ದ ರಿಲೀಜನ್ ಫಸ್ಟ್..





ಹಿಂದೊಮ್ಮೆ *RSS* ಕಚೇರಿಯನ್ನು ಮೋದಿ ಗುಡಿಸುತ್ತಿದ್ದ ಎಂದು ತೋರಿಸಲು ಆತನ ಭಕ್ತರು ಮಾಡಿದ ಫೋಟೋಶಾಪ್

ಇದನ್ನೇ ಮಾಡಾಕ್ ಆಗ್ದಿರೋರು ಇನ್ನೇನ್ ಕಿಸಿದು ಗುಡ್ಡೆ ಹಾಕ್ತರೋ ಆ ದೇವರಿಗೇ ಗೊತ್ತು.

ಸೂರ್ಯ: 'ನೀವು' ಅನ್ನೋದನ್ನ ದೇಶಕ್ಕೆ ಜನರಲೈಸ್ ಮಾಡ್ಬೋಬೇಡಿ. ಐಐಟಿ, ಐಐಎಮ್‌ನಲ್ಲಿ ನಡೆದ ಸರ್ವೇಗಳ ಪ್ರಕಾರ 2050ರೊಳಗೆ ಭಾರತದ ಬಹುತೇಕ ಯುವಜನ ನಾಸ್ತಿಕರಾಗಿರ್ತಾರೆ. ನೀವು ನಾಸ್ತಿಕರಾಗಿ ಅಂತ ಯಾರೂ ಕೇಳ್ತಿಲ್ಲ, ಆದರೆ ತೀರಾ ಅತಿಯಾಗಿ ನಿಮ್ಮ ಧರ್ಮವನ್ನೇ ಅಪಹಾಸ್ಯ ಮಾಡಿಕೊಳ್ಳುವಂಥಾ ಫೋಟೋಶಾಪ್ ಪ್ರಚಾರ, ಇಡೀ ಜಗತ್ತೇ ಹಿಂದೂ ಧರ್ಮವನ್ನು ಬೆಕ್ಕಸಬೆರಗಾಗಿ ನೋಡ್ತಿದೆ ಅನ್ನೋ ಅತಿಕೆಟ್ಟ ಜೋಕ್ ಮಾಡ್ಬೇಡಿ. ನೀವು ನಿಮ್ಮ ಧರ್ಮವನ್ನ ಪಾಲಿಸಿ. ನಿಜವಾದ ಧರ್ಮಕ್ಕೆ ಪ್ರಚಾರದ, ಫೋಟೋಶಾಪ್ ಬಡಾಯಿಯ ಅಗತ್ಯ ಇಲ್ಲ ಅಂತ ಭಾವಿಸ್ತೇನೆ. 80% ವಿಜ್ಞಾನಿಗಳು ದೇವರನ್ನ ನಂಬ್ತಾರೆ ಅನ್ನೋದು ಸುಳ್ಳು. ದೇವರನ್ನು ನಂಬುವ ವಿಜ್ಞಾನಿಗಳು ವಿಜ್ಞಾನಿಗಳಲ್ಲಿ ಅಲ್ಪಸಂಖ್ಯಾತರು.

ಉದಯ: ಎಲ್ಲೆಲ್ಲೋ ಜಾತಿ ತರ್ತೀರಲ್ಲಾ ಸ್ವಾಮೀ.. ಗ್ರೇಟ್ ಐಡಿಯಾಲಜಿ.. ನೀವು ತುಂಬಾ ದೊಡ್ಡ ತಪ್ಪು ಭ್ರಮೆಯೊಳಗೆ ಇದ್ದೀರಾ..' ಇಡೀ ಭೂಮಿಯ ಎಲ್ಲ ಭಾಗದಲ್ಲೂ ಹಿಂದೂ ದೇವಾಲಯ ಪ್ರತಿಮೆಗಳಿವೆ.. ಈಗ್ಲೂ 2800 ವರ್ಷ ಹಿಂದಿನ ವಿಗ್ರಹಾನೂ ದೇವಾಲಯಾನೂ ಸಿಕ್ಕಿದೆ. ಕಾಂಬೋಡಿಯಾ, ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ಅಮೆರಿಕ, ಚೈನಾ, ಯುರೋಪ್, ಪಾಕಿಸ್ತಾನ, ವೆಸ್ಟ್ ಇಂಡೀಸ್ ಎಲ್ಲಾ ಭಾಗದಲ್ಲೂ ಇದೆ. ನೀವು ಅತಿ ಬುದ್ಧಿವಂತರು.. ಯಾವುದೋ ಐಐಎಮ್ ಐಐಟಿ.. ನಮ್ಮ ಮನಸಲ್ಲಿ ನಿಜವಾದ ಭಕ್ತಿ ನಮ್ಮ ಸಂಸ್ಕೃತಿ ಮೇಲಿರಬೇಕು. ಅತಿಯಾಗಿ ನಂಬಿ ಅಂತ ಯಾವ್ ಗೂಬೆ ನಮ್ಮಗಾನೂ ಹೇಳ್ತಿಲ್ಲ.. ಆದ್ರೆ ನಮ್ ದೇಶ ಅನುಕರಿಸಿದರೆ ಸಾಕು.. ಆದ್ರೆ ನಮ್ ದೇಶದವರು ಆಗಿ ನೀವೇ ಈ ಥರ ಮಾತಾಡಿದರೆ, ಇನ್ನು ಬೇರೆ ದೇಶದವರು ಸ್ಲಿಪ್ಪರ್ ಮೇಲೆ ಅಂಡರ್ ವೇರ್ ಮೇಲೆ ನಮ್ ದೇವತೆ ಮೇಲೆ ಹಾಕಿದರೆ ತಪ್ಪಿಲ್ಲ ಅಲ್ವಾ? ನಿಮ್ಮ ಅಪ್ಪ ಅಮ್ಮ ಅಥವಾ ತಾತ ಇದ್ರೆ ಈ ಮಾತು ಹೇಳಿ ಮುಖಕ್ಕೆ ಉಗೀತಾರೆ..

ಸೂರ್ಯ: ಅಂಬೇಡ್ಕರ್, ಪೆರಿಯಾರ್, ಫುಲೆ ಹುಟ್ಟುವರೆಗೂ ಭೂಮಿ ಮೇಲಿನ ನರಕ ಇದ್ದ ಹಾಗೆ ಇದ್ದ ನಿಮ್ಮ ಹಿಂದೂ ಧರ್ಮ ಎಷ್ಟು ಪ್ರಾಚೀನ ಆದ್ರೆ ಏನಂತೆ? ಎಲ್ಲೆಲ್ಲಿ ಅವಶೇಷಗಳು ಸಿಕ್ರೆ ಏನಂತೆ? ಹಿಂದೂಗಳು ದಲಿತರನ್ನು ಮನುಷ್ಯರು ಅಂತ ನೋಡೋಕೆ ಕಲಿತದ್ದೇ ಎಪ್ಪತ್ತು ಎಂಭತ್ತು ವರ್ಷದ ಹಿಂದೆ. ಒಂದು ಧರ್ಮ ಎಷ್ಟು ಹಳೆಯದು ಅನ್ನೋದು ಮುಖ್ಯ ಅಲ್ಲ, ಅದು ತನ್ನ ಜನರನ್ನ ಯಾವರೀತಿ ನಡೆಸಿಕೊಂಡಿದೆ ಅನ್ನೋದು ಮುಖ್ಯ. ಹಿಂದೂ ಒಂದು ಧರ್ಮ ಅಲ್ಲ, ಜಾತಿಗಳ ಸಮೂಹ. ಅದಕ್ಕೆ ಅಧಿಕೃತವಾಗಿ ಹಿಂದೂ ಅಂತ ನಾಮಕರಣ ಮಾಡಿದ್ದು ಬ್ರಿಟಿಷರು 1880ರ ದಶಕದಲ್ಲಿ ಮಾಡಿದ ಅಖಿಲ ಭಾರತ ಜಾತಿಗಣತಿಯ ಸಂದರ್ಭದಲ್ಲಿ. ಪ್ರಜ್ಞಾವಂತರು ಯಾರೂ ಹಿಂದೂ ಧರ್ಮವನ್ನ ಶ್ರೇಷ್ಠ ಅಂತ ಒಪ್ಪಲು ಸಾಧ್ಯವಿಲ್ಲ, ಹಿಂದೂ ಧರ್ಮ ಜಗತ್ತಿನ ಅತಿಕ್ರೂರ ಧರ್ಮಗಳಲ್ಲಿ ಒಂದು. ಅಂಬೇಡ್ಕರ್ ಹೇಳಿದ ಮಾತು "ನಾನು ಹಿಂದೂವಾಗಿ ಹುಟ್ಟಿಬಿಟ್ಟಿದ್ದೇನೆ. ಆದರೆ ಹಿಂದೂವಾಗಿ ಸಾಯಲಾರೆ." ಅವರು ಬೌದ್ಧ ಧರ್ಮಕ್ಕೆ ಮತಾಂತರ ಆದರು. ಹಿಂದೂ ಧರ್ಮಕ್ಕೂ ಬೌದ್ಧ ಧರ್ಮಕ್ಕೂ ಬಹಳ ವ್ಯತ್ಯಾಸ ಇದೆ. ವೈದಿಕರಿಗೂ ಬೌದ್ಧರಿಗೂ ದೊಡ್ಡ ಸಂಘರ್ಷಗಳೇ ನಡೆದಿವೆ. ನೀವು ಪೂರ್ವ ಹಾಗೂ ಮಧ್ಯಏಷ್ಯಾದ ಹಿಂದೂ ಅವಶೇಷಗಳು ಅಂತ ಗುರುತಿಸ್ತೀರಲ್ಲ, ಅದರಲ್ಲಿ ಬಹುಪಾಲು ಬೌದ್ಧ ಧರ್ಮದವು. ತನ್ನ ಅನುಕೂಲಕ್ಕಾಗಿ ಒಂದಾನೊಂದು ಕಾಲದಲ್ಲಿ ಹಿಂದೂ ಧರ್ಮವನ್ನು ತಿರಸ್ಕರಿಸಿ ಹೋದ ಬುದ್ಧನನ್ನು ಆಧುನಿಕ ಹಿಂದೂ ಧರ್ಮ ಹೈಜಾಕ್ ಮಾಡಿದೆ ಅಷ್ಟೇ.

ಭಾರತದಲ್ಲಿ ಅಂಬೇಡ್ಕರ್ ಬರೆದ ಸಂವಿಧಾನ ಇರದೇ ಇದ್ದಿದ್ದರೆ ಗಾಂಧೀ ನೆಹರೂ ಪ್ರಣೀತ ಸಮಾಜವಾದಿ ಪ್ರಜಾಪ್ರಭುತ್ವ ಇರದೇ ಹೋಗಿದ್ದಿದ್ದರೆ ಭಾರತವನ್ನು ಪಾಕಿಸ್ತಾನಕ್ಕಿಂತ ಕಡೆ ಮಾಡಿಬಿಡ್ತಿತ್ತು ಹಿಂದೂ ಧರ್ಮ. ಒಂದು ನೆನಪಿರಲಿ. ಜಾತಿಯನ್ನು ಮೀರಿ ಮನುಷ್ಯನನ್ನು ಮನುಷ್ಯನಾಗಿ ನೋಡಲು ಸಾಧ್ಯವಾದದ್ದು ಸಂವಿಧಾನದಿಂದಲೇ ಹೊರತು ವರ್ಣಾಶ್ರಮದ ಮೇಲೆ ನಿಂತಿದ್ದ ಹಿಂದೂ ಧರ್ಮದಿಂದಲ್ಲ.

ಉದಯ: ಈವಾಗ್ ಗೊತ್ತಾಯ್ತು ನೀವ್.. ನಿಮ್ ಜಾತಿನೇ ಮುಖ್ಯ ಅಂತ... ಇಡೀ ನಮ್ ಹಿಂದೂ ಸಂಸ್ಕೃತಿ ದಬ್ಬಾಳಿಕೆ ಮಾಡ್ತಿದೆ ಅಂತ... ಓ ಐ ಗಾಟ್ ಯು ಮ್ಯಾನ್.. ನಿನ್ನ ಜಾತಿ ಯಾವುದು ಅನ್ನೋದು ತಿಳೀತು... ಇಟ್ಸ್ ಓಕೆ ಥ್ಯಾಂಕ್ಸ್..

ಸೂರ್ಯ: ನಿಮ್ಮ ಅನಿಸಿಕೆ ತಪ್ಪು, ನಾನು ಜಾತಿಯಿಂದ ಬ್ರಾಹ್ಮಣ. ವ್ಯಕ್ತಿತ್ವದಲ್ಲಿ ಜಾತ್ಯತೀತ.

ಇತಿಹಾಸವನ್ನು ಯಾರೂ ಅಳಿಸಿಹಾಕಲು ಸಾಧ್ಯವಿಲ್ಲ, ವಾಸ್ತವವನ್ನು ಒಪ್ಪೋಕೆ ಧೈರ್ಯ ಹಾಗೂ ಪ್ರಾಮಾಣಿಕತೆ ಬೇಕು. ಮೂರು ಸಾವಿರ ವರ್ಷ ಈ ದೇಶದ ಬಹುಜನರನ್ನ, ದಲಿತರನ್ನ, ವೈದಿಕ (ಹಿಂದೂ) ಧರ್ಮ ಹೇಗೆ ನಡೆದುಕೊಂಡಿತು ಅನ್ನೋದು ಜಗತ್ತಿಗೇ ಗೊತ್ತು, ಇನ್ನು ಯಾವ ಕರ್ಮದ ಹಿಂದೂ ಸಂಸ್ಕೃತಿ. 'ಹಿಂದೂ ಸಂಸ್ಕೃತಿ' ಅನ್ನೋದು ಕಳೆದ ಎಂಭತ್ತು ವರ್ಷಗಳಲ್ಲಿ ಭಾರತೀಯ ಬಲಪಂಥೀಯ ರಾಜಕಾರಣ ಹುಟ್ಟುಹಾಕಿದ ಐಡಿಯಾಲಜಿ ಹಾಗೂ ಅಜೆಂಡಾ ಅಷ್ಟೇ: ನೀವು ಹೇಳುವ ಹಿಂದೂ ಸಂಸ್ಕೃ... ಭಾರತೀಯ ಸಾಮಾಜಿಕ ಇತಿಹಾಸದಲ್ಲಿ ಎಲ್ಲೂ ಕಂಡುಬರೋದಿಲ್ಲ.

'ಹಿಂದೂ ಸಂಸ್ಕೃತಿ' ಅಂದರೆ ಏನು ಅನ್ನೋದಕ್ಕೆ ಹಿಸ್ಟರಿ/ ಆಂತ್ರಾಪಾಲಜಿ/ ಸೋಶಿಯಾಲಜಿ/ ಕಲ್ಚರಲ್ ಸ್ಟಡೀಸ್ ಈ ಯಾವುದೇ ನೆಲೆಗಳಿಂದ ಅರ್ಥೈಸಿ. ರಾಜಕೀಯ ಅಜೆಂಡಾ ಹೊಂದಿರೋ ಐಡಿಯಾಲಜಿಗಳು, ಮತಧರ್ಮ... ಪಠ್ಯಗಳು ಆಧುನಿಕ ಜಗತ್ತಿನಲ್ಲಿ ನೇರವಾ... ಮನ್ನಣೆಗೊಳಗಾಗೋದಿಲ್ಲ, ಅದು ಸಂಪನ್ನ ಅಂತ ನೀವು ಸಾಧಿಸಬೇಕಾದರೆ ಮೇಲಿನ ಕೆಲವು ನೆಲೆಗಳಲ್ಲಾದರೂ ತಾವು ತಮ್ಮ ಪ್ರತಿಪಾದನೆಗಳನ್ನ ಸಾಬೀತುಮಾಡಬೇಕಾಗುತ್ತೆ.

ಉದಯ: ಐ ಪಿಟೀ ಯೂ.. ಗೆಟ್ ವೆಲ್ ಸೂನ್ ಬ್ರೊ.. ಐಸಿಸ್ ಬರ್ತಿರೋವಾಗ... ಈಗಾಗಲೇ ಭಾರತದ... 80 ಸಾವಿರಕ್ಕೂ ಹೆಚ್ಚು ಐಸಿಸ್ ಫಾಲೋವರ್ಗಳು ಇದ್ದಾರೆ ಆದ್ರಿಂದ ಹಿಂದೂತ್ವದ ಬಗ್ಗೆ ತಿಳ್ಕೋ.. ಬ್ರಿಟಿಷರು ನಮ್ಮನ್ನ ಲೂಟಿ ಮಾಡಿದರು.. ಇದೀಗ ಐಸಿಸ್‌ನ ಕಾಲ.. ಅವರೇನ... ಮಾಡ್ಕೊಂಡು ಹೋದ್ರೂ ಮಾಡ್ಲಿ ಅಲ್ವಾ..? ಇಟ್ ಈಸ್ ಓಕೆ.. ಗೆಟ್ ವೆಲ್ ಸೂನ್..

ಸೂರ್ಯ: ಸ್ಸಾರಿ.. ನಾನು ಆ ಘಟ್ಟವನ್ನು ಯಾವತ್ತೋ ದಾಟಿದ್ದೇನೆ.. ಈಗ ನಾನು ಯಾವುದೇ ತೆರನ ಧಾರ್ಮಿಕ ಮೂಲಭೂತವಾದಕ್ಕೆ ಅಡಿಯಾಳಾಗದಷ್ಟು ಪ್ರಬುದ್ಧನಾಗಿದ್ದೇನೆ.

ಉಧಯ: (ಕೇಸರೀಕರಣಗೊಳ್ಳುತ್ತಿರುವ ಭಾರತದ ಚಿತ್ರ ಹಾಕಿ) ನಮಗೆ ಬೇಕಿರುವುದು ಇದು. ನಾವದನ್ನ ಪಡೆಯುತ್ತೇವೆ.. ಜೈ ಮೋದೀಜಿ.. ಜೈ ಆರ್‌ಎಸ್‌ಎಸ್...

ಸೂರ್ಯ: ದಯವಿಟ್ಟು ವೈಜ್ಞಾನಿಕ ಮತ್ತು ವಾಸ್ತವ... ನೆಲೆಗಳ ಬಗ್ಗೆ ತಿಳ್ಕೋ.. ಮೊಟ್ಟಮೊದಲಿಗೆ ಈ ದೇಶದ ಪ್ರಜೆಯಾಗಿ ನಿನಗೆ ಸಂವಿಧಾನ ಮತ್ತು ನೆಲದ ಕಾನೂನಿನ ಬಗ್ಗೆ ಗೊತ್ತಿರಬೇಕು. ಹಿಂದೂತ್ವ ಐಡಿಯಾಲಜಿ ಅಂದ... ಅಂತಿಮ ಸತ್ಯ ಎಂದು ನೀನು ತಿಳ್ಕೊಂಡಂತಿದೆ. ಅದು ಹಾಸ್ಯಾಸ್ಪದ... ನಿಜ ಐಸಿಸ್ ಜಗತ್ತಿಗೆ ಒಂದು ದೊಡ್ಡ ಬೆದರಿಕೆ. ಆದರೆ ಒಂದು ತೆರನ ಮತೀಯ ಮೂಲಭೂತ... ವಾದವನ್ನು ಸರಿಪಡಿಸಲು ಇನ್ನೊಂದು ಮತೀಯ ಮೂಲಭೂತವಾದದ ಹಿಂದೆ ಹೋಗಬಾರದು. ಭಾರತ... ಸಂವಿಧಾನ, ಸೆಕ್ಯುಲರ್ ಮತ್ತು ಸಮಾಜವಾದಿ ಚಿಂತನೆಗ... ಮಾತ್ರ ನಮ್ಮ ರಾಷ್ಟ್ರಕ್ಕೆ ವಾಸ್ತವಿಕ ಒಳಿತನ್ನು ಮಾಡಬಲ್ಲವು...

ಭಾರತ ಒಂದು ಹಿಂದೂ ರಾಷ್ಟ್ರ ಅಲ್ಲ, ಭಾರತ ಒಂದು ಸೆಕ್ಯುಲರ್ ಸಮಾಜವಾದಿ ಪ್ರಜಾತಂತ್ರ. ಭಾರತ... ಹಿಂದೂ ರಾಷ್ಟ್ರ ಎಂದು ಹೇಳಿಕೊಳ್ಳುವ ಮೂಲಕ ನೀ... ಸಂವಿಧಾನಕ್ಕೆ ಅವಮಾನ ಮಾಡುತ್ತಿದ್ದಿ.

ಭಾರತ ಎಂದೂ ಹಿಂದೂ ರಾಷ್ಟ್ರ ಆಗಿರಲಿಲ್ಲ, ಅ... ಮುಂದೆಂದೂ ಆಗುವುದೂ ಇಲ್ಲ. ಭಾರತ ಒಂದು ಹಿಂದೂ ರಾಷ್ಟ್ರ ಎಂಬ ನಿನ್ನ ಹೇಳಿಕೆಯಿದೆಯಲ್ಲ ಅದು ಭಾರತದ ಇತಿಹಾಸ ಮತ್ತು ಸಮಾಜವಿಜ್ಞಾನಗಳ ಪ್ರಾಥಮಿಕ ಜ್ಞಾನವೂ ನಿನಗಿಲ್ಲ ಎನ್ನುವುದನ್ನು ತೋರಿಸುತ್ತದೆ. ಭಾರತವು ಪಾಕಿಸ್ತಾನ, ಅಫಘಾನಿಸ್ತಾನ ಅಥವಾ ಕೊಲ್ಲಿ ರಾಷ್ಟ್ರಗಳಂತೆ ಮತಧರ್ಮದ ಮೇಲೆ ಸ್ಥಾಪಿತವಾದ ರಾಷ್ಟ್ರವಲ್ಲ.

ಭಾರತವನ್ನು ಯುಎಸ್‌ಎ, ಇಂಗ್ಲೆಂಡ್ ಮತ್ತು ರಶ್ಯಾ ಮಾದರಿಗಳನ್ನು ಆಧರಿಸಿಕೊಂಡು ಸೆಕ್ಯುಲರ್ ಸಮಾಜವಾದಿ ಪ್ರಜಾತಂತ್ರ ಎಂದು ಸ್ಥಾಪಿಸಲಾಯಿತು.

(ಈ ಸಂಭಾಷಣೆಗಳ ನಡುವೆ ಉದಯ ಏನೇನೋ ಅಸಂಬದ್ಧ ವಾದ ಮಂಡಿಸಿ ಕೊನೆಯಲ್ಲಿ ಅವನ್ನು ಡಿಲೀಟ್ ಮಾಡುತ್ತಾನೆ)

ಸೂರ್ಯ: ಯಾಕೆ ಬಾಲಿಶವಾಗಿ ಮಾತಾಡ್ತಿದೀ... ಇತಿಹಾಸವನ್ನು, ವಿಚಾರವನ್ನು, ಬುದ್ಧಿಯಿಂದ ಎದುರಿಸಬೇಕೇ ಹೊರತು ಭಾವನೆಗಳಿಂದಲ್ಲ, ಸೆಕ್ಯುಲರಿಸಂ ಬಂದಿದ್ದರಿಂದ ಈ ದೇಶದ ದಲಿತನೊಬ್ಬ ಅಸ್ಪೃಶ್ಯತೆಯಿಂದ ಮುಕ್ತನಾದ. ಹಿಂದೂ ಧರ್ಮ ಅವನನ್ನು ಸಾವಿರಾರು ವರ್ಷಗಳ... ನರಕದಲ್ಲಿಟ್ಟಿತ್ತು. ಇದು ಹಿಂದೂ ಸಂಸ್ಕೃತಿ.


ಬುಕ್ಕಲ್ಲಿರೋದು ಓದಿಯೇ ಮನುಷ್ಯನ ಬ... ಭಾರತೀಯರಿಗೆ ಅರ್ಥವಾಗಿದ್ದು.

1 ಅಲ್ಪಸಂಖ್ಯಾತರಿಗೆ ಸ್ವಾತಂತ್ರ್ಯ ಹಿಂದೂಗಳು ಕೊಟ್ಟಿದ್ದಲ್ಲ, ಸಂವಿಧಾನ ಕೊಟ್ಟಿದ್ದು.

2 ಗೋಮಾಂಸ ಜಾಗತಿಕ ಆಹಾರ. ನೂರಾರು ದ... ಜಾತಿಗಳ ಪಾರಂಪರಿಕ ಆಹಾರ ಕೂಡ. ಭಾರತೀಯ ಸಂವಿಧಾನ ಆಹಾರ ಸ್ವಾತಂತ್ರ್ಯವನ್ನು ಕೊಟ್ಟಿದೆ. ಇಷ್ಟವಿದ್ದವ... ಗೋಮಾಂಸ ತಿನ್ನಬಹುದು.

3 ಸೀರೆ ಉಡುವುದು ಹಿಂದೂ ಮಹಿಳೆಯ... ಸಾಂಸ್ಕೃತಿಕ ವಿಚಾರ. ಬುರ್ಖಾ ಧರಿಸೋದು ಮು... ಮಹಿಳೆಯರ ಸಾಂಸ್ಕೃತಿಕ ವಿಚಾರ. ಸಂವಿಧಾನ ಉಡು... ಹಾಗೂ ಸಾಂಸ್ಕೃತಿಕ ಸ್ವಾತಂತ್ರ್ಯ ಕೂಡ ನೀಡಿದೆ. (ನಾ... ಬುರ್ಖಾ ಬೆಂಬಲಿಗ ಅಲ್ಲ).

ಓದದವನು, ಅರಿವಿಲ್ಲದವನೇ ಅಲ್ಲ, ಸಂವಿಧಾನ...



2014ರ ಚುನಾ... ಸಂದರ್ಭದಲ್ಲಿ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಮೋದಿಯ ಭಾಷಣಗಳನ್ನು ... ಎಂದು ಬಿಂಬಿಸುವ ಫೋಟೋಶಾಪ್

ಓದದೇ ಧಾರ್ಮಿಕ ಮೂಲಭೂತವಾದಿಗಳ ಭಾಷಣವನ್ನೇ ವೇದವಾಕ್ಯ ಅಂದುಕೊಂಡವನು ಮೂರ್ಖ.

ಭಾರತದಿಂದ ವಿದೇಶಕ್ಕೆ ರಫ್ತಾಗುವ ಗೋಮಾಂಸವನ್ನು ಡೀಲ್ ಮಾಡುವ ಟಾಪ್ ಐದು ಕಂಪೆನಿಗಳು ಹಿಂದೂಗಳದ್ದು. ಕಸಾಯಿಖಾನೆಗೆ ಗೋವು ಮಾರುವ 80% ಜನ ಹಿಂದೂಗಳು. ಮೀನು, ಕೋಳಿ, ಕುರಿ ಮಾಂಸ ಇದ್ದ ಹಾಗೇ ಗೋಮಾಂಸ ಕೂಡ ಕೆಲವರಿಗೆ ಆಹಾರ. ತಿನ್ನಲು ಬಲವಂತ ಇಲ್ಲ, ಇಷ್ಟವಿದ್ದವರು ತಿನ್ನಬಹುದು.

ಸಾವಿರಾರು ವರ್ಷಗಳಿಂದ ಹಿಂದೂಗಳು ಗೋಮಾಂಸ ತಿಂದು ಬಂದಿದ್ದಾರೆ. ಭಾರತದ ಅದೆಷ್ಟೋ ದಲಿತ ಜಾತಿಗಳ, ಬುಡಕಟ್ಟು ಪಂಗಡಗಳ ಪಾರಂಪರಿಕ ಆಹಾರ ಗೋವು.

ಕತ್ತೆಯ ಹಾಲು ಕುಡಿಯುವ ಪ್ರದೇಶಗಳು ಇದ್ದಾವೆ. ಕತ್ತೆ ತಾಯಿಯಾದೀತೆ? ನಿಮಗೆ ಗೋವು ಪವಿತ್ರ ಆದರೆ ನೀವು ತಿನ್ನಬೇಡಿ. ಯಾರಿಗೆ ಗೋವು ಪವಿತ್ರ ಅಲ್ಲವೋ ಅವರು ತಿನ್ನಲಿ ಬಿಡಿ.

ಗೋವಿನ ಬಗ್ಗೆ ಕಾಳಜಿ ಇರುವ ಹಿಂದೂಗಳು ಹಸುಗಳನ್ನ ಕಸಾಯಿಖಾನೆಗೆ ಏಕೆ ಮಾರಬೇಕು? ವೈಜ್ಞಾನಿಕವಾಗಿ ಗೋಹತ್ಯೆಯನ್ನು ನಿಲ್ಲಿಸಲು ಸಾಧ್ಯ ಇಲ್ಲ. ಏಕೆಂದರೆ ಮುಕ್ಕಾಲು ಭಾಗ ವಿಶ್ವಕ್ಕೆ ಅದು ಪ್ರೀತಿಯ ಆಹಾರ.

ನಿಮ್ಮ ನರೇಂದ್ರ ಮೋದಿ ನಿಲ್ಲಿಸಬಹುದಿತ್ತಲ್ವೇ? ಏಕೆ ನಿಲ್ಲಿಸಲ್ಲ? ಯಾಕೆಂದರೆ ದೇಶಕ್ಕೆ ಕೋಟ್ಯಾಂತರ ರೂಪಾಯಿ ಆದಾಯ ತಂದುಕೊಡೋ ಉದ್ಯಮ ಅದು. ಹಿಂದೂಗಳೇ ಅದರಲ್ಲಿ ಮುಂಚೂಣಿಯ ವ್ಯಾಪಾರಿಗಳು.

ಗೋಮಾಂಸದ ರಾಜಕಾರಣ ಬಿಜೆಪಿಯ ರಾಜಕೀಯ ದಾಳ ಅಷ್ಟೇ ಬಿಟ್ಟರೆ ಅದನ್ನು ಬ್ಯಾನ್ ಮಾಡಲು ಅವರಿಂದ ಸಾಧ್ಯವಿಲ್ಲ. ಅದು ವಾಸ್ತವ.

ಸತ್ಯವನ್ನು ಒಪ್ಪಿಕೊಳ್ಳೋಕೆ ಧೈರ್ಯ ಹಾಗೂ ಪ್ರಾಮಾಣಿಕತೆ ಬೇಕು. ಸತ್ಯಕ್ಕೆ ಬೆನ್ನು ತಿರುಗಿಸಿ ಓಡಬಾರದು. ಮನುಷ್ಯ ಯಾವುದರಿಂದ ತಪ್ಪಿಸಿಕೊಂಡರೂ ತನ್ನ ಮನಸ್ಸಿನಲ್ಲಿ ಕೊರೆಯುತ್ತಿರೋ ಸತ್ಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ನೀವು ಗೋಮಾಂಸದ ವಿಚಾರದಲ್ಲಿ ಏನಾದರು ಹೇಳಬೇಕಿದ್ದರೆ ನಿಮ್ಮ ದೇವರು ಮೋದಿಗೆ ಹೇಳಿ. ಅವರಿಗೆ ತಾಕತ್ತಿದೆ ಅಲ್ವೇ... ಅವರು ನಿಲ್ಲಿಸಲಿ ನೋಡೋಣ. ನಾವು ಹೇಗೂ ಹಾಳಾದವರು. ನೀವು ಮೋದಿಯನ್ನ ಬಳಸಿಕೊಂಡು ಹಿಂದೂರಾಷ್ಟ್ರ ಸ್ಥಾಪನೆ ಅನ್ನೋ ನನಸಾಗದ ಕನಸು ಕಾಣಿ. ಧನ್ಯವಾದ.

(ಈ ಹಂತದಲ್ಲಿ ಉದಯ ಅಸಭ್ಯ ಮಾತುಗಳ ಮೂಲಕ ವೈಯಕ್ತಿಕ ನಿಂದನೆಗೆ ತೊಡಗುತ್ತಾನೆ).

ಸೂರ್ಯ: ಇಷ್ಟೇ ಅಲ್ವಾ ನಿನ್ ಬುದ್ಧಿ. ಮಾತಾಡೋಕೆ ತಲೆಯಲ್ಲಿ ನಾಲ್ಕು ಕಾಸಿನ ನಾಲೆಜ್ ಇಲ್ಲ ಕೊನೆಗೆ ವೈಯಕ್ತಿಕ ನಿಂದನೆಗೆ ಇಳಿದುಬಿಡೋದು. ಇದನ್ನೇ ಷಂಡತನ ಅನ್ನೋದು.

ಉದಯ: ಲೋ ಗುಲ್ಲು ನನ್ ಮಗನೆ.. ಷಂಡ ನಿಮ್ ಅಪ್ಪ ಅಂತ ಅನ್ನೋದು. ಆದರೆ ನನ್ ಸಂಸ್ಕೃತಿಯಲ್ಲಿ ಅದು ಇಲ್ಲ.. ಮಾನಮರ್ಯಾದಿ ನಮಗೆ ಇದೆ.. ನಮ್ ಅಪ್ಪ ಅಮ್ಮ ಒಳ್ಳೆ ಸಂಸ್ಕೃತಿ ಕಲಿಸಿದ್ದಾರೆ.. ನಿನ್ನಂತಹ ಗುಂಡು ಗೋವಿ ಅಲ್ಲ... ನಾನು ಸಾಫ್ಟ್‌ವೇರ್ ಎಂಜಿನಿಯರ್.. ಗುರು ನಿನ್ನಂತಹ ಚೀಪ್ ನಾಯಿ ಜೊತೆ ಮಾತಾಡೋ ಪರಿಸ್ಥಿತಿ ಬಂದಿದೆ..

ಸೂರ್ಯ: ಸಾಫ್ಟ್‌ವೇರ್ ಎಂಜಿನಿಯರ್ ಆದರೇನಂತೆ ನೀನು ಮೇಲಿಂದ ಉದುರಿ ಬಿದ್ದವನಾ? ನಾನು ಇಂಗ್ಲಿಷ್ ಸಾಹಿತ್ಯ ಹಾಗೂ ಭಾಷಾವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರ. ನಾನೇನು ಕೊಚ್ಕೊಳ್ಳಿದ್ದೀನ?

ಅಪ್ಪ ಅಮ್ಮನ ವಿಷಯಕ್ಕೆ ಬಂದ್ರೆ ನಾನು ಸುಮ್ನಿರಲ್ಲ. ನಿಮ್ಮಪ್ಪ ಅಮ್ಮನ ವಿಷಯಕ್ಕೂ ಬರ್ಬೇಕಾಗುತ್ತೆ ಬಿ ಇ ಸಾಫ್ಟ್‌ವೇರ್ ಎಂಜಿನಿಯರ್ ಮಾಡಿದವರು ಗ್ರೇಟಾ? ಉಳಿದವರೆಲ್ಲ ವೇಸ್ಟಾ? ಇಷ್ಟು ಸಾಕಲ್ವಾ ನಿನ್ನ ಮುಠ್ಠಾಳತನ ಗೊತ್ತಾಗೋಕೆ?

ಸಿಟ್ಟಿಗೆ ಟೈಪ್ ಮಾಡೋಕೆ ಬರಲ್ಲ... ಸಾಫ್ಟ್‌ವೇರ್ ಎಂಜಿನಿಯರ್ ಅಂತ ಬಡಾಯಿ ಬೇರೆ...


ಜನರಲ್ ನಾಲೆಡ್ಜ್ ಇಲ್ವಲ್ಲೋ ನಿನಗೆ? ಈ ದೇಶದ ಸಂವಿಧಾನ ಏನು ಹೇಳತ್ತೆ ಅಂತ ಗೊತ್ತಿಲ್ಲ, ಬಿಇ ಅಂತ ಬೇರೆ ಎಲ್ಲೂ ಬಡಾಯಿ ಕೊಚ್ಚಬೇಡ. ಜನ ನಗ್ತಾರೆ...

ಉದಯ: ಲೋ.. ನಿನ್ನ್ ನೀನ್ ನೋಡ್ಕೊಳ್ಳೋ... ಅಚ್ಚಚ್ಚು ನನ್ ಮಾತಾಡುದ್ರೆ ನೀನ್ ಎಲ್ ಇದ್ದಾ ಅಲ್ಲೆ ಹುಡುಕೊಂಡು ಬಂದು ಹೊಡೀತೀನಿ... ಮುಚ್ಕೊಂಡು ಇದ್ರೆ ಸರಿ ಒಳ್ಳೆ ಕೋತಿ ಇದ್ದಾಂಗ್ ಇದ್ದಾ.. ಮುಚ್ಕೊಂಡು ಹುಟ್ಕೊ..


ಸೂರ್ಯ: ನೀನು ನಿಮ್ಮಪ್ಪಂಗೆ ಹುಟ್ಟಿದ್ರೆ ಬಂದ್ ಟೈ ಮುಟ್ಕೋ ನೋಡೋಣ ಷಂಡ. ನೀನ್ ಯಾವ ದೊಣ್ಣೆನಾಯ್ಕ ನನಗೆ ಮಾತಾಡ್ಬೇಡ ಅನ್ನೋಕೆ... ಏನ್ ಕಿತ್ಕೋತ್ಯ ಕಿತ್ಕೊಪ್ಪ ..

(ಈ ಹಂತದಲ್ಲಿ ಶಾಂತರಾಜ್ ಎಂಬ ಹಿರಿಯರು ಮಧ್ಯಪ್ರವೇಶಿಸಿ ಸೂರ್ಯನಿಗೆ "ಅವರ ಟೊಳ್ಳು ಚಿಂತನೆಗಳು ಬತ್ತಲಾದಾಗ ಅವರು ಬೈಗುಳ ಸುರಿಸಲು ತೊಡಗುತ್ತಾರೆ" ಎನ್ನುತ್ತಾರೆ).

ಸೂರ್ಯ: ನೀನು ಹೊಡೆಯೋ ತನಕ ನಾನೇನು ಕಡ್ಲೆಕಾಯಿ ತಿನ್ತಿರ್ತೀನಾ? ನನಗೂ ತಿರುಗಿಸಿ ಹೊಡೆಯೋಕೆ ಬರುತ್ತೆ..



ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ನಂತರ ಎ.ಕೆ. ಸುಬ್ಬಯ್ಯನವರ ಅಭಿಪ್ರಾಯಗಳನ್ನು ತಿರುಚಿ ಚೆಡ್ಡಿಗಳು ಸೃಷ್ಟಿಸಿದ ಫೋಟೋಶಾಪ್ ಚಿತ್ರಗಳು



ಉದಯ: ನಿನ್ ನಂಬರ್ ಕಳಿಸೋ ತಾಕತ್ ಇದ್ರೆ..

ಸೂರ್ಯ: ನಂಬರ್ ಸಿಕ್ರೆ ಏನ್ ಮಾಡ್ತೀರಾ?

ಶಾಂತರಾಜ್: ಚರ್ಚೆಗಳು ಚರ್ಚೆಯೇ ಆಗಿರಲಿ.. ಘನತೆ ಕಾಪಾಡಿಕೊಳ್ಳಿ.. (ಉದಯನಿಗೆ) ನೀನು ಸಾಫ್ಟ್‌ವೇರ್ ಎಂಜಿನಿಯರ್ ಅಂತೀಯಾ. ಅದಕ್ಕೆ ಅನುಗುಣವಾಗಿ ನಡೆದುಕೋ. ಯಾರನ್ನೂ ಹೆದರಿಸಿ ಅವರ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ.

ಉದಯ: ಶಾಂತರಾಜ್ ಅವನ ನಂಬರ್ ಕೊಡ್ತೀರಾ.. ನಾನು ಮಾತಾಡ್ತೀನಿ..

ಸೂರ್ಯ: ಆತ ಕೆಟ್ಟ ಭಾಷೆಯನ್ನು ಬಳಸಿದಾಗ ನಾನು ಸುಮ್ಮನಿರಲು ಸಾಧ್ಯವಿಲ್ಲ.

ಶಾಂತರಾಜ್: (ಉದಯನಿಗೆ) ಏನ್ ಹೆದರಿಸ್ತೀರಾ? ಹೆದರ್ತಾರೆ ಅಂದ್ಕೊಂಡಿದ್ದೀರಾ? ಅವರ ವಿಚಾರ ನಿಮ್ ವಿಚಾರಕ್ಕಿಂತ ಬೇರೆ. ಆದರೆ ನಿಮ್ ಭಯಕ್ಕೆ ಅವರು ಬದಲಾಗ್ತಾರಾ, ಏನಂದ್ಕೊಂಡಿದ್ದೀರಾ?

ಉದಯ: ನಾನು ಷಂಡ ಅನ್ನೋದಕ್ಕೆ ಆತನಿಗೆ ಎಷ್ಟು ಧೈರ್ಯ ಸರ್.. ಯಾವನೋ ನಾಯಿಯಿಂದ ನನ್ ಗಂಡಸೋ ಇಲ್ಲೋ ಅಂತ ತೋರಿಸ್ಬೇಕಾ? (ಈ ನಡುವೆ ತಾನು ಬಳಸಿದ್ದ ಅತ್ಯಂತ ಅವಾಚ್ಯ ಪದಗಳುಳ್ಳ ಕಮೆಂಟ್‌ಗಳನ್ನು ಈತ ಡಿಲೀಟ್ ಮಾಡಿ ಬಯ್ದುದು ಸೂರ್ಯ ಮಾತ್ರ, ತಾನು ತುಂಬಾ ಸಭ್ಯ ಎಂದು ಕಾಣುವ ಹಾಗೆ ಮಾಡುತ್ತಾನೆ).

ಉದಯ: ಸೂರ್ಯ ಸೆಂಡ್ ಮಿ ಯುವರ್ ನಂಬರ್ ಫಸ್ಟ್..

ಶಾಂತರಾಜ್: ಪ್ರೀತಿಯಿಂದ ವಿಚಾರಗಳ ಶಕ್ತಿಯಿಂದ ಗೆಲ್ಲಿ.. ತೋಳ್ಬಲ, ದೊಡ್ಡ ಗಂಟಲಿಂದ ಯಾರನ್ನೂ ಗೆಲ್ಲೋಕೆ ಆಗೋಲ್ಲ.. ಅವರು ಹಂಗ್ ಆಡಿದ್ರೆ ತಪ್ಪು, ನೋ ಡೌಟ್!

ಬಾಲಕೃಷ್ಣ: ಪ್ರೀತಿಯೇ ದೇವರು, ಮಾನವತೆಯೇ ಧರ್ಮ.

ಸೂರ್ಯ: ಮೊದಲು ಗಾಂಡೂ ಅಂದವನಿಗೆ ನಾನು ಷಂಡ ಅಂದೆ. ಒಬ್ಬರು ನನ್ನ ಮೇಲೆ ಕೆಸರು ಎರಚಬೇಕಾದರೆ ನಾನು ಪನ್ನೀರು ಚಿಮುಕಿಸೋಕೆ ಆಗಲ್ಲ... ಮೋದಿಯನ್ನ ಪ್ರಶ್ನಿಸಿದ ಕೂಡಲೇ ಅವನ ತಾಳ್ಮೆಯ ಕಟ್ಟೆ ಒಡೆದು ಅವಾಚ್ಯ ಶಬ್ದ ಆರಂಭಿಸಿದ. ಅವನ ಭಾಷೆಗೆ ತಕ್ಕಂತೆ ನಾನೂ ಭಾಷೆ ಬದಲಿಸಿದೆ...

ಉದಯ: ಅವನ ಹಳೇ ಪೋಸ್ಟ್ ನೋಡಿ ಸರ್.. ಹೊಟ್ಟೆಗೆ ಏನ್ ತಿನ್ತಾನೋ... ಸ್ನಾತಕೋತ್ತರ ಪದವಿ ಅಂತೆ.. ಅವನ ಯೋಗ್ಯತೆಗೆ ಅಪ್ಪ ಅಮ್ಮ ಷಂಡ.. ಗಂಡುಸ್ತನ ಇಲ್ದೆ ಇರೋನು ಅಂತ ಯೂಸ್ ಮಾಡಿದ ಗುಲ್ಲು ಅವನು.. ಪ್ರೀತಿಯಿಂದಾನೇ ನಾನು ಮೆಸೇಜ್ ಮಾಡಿದ್ದು.. ಬ್ರೋ ಅಂತಾನೇ ಕರಿದಿದ್ದೀನಿ.. ಬಟ್ ಲಿಮಿಟ್ ಮೀರಿ ಮಾತಾಡಿ, ಏನು ಕಿತ್ಕೋತೀಯೋ ಕಿತ್ಕೋ ಅಂತ ಹೇಳ್ತಾನಲ್ಲ.. ಎಷ್ಟ್ ಕೊಬ್ಬು ಇರ್ಬೇಕು..

ಸೂರ್ಯ: ಉದಯ, ಮೊದ್ಲು ನಂಬರ್ ಸೆಂಡ್ ಮಾಡು ನಿನ್ ಜೊತೆ ಮಾತಾಡ್ಬೇಕು..

ಶಾಂತರಾಜ್: ನಿಮಗೆ ಉಪದೇಶ ಕೊಡುವ ಸಾಮರ್ಥ್ಯ ನನಗಿಲ್ಲ, ನಾನೂ ಎಷ್ಟೋ ಬಾರಿ ತಾಳ್ಮೆ ತಪ್ಪಿ ಕೆಟ್ಟ ಭಾಷೆ ಬಳಸಿದ್ದೇನೆ. ಆದರೂ ನೀವು ತಾಳ್ಮೆ ತಗೊಳ್ಳಿ...

ಸೂರ್ಯ: (ಶಾಂತರಾಜ್‌ರನ್ನು ಉದ್ದೇಶಿಸಿ) ಮೊದಲಿನ ಕಾಮೆಂಟ್ ನೋಡಿ ಸರ್... ಇವನು ನನ್ನ ಜೊತೆ ಚೆನ್ನಾಗಿ ಮಾತಾಡ್ತಿದ್ದ, ಎಲ್ಲಿವರೆಗೆ? ಇವನ ರೊಳ್ಳೆಗಳು ಮುಗಿಯೋ ವರೆಗೆ. ಆಮೇಲೆ ಗುಲ್ಲೂ ಗಾಂಡೂ ಅಂತ ಶುರುಹಚ್ಚಿಕೊಂಡ. ಆಗ ನಾನೂ ಸುಮ್ಮನಿರಲಿಲ್ಲ, ನಾನೂ ಮೊದಲು ತಾಳ್ಮೆಯಿಂದಲೇ ಮಾತಾಡಿದ್ದೆ.

ಉದಯ: ಸೂರ್ಯ ನಿಮ್ ಜೊತೆ ಮಾತಾಡಿ ಕ್ಲಿಯರ್ ಮಾಡ್ಕೋಬೇಕು.. ನಿಮ್ ನಂಬರ್ ಸೆಂಡ್ ಮಾಡಿ..

ಶಾಂತರಾಜ್: ಹೋಗ್ಲಿ ಬಿಡಿ... ನೀವಿಬ್ರೂ ಎಳೆ ವಯಸ್ಸಿನವರು.. ತಾಳ್ಮೆ ತಪ್ಪೋದು ಸಹಜ.. ಹೋದದ್ದು ಹೋಗಲಿಬಿಡಿ...

ಸೂರ್ಯ: ಉದಯ...ಮೊದಲು ಕೆಟ್ಟ ಭಾಷೆ ಬಳಸಲು ಶುರುಮಾಡಿದ್ದು ನೀನು. ನಾನ್ಯಾಕೆ ಸುಮ್ಮನಿರಬೇಕಿತ್ತು?

ಉದಯ: ನೀವು ಸುಸಂಸ್ಕೃತರು ಫ್ರೆಂಡ್ ನಾವೇ ಕಚಡಾ ಆಯ್ತಾ.. ಸೆಲ್ ನಂಬರ್ ಕಳಿಸಿ..

ಸೂರ್ಯ: ನನಗೆ ನಂಬರ್ ನೀಡುವ ಇಚ್ಛೆ ಈಗಿಲ್ಲ. ಕೊಡಬೇಕು ಅನಿಸಿದರೆ ನಿಮಗೆ inbox ಮಾಡ್ತೇನೆ.

ಶಾಂತರಾಜ್: ನಾವೇಕೆ ಜಗಳ ಮಾಡಬೇಕು? ನಮ್ಮ ಆಲೋಚನೆಗಳನ್ನು ಹೇಳಿಕೊಳ್ಳೋಣ, ಬೇರೆಯವರ ಅಭಿಪ್ರಾಯಕ್ಕೆ ಕಿವಿಗೊಡೋಣ. ನಮಗೆ ಒಪ್ಪಿತವಾದುದನ್ನು ಸ್ವೀಕರಿಸೋಣ. ನಮಗೆ ಒಪ್ಪಿತವಾದುದನ್ನು ಹೇಳೋಣ. ಸಿಂಪಲ್.. ಅದನ್ನು ವೈಯಕ್ತಿಕ ಮಟ್ಟಕ್ಕೆ ಒಯ್ಯೋದ್ಯಾಕೆ? ನನಗೆ ಅರ್ಥವೇ ಆಗುವುದಿಲ್ಲ, ಬರೀ ವಾದಗಳ ಮೂಲಕ ಯಾರೂ ಬೇರೆಯವರನ್ನು ಒಪ್ಪಿಸಲು ಸಾಧ್ಯವಿಲ್ಲ, ಫೇಸ್‌ಬುಕ್‌ನಲ್ಲಂತೂ ಖಂಡಿತಾ ಸಾಧ್ಯವಿಲ್ಲ.

ಉದಯ: ಶಿವಮೊಗ್ಗ ಅಲ್ವಾ... ಯಾವ ಪ್ರದೇಶ ಸಾಗರ ಅಲ್ವಾ.. ಯಾವಾಗ ಕಾಲ್ ಮಾಡ್ತೀಯಾ? ನಂಬರ್ ಕೊಡಿ ಅದ್ರಲ್ಲೇನಿದೆ, ನನ್ ಫ್ರೆಂಡ್ಸ್ ಕೂಡಾ ಶಿವಮೊಗ್ಗದಲ್ಲಿದ್ದಾರೆ.. ಹೇಳಿ, ಒಳ್ಳೆ ಫ್ರೆಂಡ್ ಸಿಕ್ಕಿದ ಅಂದ್ಕೋತೀನಿ..

ಸೂರ್ಯ: (ಶಾಂತರಾಜ್‌ಗೆ) ನೋಡಿ ಸರ್ ಎಂಥ ಧೂರ್ತ ಅಂತ. ಈಗಾಗಲೇ ತಾನು ಮೊದಲು ಅವಾಚ್ಯ ಬಳಸಿದ ಕಾಮೆಂಟ್ ಡಿಲೀಟ್ ಮಾಡಿದ್ದಾನೆ? ಇದೇ ಅಲ್ವೇ ಭಕ್ತರ ಬುದ್ಧಿ? ಕಾಮೆಂಟ್ ಮಾಡಿದ ಮೇಲೆ ಎದುರಿಸಬೇಕು. ಅದನ್ನ ಬಿಟ್ಟು ಡಿಲೀಟ್ ಮಾಡೋದ್ಯಾಕೆ ಹೇಡಿ ಥರ. ನಾನು ಇವನನ್ನು ಷಂಡ ಅನ್ನೋಕೆ ಮುಂಚೆ ಮೋದಿ ಬಗ್ಗೆ ಮಾತಾಡಿದ್ದಕ್ಕೆ ರೊಚ್ಚಿಗೆದ್ದು ಒಂದು ಅವಾಚ್ಯ ಕಾಮೆಂಟ್ ಹಾಕಿದ್ದ. ಈಗ ಸಂಪನ್ನನಂತೆ ನಾಟಕ ಆಡೋದ್ಯಾಕೆ?

ನನ್ನ ಈ ಕಾಮೆಂಟಿನ ಮುಂಚೆ ಇವನದೊಂದು ಅವಾಚ್ಯ ಶಬ್ದದ ಕಾಮೆಂಟ್ ಇತ್ತು, ನಾನು ಇವನಿಗೆ ಈ ಕಾಮೆಂಟ್ ಹಾಕಲು ಉದ್ದೇಶ ಆತ ವೈಚಾರಿಕ ವಾದ ಎದುರಿಸಲು ಆಗದೇ ವೈಯಕ್ತಿಕ ನಿಂದೆಗೆ ಇಳಿದದ್ದು.

ಉದಯ: ಗುರು ನಿನ್ ನಂಬರ್ ಕೊಡು ಸಂಪನ್ನ ನಾನೋ ನೀನು ಅಂತ ಹೇಳ್ತೀನಿ..


(ಧಮಕಿಯ ಭಾಷೆಯ ಗಮನಿಸಿ. ಈ ಹಂತದಲ್ಲಿ ಬೇಸರದಿಂದ ಸೂರ್ಯ ವಾದ ನಿಲ್ಲಿಸುತ್ತಾನೆ)

ಉದಯ: ಅದೇನೋ ಅಂತಾರಲ್ಲ.. ಅಹಂಕಾರ ಅನ್ನೋದು ಮೈಯೊಳಗೆ ಇರಬೇಕು ದುರಹಂಕಾರ ಅನ್ನೋದು ತಲೆ ಒಳಗೆ ಇರಬಾರದು ಅಂತ.. ಹಾಗಾಯ್ತು.. ಶ್ರೀ ಬಾಲಕೃಷ್ಣ ಬಾಸ್... ಈ ಮೆಂಟಲ್ಲಿ ರಿಟಾರ್ಡೆಡ್ ಜೊತೆ ಮಾತಾಡಿ ಮೈ ಉರೀತಿದೆ.. ಗಂಡಸ್ತನದ ಬಗ್ಗೆ ಮಾತಾಡೋರು ಸುಮ್ಮನಾಗೋದು..

■ ಶ್ರೀನಿವಾಸ್ ಕಾರ್ಕಳ







ಮೋದಿಯ ತಥಾಕಥಿತ 'ಬಿಚ್ಚುಮನಸ್ಸಿನ ಸಂದರ್ಶನ'ದ ಅಸಲಿಯತ


ನರೇಂದ್ರ ಮೋದಿ ಜೊತೆ ಪ್ರತ್ಯೇಕ ಸಂದರ್ಶನಕ್ಕಾಗಿ ಪ್ರಯತ್ನ ಮಾಡುವುದೂ ಒಂದೆ, ಉಕ್ಕಿನ ಕಡಲೆ ಜಗಿಯುವುದೂ ಒಂದೆ ಎನ್ನುವುದು ಹಲವು ಪತ್ರಕರ್ತರ ಅನುಭವ. ಮೋದಿಯೊಂದಿಗೆ ಸಂದರ್ಶನ ನಿಗದಿಪಡಿಸಲು ಸುದೀರ್ಘ ಕಾಲ ಬೇಕಾಗಿರುವುದು ಮಾತ್ರವಲ್ಲ ಅನೇಕ ಎಡರುತೊಡರುಗಳನ್ನೂ ದಾಟಬೇಕಾಗುತ್ತದೆ. ಇವೆಲ್ಲವನ್ನೂ ಗೆದ್ದು ಕೊನೆಗೊಮ್ಮೆ ಅನುಮತಿ ಸಿಕ್ಕಿತೆಂದಾದರೂ ಪತ್ರಿಕಾಧರ್ಮಕ್ಕೆ ಬದ್ಧರಾಗಿರುವ ಪತ್ರಕರ್ತರ ಮಟ್ಟಿಗೆ ಭಾರಿ ನಿರಾಸೆ ಕಟ್ಟಿಟ್ಟ ಬುತ್ತಿ. ಏಕೆಂದರೆ ಅದೊಂದು ಪೂರ್ವನಿಗದಿತ ಸಂದರ್ಶನ ಆಗಿರುತ್ತದೆ. ಅಂದರೆ ಎಲ್ಲಾ ಪ್ರಶ್ನೆಗಳನ್ನು ಮೊದಲೆ ಸಿದ್ಧಪಡಿಸಿ, ಪ್ರಧಾನಿ ಕಚೇರಿಗೆ ಕಳುಹಿಸಿ, ಅಲ್ಲಿಂದ ಅನುಮೋದನೆ ಸಿಕ್ಕಬಳಿಕ ಮೊದಲೆ ಸಿದ್ಧಪಡಿಸಿದ ಉತ್ತರಗಳಷ್ಟೆ ದೊರೆಯುತ್ತವೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ ಅದೊಂದು ಏಕಾಲಾಪ, ಸಂವಾದ ಅಲ್ಲ. ಆತನ ಮಾತು, ಭಾಷಣ, ಮನ್ ಕಿ ಬಾತ್ ಇತ್ಯಾದಿಗಳೆಲ್ಲವೂ ಬರೀ ಏಕಾಲಾಪಗಳು. 45.6 ಗಂಟೆಗಳಿಗೊಂದರಂತೆ ಭಾಷಣ ಬಿಗಿಯಬಲ್ಲ ಈ "ಶ್ರಮಜೀವಿ" ಪ್ರಧಾನಿ ಸಂಸತ್ತಿನಲ್ಲಿ ಸದಸ್ಯರ ಜೊತೆ ಸಂವಾದ ನಡೆಸಿದ, ಅವರ ಪ್ರಶ್ನೆಗಳಿಗೆ ಉತ್ತರಿಸಿದ ನಿದರ್ಶನಗಳು ಇಲ್ಲವೆ ಇಲ್ಲ ಎನ್ನುವಷ್ಟು ಕಮ್ಮಿ ಎಂಬುದನ್ನು ಗಮನಿಸಬೇಕು.

ಇತ್ತೀಚೆಗೆ ಟೈಮ್ಸ್ ನೌ ವಾಹಿನಿಯ ಪ್ರಧಾನ ಸಂಪಾದಕ ಆರ್ನಬ್ ಗೋಸ್ವಾಮಿ ಮತ್ತು ಪ್ರಧಾನಿ ಮೋದಿ ನಡುವೆ ನಡೆದ ತಥಾಕಥಿತ ಸಂದರ್ಶನ ಕೂಡ ಮತ್ತೊಂದು ಏಕಾಲಾಪವೆ ಆಗಿತ್ತೆಂಬ ಸತ್ಯ ಈಗ ಬೆಳಕಿಗೆ ಬಂದಿದೆ. ಅಂದಹಾಗೆ ಮಧ್ಯಮ ಮತ್ತು ಮೇಲ್ವರ್ಗದ ಜನರಲ್ಲಿ "ದ ನೇಷನ್ ವಾಂಟ್ಸ್ ಟು ನೊ" ಡಯಲಾಗ್ (ಕು)ಖ್ಯಾತಿಯ ಆಂಕರ್ ಆರ್ನಬ್‌ನ ಹೆಸರು ಕೇಳದವರು ಬಹುಶಃ ಯಾರೂ ಇರಲಾರರು. 'ನ್ಯೂಸ್ ಅವರ್' ಎಂಬ ತಥಾಕಥಿತ ಚರ್ಚಾಕಾರ್ಯಕ್ರಮದಲ್ಲಿ ಎಲ್ಲರ ಮೇಲೆ ಎಗರಾಡುವ ಈತ ಪತ್ರಕರ್ತನ ತಾಟಸ್ಥ ಧೋರಣೆಗೆ ತಿಲಾಂಜಲಿಯಿತ್ತು ಅದೆಷ್ಟೊ ಸಮಯ ಕಳೆದಿದೆ. ಆದರೇನು, ಚಾನಲ್ ಮಾಲೀಕರ ಪಾಲಿಗೆ ಈತ ಟಿಆರ್‌ಪಿ ಹೆಚ್ಚಿಸುವ ಅನರ್ಘ್ಯ ರತ್ನ. ಭಾರತೀಯ ಜನತೆಯ ಏಕೈಕ ಪ್ರತಿನಿಧಿ ತಾನೇ ಎಂಬಂತಾಡುವ ಆರ್ನಬ್ ವಾಸ್ತವದಲ್ಲಿ ಸಂಘ ಪರಿವಾರದ ಪ್ರತಿನಿಧಿ ಮತ್ತು ಮೋದಿಯ ಪರಮಾಪ್ತರಲ್ಲೊಬ್ಬ ಎನ್ನುವುದು 2014ರ ಚುನಾವಣೆಗಳ ಕಾಲದಲ್ಲಿ ಸಾಬೀತಾಗಿದೆ. ಈ ಹಿನ್ನೆಲೆ ಅರಿತವರಿಗೆಲ್ಲ ಮೊನ್ನೆ ನಡೆದ ಆರ್ನಬ್, ಮೋದಿ ನಡುವಿನ ಸಂದರ್ಶನ ಎಂದಿನಂತಿರದೆ ತುಂಬಾ ಸೌಮ್ಯವಾಗಿದ್ದುದನ್ನು ಕಂಡು ಅಚ್ಚರಿಯಾಗಿಲ್ಲ. ಆದರೆ ಆರ್ನಬ್‌ನ 'ಬಿಸಿಬಿಸಿ' ಕಾರ್ಯಕ್ರಮಗಳನ್ನು ತಪ್ಪದೆ ವೀಕ್ಷಿಸುವ ಕೆಲವರು ತಮ್ಮ ಕಣ್ಣುಗಳನ್ನೆ ನಂಬಲಾರದೆ ಮತ್ತೆಮತ್ತೆ ಹೊಸಕಿಕೊಂಡು ನೋಡಿದರೆ ಅನೇಕ ಮುಗ್ಧ ವೀಕ್ಷಕರು ಮೋದಿಯ "ಬಿಚ್ಚುಮನಸ್ಸಿನ ಮಾತು"ಗಳನ್ನು ಹಾಡಿಹೊಗಳಿದ್ದಾರೆ!

ಆದರೆ ಮೋದಿಯ ಆ ತಥಾಕಥಿತ ಸೌಮ್ಯ ಸಂದರ್ಶನದ ಹಿಂದಿನ ಅಸಲಿಯತ್ತು ಇದೀಗ ಬಟಾಬಯಲಾಗಿದೆ! ಪತ್ರಿಕಾಧರ್ಮಕ್ಕೆ ವಿರುದ್ಧವಾಗಿ ಅಂದಿನ ಪ್ರಶ್ನೋತ್ತರಗಳನ್ನು ಮೊದಲೇ ನಿರ್ಧರಿಸಲಾಗಿತ್ತೆಂದು ಅದೇ ಟೈಮ್ಸ್ ನೌ ಚಾನಲ್‌ನ ಓರ್ವ ಹಿರಿಯ ಪತ್ರಕರ್ತನೆ ಬಹಿರಂಗಪಡಿಸಿದ್ದಾನೆ. ಸಂದರ್ಶನದ ಸಿದ್ಧತೆಗಳ ಕುರಿತು ಚರ್ಚಿಸಲು ಆರ್ನಬ್ ಕರೆದಿದ್ದ ವಿಶೇಷ ತಂಡದ ಸಭೆಯೊಂದರಲ್ಲಿ ಪಾಲ್ಗೊಂಡಿದ್ದ ಈತನ ಪ್ರಕಾರ ಸಂದರ್ಶನ ನಿಗದಿಯಾಗಿರುವ ಕುರಿತು ಆರ್ನಬ್‌ಗೆ ಸುಮಾರು ಎರಡು ವಾರಗಳ ಮೊದಲೇ ತಿಳಿಸಲಾಗಿತ್ತು! ಆಮೇಲೆ ಸಂದರ್ಶನಕ್ಕೆ 5 ದಿನಗಳಿದ್ದಾಗ ಪ್ರಧಾನಿ ಕಚೇರಿಯಿಂದ ಒಂದು ರಾಶಿ ದಾಖಲೆಪತ್ರಗಳು ಮತ್ತು ಯಾವ್ಯಾವ ವಿಷಯಗಳ ಮೇಲೆ ಪ್ರಶ್ನೆಗಳನ್ನು ಕೇಳಬೇಕು ಎಂಬ ಸೂಚನೆಗಳು ಬಂದು ತಲುಪಿವೆ. ಟೈಮ್ಸ್ ನೌ ವಿಶೇಷ ತಂಡ ಇದನ್ನೆಲ್ಲಾ ಪರಿಶೀಲಿಸಿದ ಬಳಿಕ ಪ್ರಶ್ನೆಗಳನ್ನು ತಯಾರಿಸಿ ಪ್ರಧಾನಿ ಕಚೇರಿಗೆ ರವಾನಿಸಿತ್ತು. ಅಲ್ಲಿ ಎಲ್ಲವನ್ನೂ ಪುನರ್ವಿಮರ್ಶೆಗೊಳಪಡಿಸಿ, ಬದಲಾವಣೆಗಳನ್ನು ಮಾಡಿ, ಮೋದಿಯ ಉತ್ತರಗಳ ಸಮೇತ ಚಾನಲ್‌ಗೆ ಕಳುಹಿಸಲಾಗಿತ್ತು, ಸಂದರ್ಶನದ ವೇಳೆ ಆರ್ನಬ್ ಎಲ್ಲೆಲ್ಲಿ ಮಧ್ಯಪ್ರವೇಶಿಸಬಹುದು ಎಂಬುದನ್ನೂ ಈ ಪ್ರಶ್ನೋತ್ತರಗಳ ದಾಖಲೆಪತ್ರಗಳಲ್ಲಿ ಗುರುತು ಹಾಕಲಾಗಿತ್ತು!

ಇದೊಂದು ಪೂರ್ವಯೋಜಿತ ಸಂದರ್ಶನ ಎಂಬುದಕ್ಕೆ ಇನ್ನೊಂದು ಮಹತ್ತರ ಪುರಾವೆಯೂ ಲಭ್ಯವಾಗಿದೆ. ಇಡೀ ಸಂದರ್ಶನ ನಡೆದುದು ಹಿಂದಿಯಲ್ಲಿ. ಆರ್ನಬ್ ಹಿಂದಿಯಲ್ಲಿ ಪ್ರಶ್ನೆಗಳನ್ನು ಕೇಳುತ್ತಿದ್ದಂತೆ ಟಿವಿ ಪರದೆ ಮೇಲೆ ಇಂಗ್ಲಿಷ್ ಭಾಷಾಂತರವನ್ನೂ ತೋರಿಸಲಾಗುತ್ತಿತ್ತು. ಇಲ್ಲಿ ಏನಾಗಿತ್ತೆಂದರೆ ಆರ್ನಬ್‌ನ ಪ್ರಶ್ನೆಗೂ ಮುಂಚೆ ಇಂಗ್ಲಿಷ್‌ನಲ್ಲಿ ಮೋದಿಯ ಉತ್ತರ ಕಾಣಿಸಿಕೊಳ್ಳುತ್ತಿತ್ತು! ಪ್ರಶ್ನೋತ್ತರಗಳನ್ನು ಮೊದಲೆ ಸಿದ್ಧಪಡಿಸಲಾದ ಇಂಟರ್‌ವ್ಯೂ ಇದಾಗಿತ್ತು ಎನ್ನುವುದಕ್ಕೆ ಇದಕ್ಕಿಂತ ದೊಡ್ಡ ಪುರಾವೆ ಏನು ಬೇಕು?

ಆದರೂ ಇಲ್ಲಿದೆ ಮೂರನೆ ಪುರಾವೆ. ಯುಎಇ ದೇಶದ 'ಗಲ್ಫ್ ನ್ಯೂಸ್' ಪತ್ರಿಕೆಯ ರಾಷ್ಟ್ರ ಸಂಪಾದಕ ಬಾಬ್ಬಿ ನಖ್ವಿಗೆ ಕೂಡಾ ಹೆಚ್ಚುಕಮ್ಮಿ ಇದೇ ತೆರನಾದ ಅನುಭವ ಆಗಿದೆ! ಹೀಗಾಗಿ ಟೈಮ್ಸ್ ನೌ ಸಂದರ್ಶನದ ಅಸಲಿಯತ್ತನ್ನು ಓದಿ ಆತನಿಗೆ ಅಚ್ಚರಿಯಾಗಿಲ್ಲವಂತೆ. ಕಳೆದ ಆಗಸ್ಟ್‌ನಲ್ಲಿ ಮೋದಿಯ ಯುಎಇ ಭೇಟಿ ನಿಗದಿಯಾದ ನಂತರ ಬಾಬ್ಬಿ ನಖ್ವಿ "ಉಭಯ ದೇಶಗಳ ನಡುವಿನ ಸಂಬಂಧಗಳು ಮತ್ತು ಅರಬ್ ಪ್ರಪಂಚದಲ್ಲಿ ಭಾರತದ ಪಾತ್ರ" ಎಂಬ ವಿಷಯದಲ್ಲಿ ಸಂದರ್ಶನಕ್ಕಾಗಿ ಅನುಮತಿ ಕೋರಿದ್ದರು. ಅಧಿಕಾರಿಗಳ ಜೊತೆ ಈಮೇಲ್ ಮೂಲಕ ಸಾಕಷ್ಟು ಪತ್ರ ವ್ಯವಹಾರ ನಡೆದು ಅಂತಿಮವಾಗಿ ದೊರೆತದ್ದು ಪ್ರತ್ಯೇಕ ಸಂದರ್ಶನವಲ್ಲ; ಇನ್ನಿಬ್ಬರು ಪತ್ರಕರ್ತರೊಂದಿಗೆ ಸಾಮೂಹಿಕ ಸಂದರ್ಶನ! ಇಷ್ಟವಿಲ್ಲದಿದ್ದರೂ ನಖ್ವಿ ಇದಕ್ಕೆ ಒಪ್ಪಬೇಕಾಯಿತು. ಇದರ ನಂತರ ಎದುರಾದ ಎರಡನೆ ಸಮಸ್ಯೆಯೆಂದರೆ ಸಂದರ್ಶನದ ವೇಳೆ ಕೇಳಲಿರುವ ಪ್ರಶ್ನೆಗಳನ್ನು ಪೂರ್ವಾನುಮತಿಗೆಂದು ಕಳುಹಿಸಬೇಕೆಂದಾಯಿತು. ಸಂದರ್ಶನದ ಸಮಯ ಮತ್ತು ಸ್ಥಳದ ಕುರಿತ ಮಾಹಿತಿಯನ್ನು ನಖ್ವಿಗೆ ಕೊನೆಕ್ಷಣದ ತನಕವೂ ಒದಗಿಸಲಾಗಿಲ್ಲ. ಸ್ವಾತಂತ್ರ್ಯ ದಿನದಂದು ಕೆಂಪುಕೋಟೆಯ ಭಾಷಣದ ನಂತರ ಯಾವ ಸಮಯದಲ್ಲೂ ನಡೆಯಬಹುದು ಎಂದಷ್ಟೆ ತಿಳಿಸಲಾಯಿತು. ಆಗಸ್ಟ್ 15ರಂದು ದಿಲ್ಲಿಗೆ ಆಗಮಿಸಿದ ನಖ್ವಿಗೆ ಮತ್ತೊಂದು ಆಘಾತ ಕಾದಿತ್ತು. ಎಲ್ಲಾ ಫೋಟೋಗಳನ್ನು ಪ್ರಧಾನಿಯ ಅಧಿಕೃತ ಛಾಯಾಚಿತ್ರಗ್ರಾಹಕರೆ ತೆಗೆಯಲಿದ್ದಾರೆ; ಹೀಗಾಗಿ ಖಾಸಗಿ ಫೋಟೋಗ್ರಾಫರ್‌ಗೆ ಪ್ರವೇಶ ಇಲ್ಲವೆಂದು ಸಂಪರ್ಕಾಧಿಕಾರಿ ತಿಳಿಸಿದ. ಇದಕ್ಕೊಪ್ಪದಾಗ ದೊಡ್ಡ ವಾಗ್ವಾದವೇ ನಡೆಯಿತು. ಅಂತಿಮವಾಗಿ ಫೋಟೋಗ್ರಾಫರ್‌ಗೆ ಕೇವಲ 5 ನಿಮಿಷ ಸಮಯಾವಕಾಶ ನೀಡಲಾಯಿತು. ಎರಡು ಸುತ್ತಿನ ತೀವ್ರ ಭದ್ರತಾ ತಪಾಸಣೆಯ ಬಳಿಕ ಸಂದರ್ಶನ ತಂಡವನ್ನು ಕೊಠಡಿಯೊಂದಕ್ಕೆ ಕರೆದುಕೊಂಡು ಹೋಗಲಾಯಿತು. ಅಲ್ಲಿಗೆ ಒಂದು ಪೊಲೀಸ್ ನಾಯಿಯನ್ನು ಕರೆತಂದು ಮೂಸಿಸಿದ ಬಳಿಕ ತಂಡವನ್ನು ಪ್ರಧಾನ ಕಟ್ಟಡಕ್ಕೆ ಕರೆದೊಯ್ಯಲಾಯಿತು. ಅಲ್ಲೊಂದು ರೂಮಿನಲ್ಲಿ ಕೂರಿಸಿ ಸಂದರ್ಶನವನ್ನು ಹೇಗೆ ವ್ಯವಸ್ಥೆಗೊಳಿಸಲಾಗಿದೆ ಎಂದು ಎಲ್ಲರಿಗೂ ವಿವರಿಸಲಾಯಿತು: 'ಮೊದಲು ಫೋಟೋಗಳು ಮತ್ತು ಕೈಕುಲುಕುವಿಕೆ. ನಂತರ ಪ್ರಧಾನಿ ನಿಮ್ಮತ್ತ ತಿರುಗಿ ನೋಡಿದಾಗ ಮಾತುಕತೆ ಪ್ರಾರಂಭಿಸಬಹುದು. ಒಂದೇ ಒಂದು ಪ್ರಶ್ನೆ ಕೇಳಬಹುದು. ಒಂದಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಕೇಳುವಂತಿಲ್ಲ. ಸಂದರ್ಶನ ಮುಗಿದನಂತರ ಮಿಕ್ಕ ಪ್ರಶ್ನೆಗಳಿಗೆ ಲಿಖಿತ ಉತ್ತರಗಳನ್ನು ಒದಗಿಸಲಾಗುವುದು'. ಇಷ್ಟು ಮಾಹಿತಿ ನೀಡಿದ ನ[...] ಪ್ರಧಾನಿ ಜೊತೆ ಇರುವವರನ್ನು ಪರಿಚ[...] ಮಾಡಿಸಲಾಯಿತು. ಆ ಗುಂಪಿನಲ್ಲಿ ಮೋದಿಯ ಸು[...] ಸಿಲಿಕಾನ್ ವ್ಯಾಲಿ ಭಾಷಣ ಬರೆದುಕೊಟ್ಟ ಬಿ[...] ಮುಸ್ಲಿಮನೂ ಇದ್ದ. ಪ್ರಧಾನಿ ಜೊತೆಗಿನ ಭೇಟಿ ಮೊ[...] ನಿರ್ಧರಿಸಿದ ರೀತಿಯಲ್ಲಿ ನಡೆಯಿತು. ಸುಮಾರು [...] ಗಂಟೆಯ ಬಳಿಕ ಮಾತುಕತೆಯ ಲಿಪ್ಯಂತರ ಮತ್ತು [...] ಉತ್ತರಗಳು ನಖ್ವಿ ಕೈಸೇರಿದವು.



ಮನಬಿಚ್ಚಿ ಮಾತಾಡಲು ವ್ಯಕ್ತಿಗೆ ಒಳದನಿ ಇರಬ[...] ಸಾವಿರಾರು ಪ್ರಜೆಗಳ ಮಾರಣಹೋಮ ನಡೆಯುತ್ತಿರು[...] ಚಕ್ರವರ್ತಿ ನೀರೊನಂತೆ ಪಿಟೀಲು ಬಾರಿಸುತ್ತ ಕೂರುವ[...] ಆತ್ಮಸಾಕ್ಷಿ ಎಲ್ಲಿದೆ? ಆತ್ಮಸಾಕ್ಷಿಯಾಗಲಿ, ಪಾಪಪ್ರಜ್ಞೆಯ[...] ಇಲ್ಲದವರು ಅದು ಹೇಗೆ ಬಿಚ್ಚುಮನದ ಸಂದ[...] ಕೊಡಬಲ್ಲರು? ಅಪ್ಪಿತಪ್ಪಿ ಕೊಟ್ಟಂಥಾ ಒಂದು ಸಂದರ್ಭ[...] ನೀರಡಿಕೆಯಿಂದ ಬಳಲಿ ಅರ್ಧದಲ್ಲೆ ಎದ್ದುಹೋದ ನಿದ[...] ನಮ್ಮ ಮುಂದೆ ಇದೆಯಲ್ಲವೆ?

■ ಸುರೇಶ್ ಭಟ್ ಬಾಕ್ರಬೈ[...]


(ಆಧಾರ: *khabarbar.c*[...]
facebook.com ನಲ್ಲಿ ರಾಜೀವ್ [...]
scroll.in ನಲ್ಲಿ ಬಾಬ್ಬಿ ನಖ್ವಿ ಲೇಖನ[...]

ಸ್ತ್ರೀವಾದವನ್ನು ಹಳಿಯಲೆಂದೇ ರಚಿತವಾದ 'ಕವಲು'

ಒಂದು ಅನಿಸಿಕೆ

ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪನವರ ...ಯ ಕಾದಂಬರಿ 'ಕವಲು'. ಕಾದಂಬರಿಯನ್ನು ತೆರೆಯು ...ತೆಯೇ ಒಂದೆರಡು ಸಾಲುಗಳು ನಮ್ಮ ಗಮನ ...ತಾವೆ. ಕಾದಂಬರಿಯಲ್ಲಿ ಬರುವ ಮುಖ್ಯವಾಗಿ ಗಮನಿಸ ...ಾದ ಸಾಲುಗಳವು. ಕೊನೆಯಲ್ಲಿ ಭೈರಪ್ಪನವರ ...ಹಾಯುದಂತೆ ಈ ಕೃತಿ ಭಾರತೀಯ ಸಮಾಜದಲ್ಲಿ ...ಬುದಾರಿ ಹಿಡಿಯುತ್ತಿರುವ ಮೌಲ್ಯಗಳನ್ನು ಹೃದಯ ...ಕುವಂತೆ ಶೋಧಿಸುತ್ತಾ ಸಮಕಾಲೀನ ಜೀವನಕ್ಕೆ ...ಿಯಾಗುವ ಕಾದಂಬರಿ. ಆದರೆ ಈ ಕಾದಂಬರಿಯಲ್ಲಿ ...ೋ ಅಷ್ಟೊ ಅಂಶಗಳೂ ಇಷ್ಟೆ: ಸ್ತ್ರೀವಾದ ಮತ್ತು ...ೋಚನೆಗಳ ಹೋರಾಟದಲ್ಲಿ ತೊಡಗುವ ಹೆಣ್ಣುಮಕ್ಕಳು ...ತಿಯ ಸಮಾಜದಲ್ಲಿ ಮನೆಮುರುಕರು ಮತ್ತು ಇಂತಹ ...ಗುರ ಸಂಗ ಮಾಡೋ ಗಂಡಸು ಅಕ್ಷರಶಃ ಅಧಃಪತನಕ್ಕೆ ...ಯುತ್ತಾನೆ ಎಂಬುದನ್ನು ಒತ್ತಿ ಒತ್ತಿ ಹೇಳಿದ್ದಾರೆ. ...ವಾಗಿ ಹೇಳಬೇಕೆಂದರೆ ಇಡೀ ಕಾದಂಬರಿಯಲ್ಲಿ ...ೋರಾಟ ಮತ್ತು ವಿಮೋಚನೆಗಳಂತಹ ಕಾರ್ಯದಲ್ಲಿ ...ಡಗಿಸಿಕೊಂಡ ಹೆಣ್ಣು ಹಾದಿತಪ್ಪಿದವಳಾಗಿರ್ತಾಳೆ, ...ನಿಗೆ ಗೌರವ ಕೊಡದವಳಾಗಿರ್ತಾಳೆ, ಪರಪುರುಷನ ...ಲೆ ಆಕರ್ಷಿತಳಾಗಿರ್ತಾಳೆ, ಕಾನೂನುಗಳನ್ನು ...ಪಯೋಗ ಪಡಿಸಿಕೊಳ್ಳುವವಳಾಗಿರ್ತಾಳೆ, ಹೋರಾಟದ ...ನಲ್ಲಿ ಮನೆಮುರುಕಳಾಗಿರ್ತಾಳೆ, ಮಾತೃ ಹೃದಯ ...ದವಳಾಗಿರ್ತಾಳೆ, ಗಂಡನ ಆಸೆಆಕಾಂಕ್ಷೆಗಳನ್ನ ...ೃಸದವಳಾಗಿರ್ತಾಳೆ, ಗಂಡ(ಗಂಡು)ನಿಗೆ ಗೌರವ ...ದವಳಾಗಿರ್ತಾಳೆ. ಇನ್ನೂ ಮುಂದೆ ಹೋಗಿ ಹೇಳಬೇಕು ...ದ್ರೆ ಸ್ತ್ರೀವಾದಿಗಳು ಅಂದ್ರೆ ಪುರುಷದ್ವೇಷಿಗಳಾಗಿರ್ತಾರೆ. ...ವರು ತಮ್ಮ ಕಾಮತೃಷೆ ತೀರಿಸಿಕೊಳ್ಳಲು ಸ್ತ್ರೀಯರನ್ನೇ ...ಲಂಬಿಸಿರ್ತಾರೆ. ಒಟ್ನಾರೆ ಸ್ತ್ರೀಸಂವೇದನೆಗಳನ್ನ ...ರ್ಣವಾಗಿ ಕಳಕೊಂಡವಳಾಗಿರ್ತಾಳೆ. ಸ್ತ್ರೀ ಸ್ವಾತಂತ್ರ ...ಬಗ್ಗೆ ದನಿಯೆತ್ತೋ ಹೆಣ್ಣುಮಕ್ಕಳು ಹಾದರಗಿತ್ತಿಯರು. ...ಗಂತ ಕಾದಂಬರಿಕಾರರು ಪ್ರತಿಯೊಂದು ಪಾತ್ರ, ...ವೇಶಗಳ ಮೂಲಕ ಓದುಗರಲ್ಲಿ ಬಿತ್ತುವಂತೆ ರಚಿಸಿದ್ದಾರೆ. ...ತಹ ಪೂರ್ವಾಗ್ರಹಪೀಡಿತ ಆಲೋಚನೆಗಳಿಂದಲೇ ...ಯಾದ 'ಕವಲು' ಬೆಡ್‌ರೂಂ ಮತ್ತು ಅಡುಗೆ ಮನೆ ...ಆಚೆಯೇ ಬರದಾಗಿದೆ. ಇಂತಹ ಧೋರಣೆಗಳಿಂದಲೇ ...ಡಿರುವ ಈ ಕೃತಿ ನನ್ನ ಪ್ರಕಾರ ಒಂದು ಮನೆಮುರುಕ ...ಂಬರಿಯೇ ಸರಿ.


...ಮೊದಲ ಪುಟ ತೆರೆಯುತ್ತಿದ್ದಂತೆಯೇ ಶುರುವಾಗುವ ...ತಹ ಧೋರಣೆಗಳನ್ನ ಭೈರಪ್ಪನವರು, ಪಾತ್ರ ಹಾಗೂ ...ವೇಶಗಳ ಮೂಲಕ ಓದುಗರ ಮನಸ್ಸಿನಲ್ಲಿ ಅಚ್ಚೊತ್ತಿ ...ಯುವಂತೆ ಸಾರಿಸಾರಿ ಹೇಳಿದ್ದಾರೆ. ಉದಾಹರಣೆಗೆ ...ದಲ ಪುಟದಲ್ಲೇ ಬರುವ ಸಾಲನ್ನೊಮ್ಮೆ ...ನಿಸಬಹುದು. ಹೆಂಡತಿಯ ಕುತಂತ್ರದಿಂದ ...ಪಾಲಾಗೋ ಜಯಕುಮಾರನಿಗೆ (ಮುಖ್ಯ ಪಾತ್ರಧಾರಿ) ...ಸ್ಟೇಬಲ್ ನುಂಜುಂಡೇಗೌಡ ಹೇಳುವ ಒಂದು ಮಾತು:



"ಓದಿದ ಗಂಡಸರೆಲ್ಲಾ ಎಂಗಸರಾಯ್ತಾರೆ, ಓದಿದ ಎಂಗಸರೆಲ್ಲಾ ಗಂಡಸರಾಯ್ತಾರೆ" ಅಂತ ವ್ಯಂಗ್ಯಭರಿತವಾಗಿ ನಗುವುದು. ಕಾದಂಬರಿಯ ಮೂಲ ತಿರುಳನ್ನೇ ಈ ಒಂದು ಸಾಲು ಎತ್ತಿ ಹಿಡಿಯುತ್ತದೆ. ವಿದ್ಯೆ ಪ್ರತಿಯೊಬ್ಬರ ಹಕ್ಕು ಮತ್ತು ಇವತ್ತಿನ ದಿನಗಳಲ್ಲಿ ಅವಶ್ಯಕ ಕೂಡ. ಇಲ್ಲಿ ಭೈರಪ್ಪನವರು ಹೇಳಹೊರಟಿರುವುದಾದರೂ ಏನನ್ನು ಎಂಬುದು ಪ್ರತಿಯೊಬ್ಬ ಸಾಮಾನ್ಯ ವಿಚಾರವಂತರಲ್ಲೂ ಮೂಡುವ ಸಹಜವಾದ ಪ್ರಶ್ನೆ. ಅಷ್ಟೇ ಅಲ್ಲದೆ ಸಮಸಮಾಜದ ಕನಸು ಹೊತ್ತು ವಿಮೋಚನೆಯ ಹಾದಿಯಲ್ಲಿ ನಡೆಯೋ ಹೆಣ್ಣಿಗೆ ಗಂಡು, ಹೆಣ್ಣು ಎಂಬ ಶ್ರೇಷ್ಠ ನಿಕೃಷ್ಟಗಳನ್ನು ತುಲನೆ ಮಾಡುವ ಪ್ರಯತ್ನ ಮಾಡಿದ್ದಾರೆ. ಹೆಣ್ಣಿಗೆ ನೀಡುವ ಸ್ವಾತಂತ್ರ್ಯವನ್ನು ಆಕೆ ಹೇಗೆ ದುರುಪಯೋಗಪಡಿಸಿಕೊಳ್ಳುತ್ತಾಳೆ ಮತ್ತು ಆದರಿಂದ ಭಾರತೀಯ ಕುಟುಂಬ ವ್ಯವಸ್ಥೆಗೆ ಯಾವ ರೀತಿಯ ಪೆಟ್ಟು ಬೀಳುವುದು ಎಂಬ ಭ್ರಮೆಯಿಂದ ಇಡೀ ಕಾದಂಬರಿ ಕೂಡಿದೆ.

ವಿನಯಚಂದ್ರ-ಇಳಾ ಮತ್ತು ಜಯಕುಮಾರ್-ಮಂಗಳಾ ಈ ಎರಡೂ ಕುಟುಂಬಗಳಲ್ಲಿ ನಡೆಯುವ ದಾಂಪತ್ಯದ ಬಿರುಕಿಗೆ ಲೇಖಕರು ಕೊಡುವ ಮುಖ್ಯ ಕಾರಣ ಇಳಾ ಮತ್ತು ಮಂಗಳೆಯ ಸ್ತ್ರೀವಾದಿ ನಿಲುವುಗಳು. ಆ ಮೂಲಕ ಸ್ತ್ರೀ ವಾದ ಎಂದರೆ ಮನೆಮುರುಕ ಸಿದ್ಧಾಂತ, ಮಹಿಳಾ ಪರ ಹೋರಾಟ ಎಂದರೆ ಗಂಡಿನ ವಿರುದ್ಧದ ಹೋರಾಟ, ವಿಮೋಚನೆಯ ನಡೆಯೆಂದರೆ ಸಂವೇದನೆಗಳೇ ಇರದ ನಡೆ ಎಂಬ ಪೊಳ್ಳುವಾದವನ್ನು ಓದುಗರಲ್ಲಿ ತುಂಬಲು ಪ್ರಯತ್ನಿಸಿದ್ದಾರೆ.

ಮೊದಲ ಹೆಂಡತಿಯ ಅಗಲಿಕೆಯ ನಂತರ ದೇಹಬಾಧೆ ತೀರಿಸಿಕೊಳ್ಳಲು ತನ್ನ ಕಂಪೆನಿಯ ಸೆಕ್ರೆಟರಿಯ ಮೇಲೆ ಕಣ್ಣು ಹಾಕುವ ಜಯಕುಮಾರನನ್ನು ಇಲ್ಲಿ ಅಮಾಯಕನಂತೆ ತೋರಿಸಿದ್ದಾರೆ. ಈ ಸೇರುವಿಕೆ ಹಲವಾರು ಬಾರಿ ನಡೆಯುತ್ತದೆ. ನಂತರ ಸೆಕ್ರೆಟರಿಯ 'ಕುತಂತ್ರ'ದಿಂದ ಆಕೆಯನ್ನು ಮದುವೆಯಾಗಬೇಕಾಗಿ ಬರುತ್ತದೆ. ಮೊದಲೇ ಇಷ್ಟವಿಲ್ಲದೇ ಆದ ಮದುವೆ. ಹಾಗಾಗಿ ಹೆಂಡತಿಯ ಸಂಗ ಮಾಡಲು ಜಯಕುಮಾರನಿಗೆ ಇಷ್ಟವಿರೋದಿಲ್ಲ. ಆದರೂ ಒಂದೇ ಮನೆಯಲ್ಲಿ ಗಂಡಹೆಂಡತಿ ಎಷ್ಟು ದಿನ ಅಂತ ಬೇರೆ ಇರಲು ಸಾಧ್ಯ? ಹಾಗಂತ ಕಾದಂಬರಿಕಾರರು ಗಂಡ ಹೆಂಡತಿಯನ್ನು ಸೇರಬಿಟ್ಟಿಲ್ಲ. ಜಯಕುಮಾರ ಹೆಂಡತಿಯನ್ನು ಸೇರಲು ನಿರಾಕರಿಸುತ್ತಾನೆ. ಈ ನಿರಾಕರಣೆಗೆ ಮುಖ್ಯ ಕಾರಣ ಆಕೆ ಹಣೆಗೆ ಕುಂಕುಮವಿಡದೆ, ಕೈಗೆ ಬಳೆಯಿಡದೆ, ಕೊರಳಿಗೆ ಸರವಿಲ್ಲದೇ ಇರುವುದು. ಹಾಗಿರುವ ಹೆಣ್ಣು ಭೈರಪ್ಪನವರ ಪ್ರಕಾರ, i mean, ಪಾತ್ರದ ಪ್ರಕಾರ ಸೂತಕದ ಛಾಯೆ. ವಿಧವೆಯ ರೀತಿ ಅಥವಾ ಆಕೆ ಕ್ರಿಶ್ಚಿಯನ್ನೋ, ಮುಸಲ್ಮಾನ ಹೆಂಗಸೋ ಇರಬಹುದೇನೋ. ಹಾಗಿರುವ ಹೆಂಗಸು ಕನಿಷ್ಟ ಪಕ್ಷ ಒಂದು ಗಂಡಿನ ಕಾಮೋದ್ರೇಕಗೊಳಿಸಲೂ ಅನರ್ಹ. ಅಂತಾ ಕೆಲಸಕ್ಕೂ ಆಕೆ ನಾಲಾಯಕ್ ಅಂತ ಹೇಳ್ತಾ ಹೋಗ್ತಾರೆ. ಇಲ್ಲೊಂದು ತಮಾಷೆ ವಿಚಾರ ಅಂದ್ರೆ ಮದುವೆಗೂ ಮುನ್ನ ಇದೇ ಮನಸ್ಥಿತಿಯ ಜಯಕುಮಾರನಿಗೆ ಮದುವೆಗೂ ಮುಂಚೆ ಅಕ್ರಮ ಸಂಬಂಧ (ನನ್ನ ಪ್ರಕಾರ ಯಾವುದೇ ಸಂಬಂಧವೂ ಅಕ್ರಮವಲ್ಲ) ಹೊಂದಿದ್ದಾಗ ಕಾಣದ ಆಕೆಯ ಹಣೆಯ ಕುಂಕುಮ, ಕೊರಳಿನ ಸರ, ಕೈಬಳೆ ಮದುವೆಯ ನಂತರ ನಿರೀಕ್ಷಿಸುವುದು ಹಾಸ್ಯಾಸ್ಪದ ಅಥವಾ ಮದುವೆಯಾದ ನಂತರ ಕನಿಷ್ಟ ತನ್ನ ಹೆಂಡತಿ ಗರತಿಯ ಹಾಗೆ ಕಾಣ್ಬೇಕು ಅನ್ನೋ ಮನಸ್ಥಿತಿಯೋ!!?? ಇದಕ್ಕೆ ಪೂರಕವೆಂಬಂತೆ ಜಯಕುಮಾರನೇ ಒಂದು ಸನ್ನಿವೇಶದಲ್ಲಿ 'ಕಾಮಕ್ಕೆ ಕಣ್ಣಿಲ್ಲವೆನ್ನುವುದು ಹೆಚ್ಚು ಅರ್ಥವುಳ್ಳ ಮಾತು. ನನ್ನಲ್ಲಿ ಕಾಮಬಾಧೆಯುಂಟಾದಾಗ ಹಣೆಯಲ್ಲಿ ಕುಂಕುಮವಿಲ್ಲದ, ಕೈಗೆ ಬಳೆಯಿಲ್ಲದ ಸೂತಕದ ಛಾಯೆಯ ಇವಳನ್ನೇ ನಂಬಿಕೆಯ ಪರಿಹಾರವೆಂದು ತೋರುತ್ತಿತ್ತು...' ಎಂಬಂತೆ ಹೇಳುತ್ತಾನೆ. ಹಾಗಾದರೆ ಮದುವೆಯ ನಂತರ ಆಕೆಯಿಂದ ಆತ ಅಪೇಕ್ಷಿಸುವುದಾದರೂ ಏನನ್ನು. ಆಕೆಯ ಹೆಣ್ತನವನ್ನೋ ಇಲ್ಲ ಆಕೆಯ ಕುಂಕುಮ, ಕೈಬಳೆಯನ್ನೋ!!?? ಹಾಗೇ ಮುಂದುವರಿದು ಹೇಳಬೇಕೆಂದರೆ ಕುಂಕುಮ, ಕೈಬಳೆಯಿಲ್ಲದ ಹೆಣ್ಣು ಮುಸಲ್ಮಾನಳೋ, ಕ್ರಿಶ್ಚಿಯನ್ನೋ ಎಂಬ ತಾತ್ಸಾರದ ನುಡಿಯೂ ಭೈರಪ್ಪನವರ ಸಂಕುಚಿತ ಮನೋಭಾವನೆಯನ್ನು ಎತ್ತಿ ತೋರಿಸುತ್ತದೆ. ಆ ಹೆಣ್ಣುಮಕ್ಕಳ ಜೊತೆ ಯಾರೂ ಸೇರೋದೇ ಇಲ್ವಾ? ಸೇರಿದರೂ ತಪ್ಪಾ? ಬಹುಸಂಸ್ಕೃತಿಗಳ ಮಿಶ್ರಣದಂತಿರುವ ಭಾರತೀಯ ಸಮಾಜದಲ್ಲಿ ಅಂತರ್ಜಾತಿ, ಅಂತರ್ಧರ್ಮೀಯ ವಿವಾಹಕ್ಕೆ ಇವರು ಕೊಡುವ ಮನ್ನಣೆ ಇದೇನಾ? ಎನ್ನುವ ಪ್ರಶ್ನೆ ಸಾಮಾನ್ಯ ವಿಚಾರವಂತರಲ್ಲೂ ಏಳುವುದು ಸಹಜ. ಹಾಗೇ ಮುಂದುವರೆದು ಹೇಳಬೇಕೆಂದರೆ ವಿಧವೆಯಾದ ಹೆಣ್ಣು ಇನ್ನೊಂದು ಮದುವೆಯಾಗಲು ಹಾಗೂ ಗಂಡಸಿನ ಕಾಮೋದ್ರೇಕಗೊಳಿಸಲು ಅನರ್ಹಳು ಎನ್ನುವಂತೆ ಹೇಳಿದ್ದಾರೆ.



ಹೀಗೆ ಹೇಳುತ್ತಾ ಹಳೆಯ ಗೊಡ್ಡು ಸಂಪ್ರದಾಯಗಳನ್ನು ಹೇರುತ್ತಾ ಹೋಗಿ, ತನ್ನ ಮನಸ್ಥಿತಿಯನ್ನು ಪಾತ್ರದ ಮನಸ್ಥಿತಿಯೆಂದು ತೋರಿಸುತ್ತಾ ಸಾಗುತ್ತಾರೆ.

ಇಡೀ ಕಾದಂಬರಿಯಲ್ಲಿ ಮುಖ್ಯವಾಗಿ ಏಳುವ ಪ್ರಶ್ನೆ ಏನೆಂದರೆ, ಭಾರತೀಯ ಸಮಾಜದಲ್ಲಿ ಕವಲುದಾರಿ ಹಿಡಿಯುತ್ತಿರೋ ಮೌಲ್ಯಗಳಿಗೆ ಸ್ತ್ರೀವಾದಿ ಹೋರಾಟಗಾರ್ತಿಯರು ಮಾತ್ರ ಕಂಡುಬಂದದ್ದು. ಅವರ ಹೊರತಾಗಿ ಬೇರೆ ಮನೆಮುರುಕರು ಸಿಗಲೆ ಇಲ್ವಾ? ಶೋಷಣೆಯ ಮುಖವಾಡ ಹೊತ್ತು ಬರುವ ಸ್ತ್ರೀವಾದಿಗಳು ಮಾಡೋದೆ ಇಂತಾ ಚಾಂಡಾಳ ಬುದ್ಧಿ ಎನ್ನುವಂತೆ ಇಡೀ ಕಾದಂಬರಿಯಲ್ಲಿ ಪುಟಪುಟದಲ್ಲೂ ಎತ್ತಿ ಹಿಡಿದಿದ್ದಾರೆ. ಹೋರಾಟಗಾರ್ತಿಯರನ್ನು ಎಷ್ಟು ಸಾಧ್ಯವೋ ಅಷ್ಟು ಕೀಳಾಗಿ ತೋರಿಸಹೊರಟ ಭೈರಪ್ಪನವರು, ರಾಷ್ಟ್ರ ಮಟ್ಟದ ಸ್ತ್ರೀವಾದಿ ಚಿಂತನೆ ಹೊಂದಿದ ಸರಾಫ ಎಂಬ ಮಹಿಳೆಯನ್ನು ಇಲ್ಲಿ ಲೆಸ್ಬಿಯನ್ನಾಗಿ ತೋರಿಸಿದ್ದಾರೆ. ಈ ಮೂಲಕ ತನ್ನ ಸಂಪ್ರದಾಯವಾದಿತನವನ್ನು ಕಾದಂಬರಿಯ ಮೂಲಕ ಬಿತ್ತಲು ಇಂತಹ ಕೀಳುಮಟ್ಟಕ್ಕೂ ಇಳಿದಿದ್ದಾರೆ. ಹಾಗಂತ ಕುಂಕುಮ ಕೈಬಳೆಯಿಲ್ಲದ ಹೆಣ್ಣನ್ನು ಕೀಳಾಗಿ ಚಿತ್ರಿಸಿ, ಆಕೆಯನ್ನು ಸೇರಲು ಹಿಂಜರಿಯುವ ಆಕೆಯ ಗಂಡ ತನ್ನ ದೇಹಬಾಧೆ ಕಳೆದುಕೊಳ್ಳಲು ವೇಶ್ಯೆಯರ ಸಂಪರ್ಕ ಮಾಡುತ್ತಾನೆ. ಆದರೆ ಅದೇನು ದೊಡ್ಡ ಅಪರಾಧವಲ್ಲವೆಂಬಂತೆ, ಆತ ಮಾಡುವ ತಪ್ಪಿಗೂ ಹೋರಾಟದ ಹಿನ್ನೆಲೆಯ ಹೆಣ್ಣೇ ಕಾರಣವೆಂಬಂತೆ ಬೊಟ್ಟು ಮಾಡಿ ತೋರಿಸಿದ್ದಾರೆ.

ಕಾದಂಬರಿಯಲ್ಲಿ ಬರೋ ಇನ್ನೊಂದು ಕುಟುಂಬದ ಕಥೆಯೂ ಇದಕ್ಕಿಂತ ಹೊರತಾಗೇನು ಇಲ್ಲ. ಕಾಲೇಜಿನಲ್ಲಿ ಉನ್ನತ ಮಟ್ಟದ ಪ್ರೊಫೆಸರ್ ಆಗಿರೋ ಇಳಾ, ಗಂಡ ದೂರದೂರಿಗೆ ಟ್ರಾನ್ಸಫರ್ ಆದ ಅಂತ ಈ ಕೆಲಸ ಬಿಟ್ಟು ಬರಲು ಬೇಡಿಕೆಯಿಡುತ್ತಾನೆ. ಆದರೆ ತನ್ನ ಕೆರಿಯರ್‌ಅನ್ನು ಬಿಟ್ಟು ಬರದೇ ಸ್ವಾಭಿಮಾನ ಮೆರೆಯುವ ಹೆಣ್ಣಿಗೆ ಅಹಂಕಾರದ ಪಟ್ಟ ಕಟ್ಟುತ್ತಾರೆ ನಮ್ಮ ಕಾದಂಬರಿಕಾರರು. ಕೊನೆಯಲ್ಲಿ ಅಹಂಕಾರಕ್ಕೆ ತಕ್ಕ ಶಾಸ್ತಿ ಕೂಡ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಇಲ್ಲಿ ಇನ್ನೊಂದು ತಮಾಷೆ ವಿಚಾರ ಹೇಳ್ಬೇಕು, ಪಾಶ್ಚಿಮಾತ್ಯ ಸಂಸ್ಕೃತಿ ಎಂದರೆ ಕೇವಲ ಲಿವಿಂಗ್ ರಿಲೇಷನ್‌ಶಿಪ್ ಅಷ್ಟೆ. ಸಂಬಂಧಗಳು ಅಂದ್ರೆ ತನ್ನ ತೆವಲು ತೀರಿಸಿಕೊಳ್ಳಲಷ್ಟೇ. ಅದಕ್ಕೂ ಮುಂದೆ ಹೋಗೋದೇ ಇಲ್ಲ. ಹೀಗೆ ಪಾಶ್ಚಿಮಾತ್ಯ ಸಂಸ್ಕೃತಿ ಏನೆಂದು ತೋರಿಸಲು ಹೋಗಿ ಭೈರಪ್ಪನವರು ಹಾಸಿಗೆ ಬಿಟ್ಟು ಕೆಳಗಿಳಿಯೋದೇ ಇಲ್ಲ. ಹಾಗೇ ಕೇವಲ ಸಂಪ್ರದಾಯವಾದಿಯಾಗಷ್ಟೇ, ಪೂರ್ವಾಗ್ರಹಪೀಡಿತವಾಗಷ್ಟೇ ಕಾಣುವ 'ಕವಲು' ಇವತ್ತಿನ ಸಮಾಜಕ್ಕೆ ಹೊಸದೇನನ್ನು ಕೊಟ್ಟಿದೆ ಎಂದು ಕಾದಂಬರಿಯನ್ನೊಮ್ಮೆ ತಿರುಗಿ ನೋಡಿದರೆ ಶೂನ್ಯಭಾವ ಮೂಡುತ್ತದೆ. ಆದರೆ ಭೈರಪ್ಪನವರಿಗೆ ತಿಳಿದಿರಲಿ ಹೋರಾಟ ಅನ್ನೋದು ಬೀದಿಗಳಲ್ಲಿ ಘೋಷಣೆ ಕೂಗುವುದರಿಂದಲೋ, ಸೆಮಿನಾರ್‌ಗಳನ್ನ ಅಟೆಂಡ್ ಮಾಡೋದ್ರಿಂದಲೂ ಹುಟ್ಟಿರೋದಲ್ಲ. ಹೋರಾಟದ ಕೂಗು ನಿಮ್ಮ ಮನೆ ಅಡುಗೆಮನೆಯಿಂದ ಕೇಳ್ತಿದೆ. ಬೆಡ್‌ರೂಮಿನ ಕಡೆಯಿಂದ ಕೇಳ್ತಿದೆ.

ವಿ.ಸೂ ಟೀಕೆಗೆ ಮತ್ತು ವಿಮರ್ಶೆಗೆ ಮಾನದಂಡಗಳಿಲ್ಲ. ಇಲ್ಲಿ ಟೀಕಿಸುವ ಉದ್ದೇಶ ಕೂಡ ಇಲ್ಲ. ಭೈರಪ್ಪನವರು ನಮ್ಮ ನಾಡಿನ ಶ್ರೇಷ್ಠ ಕಾದಂಬರಿಕಾರರು ನಿಜ. ಅಷ್ಟೇ ಗೌರವ ಕೂಡ ಇದೆ. ಹಾಗಂತ ಅವರ ಸಂಪ್ರದಾಯವಾದಿ ನಿಲುವುಗಳನ್ನ ಓದುಗರಲ್ಲಿ ಈ ರೀತಿ ಹೇರಹೊರಟದ್ದನ್ನು ಮತ್ತು ಹೋರಾಟಗಾರರ ಉದ್ದೇಶಪೂರ್ವಕವಾಗಿ ಹಳಿಯಲೆಂದೇ ರಚಿಸಿದಂತಹ 'ಕವಲು'ನಂತಹ ಕಾದಂಬರಿಯನ್ನು ಆಹಾ! ಓಹೋ! ಅದ್ಭುತ! ಅತ್ಯದ್ಭುತ! ಅಂತೆಲ್ಲಾ ಹೊಗಳುವಷ್ಟು ಅಂಧಭಕ್ತ ನಾನಲ್ಲ.

■ ಪ್ರಗತ್ ಕೆ.ಆರ್. ತೀರ್ಥಹಳ್ಳಿ

...ಾವ್ಯ ಗಾಳಿಯಂತೆ

...ಕಾನನದ ಹಸಿರು
...ಶದೊಳಗಣ ನೀಲಿ
...ರ್ಣದ ಹೊಂಬೆಳಕು
...ಣ್ಣಿಮೆಯ ಮಾದಕತೆ.

...ಅತ್ರದ ಭಾಷೆ
...ದೊಳಗಿನ ದೀಪ್ತಿ
...ರುವಿನ ತೇಜಸ್ಸು
...ಿಕಿನ ಸೌಂದರ್ಯ.

...ಭಾವದ ಜೀವನದು
...ನಡೆ ಹೊಸೆವ ಸೂಜಿ
...ನುಕುಲದ ಮೂಲ
...ತೆಯ ಬದುಕಿನ ಕನಸು.

[illegible]

[illegible]



■ ಜಯಶ್ರೀ ಸುಕಾಲಿ

ಬಸವಣ್ಣ, ಪೈಗಂಬರ್ ಮತ್ತು ಕಾರ್ಮಿಕರು

ಐರೋಪ್ಯ ರಾಷ್ಟ್ರಗಳಲ್ಲಿ ಮೇ 1, ವಸಂತ ಋತುವಿನ ಆರಂಭದ ದಿನವಾಗಿದೆ. ವಸಂತ ಋತುವಿನಲ್ಲಿ ಇಡೀ ನಿಸರ್ಗ ವರ್ಣರಂಜಿತವಾಗಿರುತ್ತದೆ. ಆದರೆ ಕಾರ್ಮಿಕರು ಈ ಸಂತೋಷದಿಂದ ವಂಚಿತರಾಗಿದ್ದರು. ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ದುಡಿಯುವ ಪರಿಸ್ಥಿತಿ ಇತ್ತು. ಅವರ ಬದುಕಿನಲ್ಲಿ ವಿಶ್ರಾಂತಿ ಮತ್ತು ಮನರಂಜನೆ ಎಂಬುವು ಗೌಣವಾಗಿದ್ದವು. ಇಂಥ ಕಠಿಣ ಬದುಕಿನಿಂದ ಒಂದಿಷ್ಟು ಬಿಡುವು ಮಾಡಿಕೊಳ್ಳುವುದಕ್ಕಾಗಿ ಕೆಲಸದ ಅವಧಿಯನ್ನು 8 ಗಂಟೆಗೆ ಸೀಮಿತಗೊಳಿಸಬೇಕೆಂದು ಒತ್ತಾಯಿಸಿ ಅಮೆರಿಕದ ಚಿಕಾಗೊ ನಗರದ 40 ಸಾವಿರಕ್ಕೂ ಹೆಚ್ಚು ಕಾರ್ಮಿಕರು 1886ನೇ ಮೇ 1ರಂದು ಶಾಂತಿಯುತ ಹೋರಾಟ ಆರಂಭಿಸಿದರು.

ಮೇ 3ರಂದು ಚಿಕಾಗೊದ ಮ್ಯಾಕೊರ್ಮಿಕ್ ಹಾರ್ವೆಸ್ಟರ್ ಪ್ಲಾಂಟ್‌ನಲ್ಲಿ ಪೊಲೀಸರು ಗುಂಡು ಹಾರಿಸಿದಾಗ 6 ಮಂದಿ ಸತ್ತು 50 ಮಂದಿ ಗಾಯಗೊಂಡರು. ಮೇ 4ರಂದು ಹೇ ಮಾರ್ಕೆಟ್ ಚೌಕದಲ್ಲಿ ಭಾರಿ ಪ್ರತಿಭಟನಾ ಮೆರವಣಿಗೆ ಹೊರಡಿಸಲಾಯಿತು. ರ‍್ಯಾಲಿ ಮುಗಿಯುವ ಸಂದರ್ಭದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಎಸೆದ ಬಾಂಬ್ ಸ್ಫೋಟಗೊಂಡಾಗ ಒಬ್ಬ ಪೊಲೀಸ್ ಮೃತಪಟ್ಟ. ನಂತರ ಆರಂಭವಾದ ಗಲಭೆಯಲ್ಲಿ ಆರು ಮಂದಿ ಪೊಲೀಸರು ಮತ್ತು ನಾಲ್ವರು ಕಾರ್ಮಿಕರು ಸತ್ತು ಅನೇಕರು ಗಾಯಗೊಂಡರು. ಹೀಗೆ ವಿಶ್ವಾದ್ಯಂತ ಕಾರ್ಮಿಕರ ಹೋರಾಟದ ದಿನವಾಗಿ ‘ಮೇ ದಿನಾಚರಣೆ ಆರಂಭವಾಯಿತು.

ಷಿಕಾಗೊ ದುರಂತಕ್ಕೆ 38 ವರ್ಷಗಳ ಮೊದಲೇ ಮಾರ್ಕ್ಸ್ ಮತ್ತು ಏಂಗೆಲ್ಸ್ ಅವರು ರಚಿಸಿದ ಕಮ್ಯೂನಿಸ್ಟ್ ಪ್ರಣಾಳಿಕೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಕಾರ್ಮಿಕ ಚಳವಳಿಯ ಮಹತ್ವದ ಕುರಿತು ತಿಳಿಸಲಾಗಿದೆ. ಕಾರ್ಮಿಕರ ಶೋಷಣೆಯ ಕಾರಣಗಳನ್ನು ವಿವರಿಸಲಾಗಿದೆ. ವರ್ಗ ಹೋರಾಟದಿಂದ ಕಾರ್ಮಿಕರ ವಿಮೋಚನೆಯಾಗುವುದರ ಬಗ್ಗೆ ಸೂಚಿಸಲಾಗಿದೆ.

ಕಳೆದ ನೂರು ವರ್ಷಗಳ ಅವಧಿಯಲ್ಲಿ ವಿವಿಧ ಹೋರಾಟಗಳ ಫಲವಾಗಿ ವಿವಿಧ ಕ್ಷೇತ್ರಗಳ ಕಾರ್ಮಿಕರು 8 ಗಂಟೆಗಳ ಕೆಲಸವೂ ಸೇರಿದಂತೆ ಅನೇಕ ಸೌಲಭ್ಯಗಳನ್ನು ಪಡೆದರು. ಅಂತರರಾಷ್ಟ್ರೀಯ ಪ್ರಜ್ಞೆಯನ್ನೂ ಪಡೆದರು. ಆದರೆ ಕಳೆದ 25 ವರ್ಷಗಳ ಅವಧಿಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚು ಕಂಪ್ಯೂಟರ್ ತಂತ್ರಜ್ಞಾನದ ಬಳಕೆ ಮತ್ತು ಜಾಗತೀಕರಣದಿಂದಾಗಿ ವಿಶ್ವದ ಮುಖವೇ ಬದಲಾಗುತ್ತಿದೆ. ಕಾರ್ಮಿಕರು ಉದ್ಯೋಗಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಇನ್ನು ಮುಂದೆ ಉತ್ಪಾದನೆಯಲ್ಲಿ ಕಾರ್ಮಿಕರ ಪಾತ್ರ ಇಲ್ಲವೇನೋ ಎನ್ನುವ ರೀತಿಯಲ್ಲಿ ಕಂಪ್ಯೂಟರ್ ತಂತ್ರಜ್ಞಾನದ ಬಳಕೆಯಾಗುತ್ತಿದೆ. ದುಡಿಯುವ ಕೈಗಳು ಕೆಲಸ ಕಳೆದುಕೊಂಡಷ್ಟೂ ಹೋರಾಟಗಳು ಗೌಣವಾಗಿ ಅಪರಾಧಗಳು ಹೆಚ್ಚುತ್ತಿವೆ. ಕೌಟುಂಬಿಕ ಮತ್ತು ಸಾಮಾಜಿಕ ಬದುಕು ಅಸಹನೀಯವಾಗುತ್ತಿದೆ.

ಮಾನವನನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತ ಸುವ್ಯವಸ್ಥಿತ ಸಮಾಜವೊಂದನ್ನು ಸೃಷ್ಟಿಸಿ, ಉಳಿಸಿ ಬೆಳೆಸುವುದಕ್ಕಾಗಿ ಅನೇಕ ಧರ್ಮಸಂಸ್ಥಾಪಕರು ಪ್ರಯತ್ನಪಟ್ಟಿದ್ದಾರೆ. ಅವರೆಲ್ಲ ದುಡಿಯುವ ವರ್ಗಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ. ಬಡವರ ಹಕ್ಕುಗಳ ರಕ್ಷಣೆಯಾಗುವ ಹಾಗೆ ಧಾರ್ಮಿಕ ಕಟ್ಟಳೆಗಳನ್ನು ವಿಧಿಸಿದ್ದಾರೆ. ಆ ಮೂಲಕ ತಾವು ಸ್ಥಾಪಿಸಿದ ಅಥವಾ ವಿಕಾಸಗೊಳಿಸಿದ ಧರ್ಮಗಳು ಬಡವರ ಪರ ಎಂಬುದನ್ನು ಸೂಚಿಸಿದ್ದಾರೆ. ಅಂಥವರಲ್ಲಿ 7ನೆಯ ಶತಮಾನದ ಮುಹಮ್ಮದ್ ಪೈಗಂಬರ್ ಮತ್ತು 12ನೆಯ ಶತಮಾನದ ಬಸವಣ್ಣನವರು ಪ್ರಮುಖರಾಗಿದ್ದಾರೆ. ಕ್ರಿಸ್ತ ಪೂರ್ವ 6ನೆಯ ಶತಮಾನದ ಭಗವಾನ ಬುದ್ಧ ಮತ್ತು ಕ್ರಿಸ್ತ ಶಕೆಗೆ ಕಾರಣವಾದ ಏಸು ಕ್ರಿಸ್ತ ಕೂಡ ಬಡವರ ಪರವಾಗಿಯೇ ಧರ್ಮ ಸ್ಥಾಪನೆ ಮಾಡಿದವರು.

ದುಡಿಯುವ ವರ್ಗಕ್ಕೆ ಸಂಬಂಧಿಸಿದ ಶೂದ್ರರು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕಟ್ಟಳೆಗಳಿಂದಾಗಿ ನರಕಯಾತನೆಯನ್ನು ಅನುಭವಿಸುತ್ತಿದ್ದ ಸಂದರ್ಭದಲ್ಲಿ ಭಗವಾನ್ ಬುದ್ಧ ದುಡಿಯುವ ಜನರ ಧರ್ಮಸ್ಥಾಪನೆ ಮಾಡಿದ. ವರ್ಣ ಮತ್ತು ವರ್ಗಭೇದಗಳನ್ನು ತಿರಸ್ಕರಿಸಿದ ಬೌದ್ಧಧರ್ಮವು ಕೆಳಜಾತಿ ಮತ್ತು ಕೆಳವರ್ಗದ ಜನರಿಗೆ ಹೊಸ ಆಶಾಕಿರಣವಾಯಿತು. ಏಸುಕ್ರಿಸ್ತ ಕೂಡ ಭೇದಭಾವವಿಲ್ಲದ ಸಮಾಜಕ್ಕಾಗಿ ಧರ್ಮಮಾರ್ಗವನ್ನು ಹಾಕಿಕೊಟ್ಟ. ಪೈಗಂಬರರು ಮತ್ತು ಬಸವೇಶ್ವರರು ಬಡವರ ಪರವಾದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ತಲ್ಲೀನರಾಗಿದ್ದರು.

“ಸಂಪತ್ತಿನ ಗುಲಾಮನನ್ನು ದೇವರು ತಿರಸ್ಕರಿಸುವನು” ಎಂದು ಪೈಗಂಬರರು ಎಚ್ಚರಿಸಿ ಮಾನವರ ಸಂಗ್ರಹ ಬುದ್ಧಿಯನ್ನು ವಿರೋಧಿಸಿದ್ದಾರೆ. “ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ” ಎಂದು ಬಸವಣ್ಣನವರು ತಿಳಿಸುವ ಮೂಲಕ ಸಂಪತ್ತಿನ ಸಂಗ್ರಹವನ್ನು ಅಲ್ಲಗಳೆದಿದ್ದಾರೆ.

ಸಂಗ್ರಹ ಬುದ್ಧಿಯು ಮಾನವನ ಎಲ್ಲ ದುರಂತಗಳಿಗೆ ಕಾರಣವಾಗಿದೆ. ಆತ ಸಂಪತ್ತನ್ನು ಗಳಿಸಿದಷ್ಟೂ ತಾನು ಬೇರೆಯವರಿಗಿಂತ ಭಿನ್ನ ಎಂಬ ಭಾವನೆ ತಾಳುತ್ತ ಹೋಗುತ್ತಾನೆ. ಅಂಥವರು ಹೆಚ್ಚಾಗುತ್ತ ಮೇಲ್ವರ್ಗವಾಗಿ ಪರಿಣಮಿಸುತ್ತಾರೆ. ಈ ಮೇಲ್ವರ್ಗದಿಂದಾಗಿ ಮೇಲ್ಜಾತಿಗಳ ಮತ್ತು ಉತ್ತಮವೆಂದು ಕರೆಸಿಕೊಳ್ಳುವ ಕುಲಗಳ ನಿರ್ಮಾಣವಾಗುತ್ತದೆ. ಎಲ್ಲ ರೀತಿಯ ಮೇಲು-ಕೀಳುಗಳಿಗೆ ನಾಂದಿಯಾಗುತ್ತದೆ. ಆದ್ದರಿಂದ ಪೈಗಂಬರರ ಮೂಲಕ ಅವತೀರ್ಣಗೊಂಡ ಕುರಾನ್‌ನಲ್ಲಿ ಮತ್ತು ಬಸವಣ್ಣನವರ ವಚನಗಳಲ್ಲಿ ನರನ ಸಂಗ್ರಹಬುದ್ಧಿಯನ್ನು ತಿರಸ್ಕರಿಸಲಾಗಿದೆ.

“ಕಾಯಕ ಜೀವಿಗಳು ದೇವರ ಪ್ರೀತಿಗೆ ಪಾತ್ರರಾಗುವರು” ಎಂದು ಹೇಳಿದ ಪೈಗಂಬರರು, “ಕೂಲಿಯ ಒರಟು ಕೈಗಳನ್ನು ನಾನು ಪ್ರೀತಿಸುತ್ತೇನೆ” ಎಂದು ತಿಳಿಸಿದ್ದಾರೆ. “ಅಪ್ಪನು ನಮ್ಮ ಮಾದಾರ ಚೆನ್ನಯ್ಯ ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ” ಎಂದು ಬಸವಣ್ಣನವರು ಕಾಯಕಜೀವಿಗಳನ್ನು ಗೌರವಿಸಿದ್ದಾರೆ. ದುಡಿದು ಉತ್ಪಾದಿಸುತ್ತ ನಾವೆಲ್ಲ ಬದುಕಲು ಸಾಧ್ಯವಾಗುವಂತೆ ಮಾಡುವ ಕಾಯಕಜೀವಿಗಳ ಒರಟು ಕೈಗಳು ಅತ್ಯಂತ ಮಹತ್ವದ್ದಾಗಿವೆ ಎಂದು ಪೈಗಂಬರರು ಸೂಚಿಸಿದರೆ, ಅವರೇ ನಮ್ಮ ಹಿರಿಯರು ಎಂದು ಬಸವಣ್ಣನವರು ಶ್ಲಾಘಿಸುತ್ತಾರೆ.

“ನಿಮಗೆ ಅತ್ಯಧಿಕ ಪ್ರಿಯವಾದುದನ್ನು ದೇವಮಾರ್ಗದಲ್ಲಿ ವ್ಯಯಿಸುವ ತನಕ ನೀವು ಪುಣ್ಯ ಗಳಿಸಲಾರಿರಿ” ಎಂದು ಕುರಾನಿನಲ್ಲಿ ತಿಳಿಸಲಾಗಿದೆ. “ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು, ಕೂಡಲಸಂಗನ ಶರಣರಿಗೆ ಸವೆಸಲೇ



ಬೇಕು” ಎಂದು ಬಸವಣ್ಣನವರು ಎಚ್ಚರಿಸಿದ್ದಾರೆ.

ಸಂಪತ್ತನ್ನು ಕೂಡಿಸುವುದರಿಂದ ಅದು ದಿನಗಳೆದಂತೆ ಮಾನವಕುಲಕ್ಕೆ ಕಂಟಕಪ್ರಾಯವಾಗುತ್ತ ಹೋಗುತ್ತದೆ. ದುಡಿಯುವ ಮತ್ತು ಸುಲಿಯುವ ವರ್ಗಗಳ ನಿರ್ಮಾಣಕ್ಕೆ ನಾಂದಿ ಹಾಡುತ್ತದೆ. ವರ್ಗರಹಿತವಾದ ಸಮಾಜದಲ್ಲಿ ಮಾತ್ರ ಮಾನವ ಏಕೋಭಾವದಿಂದ ಬದುಕಲು ಸಾಧ್ಯ ಎಂಬ ಆಶಯ ಪೈಗಂಬರರದ್ದು ಮತ್ತು ಬಸವಣ್ಣನವರದ್ದು ಆಗಿದೆ.

“ನಮಾಜನ್ನು ಸ್ಥಿರಗೊಳಿಸಿರಿ; ಜಕಾತ್ ಕೊಡಿರಿ” ಎಂದು ಕುರಾನ್ ಆದೇಶಿಸುತ್ತದೆ. “ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು, ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು” ಎಂದು ಬಸವಣ್ಣನವರು ಹೇಳುತ್ತಾರೆ. ದೇವರ ಒಲುಮೆಯನ್ನು ಎರಡು ರೀತಿಯಿಂದ ಗಳಿಸಬೇಕೆಂಬುದು ಕುರಾನಿನ ಆದೇಶವಾಗಿದೆ ಎಂದು ಪೈಗಂಬರರು ಸೂಚಿಸಿದ್ದಾರೆ. ನಮಾಜ್ ಮಾಡುವುದು ದೇವರ ಆರಾಧನೆಯಾಗಿರುವಂತೆಯೆ ಜಕಾತ್ ಕೊಡುವುದು ಸಮಾಜವೆಂಬ ‘ದೇವರ’ ಆರಾಧನೆಯಾಗಿದೆ. ಸೃಷ್ಟಿಗೆ ಸೃಷ್ಟಿಕರ್ತನೇ ಕಾರಣನಾಗಿರುವುದರಿಂದ ಎಲ್ಲವೂ ದೇವರದ್ದೇ ಆಗಿದೆ. ಬಸವಣ್ಣನವರು ಇಷ್ಟಲಿಂಗ ಪೂಜೆ ಮತ್ತು ಜಂಗಮಲಿಂಗ ಪೂಜೆಯ ಬಗ್ಗೆ ಹೇಳುತ್ತಾರೆ. ಇಷ್ಟಲಿಂಗ ಪೂಜೆಯು ನಮಾಜ್ ಸ್ಥಾನದಲ್ಲಿದ್ದರೆ ಜಂಗಮಲಿಂಗ ಪೂಜೆಯು ಜಕಾತ್ ಸ್ಥಾನದಲ್ಲಿದೆ. ಜಕಾತ್ ಎಂದರೆ ಶ್ರೀಮಂತರ ಸಂಪತ್ತಿನಲ್ಲಿ ಬಡವರ ಪಾಲು. ಜಂಗಮಲಿಂಗ ಪೂಜೆ ಎಂದರೆ ಕಾಯಕ ಮಾಡಿ ಗಳಿಸಿದ್ದನ್ನು ದಾಸೋಹ ರೂಪದಲ್ಲಿ ಸಮಾಜಕ್ಕೆ ಅರ್ಪಿಸುವುದು. ಇದುವೆ ಜಂಗಮ ದಾಸೋಹ. ದೇವರು ಸಮಾಜದ ರೂಪದಲ್ಲಿಯೂ ಇರುತ್ತಾನೆ ಎಂಬ ಭಾವವು ವರ್ಗರಹಿತ ಸಮಾಜದ ಭಾವವೇ ಆಗಿದೆ. ಹೀಗೆ ಪೈಗಂಬರರು ಮತ್ತು ಬಸವಣ್ಣನವರು ಮಾನವರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ತುಂಬುತ್ತ ಮೇಲಿಲ್ಲದ ಮತ್ತು ಕೀಳಿಲ್ಲದ ವ್ಯವಸ್ಥೆಯನ್ನು ಸೃಷ್ಟಿಸಲು ಮಾರ್ಗ ತೋರಿಸಿಕೊಟ್ಟರು.

“ವ್ಯಾಪಾರವನ್ನು ಅಲ್ಲಾಹನು ಧರ್ಮಬದ್ಧಗೊಳಿಸಿದ್ದಾನಲ್ಲದೆ ಬಡ್ಡಿಯನ್ನು ನಿಷೇಧಗೊಳಿಸಿದ್ದಾನೆ” ಎಂದು ಕುರಾನ್ ಸಾರಿದೆ. “ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು” ಎಂದು ಬಸವಣ್ಣನವರು ತಿಳಿಸುತ್ತಾರೆ. ದುಡಿಯದೆ ಬದುಕುತ್ತ ಸಂಪತ್ತನ್ನು ಸಂಗ್ರಹಿಸುವಲ್ಲಿ ಬಡ್ಡಿಯ ಪಾತ್ರ ಹಿರಿದಾಗಿದೆ. ಅದು ಅನೈತಿಕ ಬದುಕಿಗೆ ದಾರಿ ಮಾಡಿಕೊಡುವುದು. ಬಡ್ಡಿಯ ಹಣದಿಂದ ಮೌಲ್ಯಹೀನ ಸಮಾಜ ನಿರ್ಮಾಣವಾಗುವುದು. ಅಂತೆಯೆ ಏಸು ಕ್ರಿಸ್ತ ಮತ್ತು ಕಾರ್ಲ್‌ಮಾರ್ಕ್ಸ್ ಅವರ ಹಾಗೆ ಪೈಗಂಬರರು ಮತ್ತು ಬಸವಣ್ಣನವರು ಬಡ್ಡಿಯನ್ನು ತೀಕ್ಷ್ಣವಾಗಿ ವಿರೋಧಿಸಿದ್ದಾರೆ. ಬಡ್ಡಿಯ ಹಣದಿಂದಲೇ ವಿಶ್ವದಲ್ಲಿ ಕೆಲವೊಂದು ರಾಷ್ಟ್ರಗಳು ದೈತ್ಯರಾಷ್ಟ್ರಗಳಾಗಿ ರೂಪು ತಾಳಿದರೆ ನೂರಾರು ರಾಷ್ಟ್ರಗಳು ಅವುಗಳಿಗೆ ಬಡ್ಡಿಯನ್ನು ಕೊಡುತ್ತ ಬಡವಾಗಿವೆ. ಬಡ್ಡಿಯು ಇಡೀ ಜಗತ್ತನ್ನು ತಲ್ಲಣಗೊಳಿಸುವತ್ತ ಸಾಗಿದೆ.


“ಜನರಿಗೆ ಕೃತಜ್ಞನಾಗಿರದವನು ಅಲ್ಲಾಹನಿಗೂ ಕೃತಜ್ಞನಾಗಿರಲಾರನು” ಎಂದು ಪೈಗಂಬರರು ಹೇಳುತ್ತಾರೆ. “ಜಂಗಮವಾಪ್ಯಾಯನವಾದಡೆ ಲಿಂಗ ಸಂತುಷ್ಟಿಯಹುದಯ್ಯಾ” ಎಂದು ಬಸವಣ್ಣವರು ತಿಳಿಸುತ್ತಾರೆ. ಜನಸಮುದಾಯದ ಸುಂದರ ಬದುಕಿಗಾಗಿ ಚಿಂತಿಸುವುದು ಮತ್ತು ಅದಕ್ಕಾಗಿ ತನುಮನಧನಗಳನ್ನು ಅರ್ಪಿಸುವುದು ನಿಜವಾದ ದೇವರ ಸೇವೆಯಾಗಿದೆ.

“ನನ್ನನ್ನು ಬಲಹೀನರ ಮತ್ತು ಬಡವರ ಮಧ್ಯೆ ಹುಡುಕಿರಿ. ನಿಶ್ಚಯವಾಗಿಯೂ ನೀವು ಅವರ ದುಡಿಮೆಯಿಂದಲೇ ಆಹಾರವನ್ನು, ಸಹಾಯವನ್ನು ಪಡೆಯುತ್ತೀರಿ” ಎಂದು ಪೈಗಂಬರರು ಹೇಳುತ್ತಾರೆ.

“ಕುದುರೆ ಸತ್ತಿಗೆಯವರ ಕಂಡರೆ ಹೊರಳಿಬಿದ್ದು ಕಾಲ ಹಿಡಿವರು, ಬಡಭಕ್ತರು ಬಂದರೆ ‘ಎಡೆಯಿಲ್ಲ ಅತ್ತ ಸನ್ನಿ’ ಎಂಬರು” ಎಂದು ಬಸವಣ್ಣನವರು ಸಾತ್ವಿಕ ಕೋಪವನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಪೈಗಂಬರರು ಮತ್ತು ಬಸವಣ್ಣನವರು ಸದಾ ಬಡವರ ಪರವಾಗಿ ನಿಲ್ಲುತ್ತಾರೆ. ಬಡವರ ಬದುಕನ್ನು ಹಸನಾಗಿಸುವುದೇ ಧರ್ಮದ ಗುರಿ ಎಂದು ಸಾರುತ್ತಾರೆ.

“ನಿಮ್ಮ ಧನವನ್ನು ನೀವು ಅನ್ಯಾಯವಾಗಿ ತಿನ್ನಬಾರದು” ಎಂಬುದು ಕುರಾನಿನ ಆದೇಶವಾಗಿದೆ. “ಧನವ ಕೊಟ್ಟು ಜಂಗಮವನೊಲಿಸಬೇಕು” ಎಂದು ಬಸವಣ್ಣನವರು ಹೇಳುತ್ತಾರೆ. ಧನವು ಸದಾ ಸಮಾಜದ ಸ್ವಾಸ್ಥ್ಯ ಕಾಪಾಡುವುದಕ್ಕೆ ಬಳಕೆಯಾಗಬೇಕು. ಇಲ್ಲದಿದ್ದರೆ ಅದು ಅಪರಾಧಗಳಿಗೆ ಮೂಲವಾಗುತ್ತದೆ. ಮನುಷ್ಯನನ್ನು ಮೌಲ್ಯವಂತನನ್ನಾಗಿ ಮಾಡುವುದು ಧರ್ಮದ ಕರ್ತವ್ಯವಾಗಿದೆ. ಆದರೆ ಆತ ಮೌಲ್ಯ ಕಳೆದುಕೊಳ್ಳತೊಡಗಿದಾಗ ಅಪರಾಧಗಳ ಸಮಾಜದ ಹುಟ್ಟಿಗೆ ಕಾರಣನಾಗುತ್ತಾನೆ. ಸಮಾಜದಲ್ಲಿ ನಡೆಯುವ ಸುಲಿಗೆಯಿಂದ ಅಪರಾಧಗಳ ಸೃಷ್ಟಿಯಾಗುತ್ತದೆ. ಸಮಾಜಸೇವೆಯಿಂದ ಸುಂದರ ಸಮಾಜದ ನಿರ್ಮಾಣವಾಗುತ್ತದೆ. ಆದ್ದರಿಂದ ನಮ್ಮ ಹಣ ಸತ್ಪಾತ್ರಕ್ಕೆ ಸಲ್ಲುವಂತೆ ನೋಡಿಕೊಳ್ಳುವುದು ಅವಶ್ಯವಾಗಿದೆ.

“ಪೂರ್ವ ಪಶ್ಚಿಮದ ಕಡೆಗೆ ನಿಮ್ಮ ಮುಖವನ್ನು ತಿರುಗಿಸುವಲ್ಲಿ ಧರ್ಮಶೀಲತೆ ಇಲ್ಲ, ಆದರೆ ಅಲ್ಲಾಹನಲ್ಲಿ, ಅಂತಿಮ ದಿವಸದಲ್ಲಿ, ದೇವದೂತರಲ್ಲಿ, ಪ್ರವಾದಿಗಳಲ್ಲಿ ವಿಶ್ವಾಸವಿಡುವವರು ತಮ್ಮ ಧನವನ್ನು ಆತನ ಸಂಪ್ರೀತಿಗಾಗಿ ಬಂಧುಗಳಿಗೆ, ಅನಾಥರಿಗೆ, ದರಿದ್ರರಿಗೆ, ಸಂಚಾರಿಗಳಿಗೆ, ಸಹಾಯಾರ್ಥಿಗಳಿಗೆ ಮತ್ತು ದಾಸ್ಯ ವಿಮೋಚನೆಗೆ (ಗುಲಾಮರನ್ನು ಸ್ವತಂತ್ರಗೊಳಿಸುವುದಕ್ಕೆ) ಕೊಡುವವರು, ನಮಾಜನ್ನು ಸ್ಥಿರಗೊಳಿಸುವವರು, ತಾವು ವಾಗ್ದಾನವಿತ್ತಿದ್ದರೆ ಅದನ್ನು ಪೂರ್ಣಗೊಳಿಸುವವರು, ಕಷ್ಟಕಾರ್ಪಣ್ಯದಲ್ಲಿ ಹಾಗೂ ಸಮರದಲ್ಲಿ ಸಹನೆ ಕಳೆದುಕೊಳ್ಳದವರೇ ಪುಣ್ಯಶೀಲರು, ಇಂಥವರೇ ದೈವಭಕ್ತರು ಆಗಿರುತ್ತಾರೆ” ಎಂದು ಕುರಾನ್ ಸ್ಪಷ್ಟಪಡಿಸಿದೆ. “ಉಂಬ ಜಂಗಮ ಬಂದಡೆ ನಡೆಯೆಂಬರು,




ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ” ಬಸವಣ್ಣನವರು ವಿಷಾದ ವ್ಯಕ್ತಪಡಿಸುತ್ತಾರೆ. ಜ... ದುಃಖದಿಂದ ಮತ್ತು ಎಲ್ಲ ರೀತಿಯ ಅಸಹಾಯಕತೆ... ಪಾರು ಮಾಡುವಂಥ ಕ್ರಿಯೆಯಲ್ಲಿ ತೊಡಗು... ಅವಶ್ಯವಾಗಿದೆ. ಸುಮ್ಮನೆ ನಮಾಜ್ ಮಾಡುತ್ತ ... ಇಷ್ಟಲಿಂಗ ಪೂಜೆ ಮಾಡುತ್ತ ಕೂಡುವುದರಲ್ಲಿ ಅರ್ಥ... ಅವುಗಳ ಜೊತೆ ಸತ್ಕಾರ್ಯಗಳನ್ನು ಮಾಡುವು... ಬದುಕಿನ ಸಾರ್ಥಕತೆ ಇದೆ.

“ತುಳಿತಕ್ಕೀಡಾದವರು ಜಗತ್ತಿನ ನಾಯಕರು ... ನೇರ ವಾರಸುದಾರರು ಆಗಬೇಕೆಂದು ನಾವು ಇಚ್ಛಿಸಿ... ಎಂದು ಕುರಾನ್ ಹೇಳುತ್ತದೆ. ಬಸವಣ್ಣ... ಕೂಡಲಸಂಗಮದೇವ ಮಾನವ ಹಕ್ಕುಗಳ ದೇವರಾ... ಆತ ಅಸ್ಪೃಶ್ಯ ಮಾದಾರ ಚೆನ್ನಯ್ಯನ ಮನೆಯಲ್ಲಿ ಆ... ಕುಡಿಯುತ್ತಾನೆ. “ವೇದ ನಡನಡುಗಿತ್ತು, ಶಾಸ್ತ್ರವಗಲಿ... ಸಾರಿದ್ದಿತ್ತಯ್ಯಾ!....... ನಮ್ಮ ಕೂಡಲಸಂಗಯ್ಯನು ಮ... ಚೆನ್ನಯ್ಯನ ಮನೆಯಲ್ಲುಂಡಕಾರಣ” ಎಂದು ಬಸವಣ್ಣ... ಹೇಳುತ್ತಾರೆ. ಹೀಗೆ ಪೈಗಂಬರರ ಅಲ್ಲಾಹ್ ... ಬಸವಣ್ಣನವರ ಕೂಡಲಸಂಗಮದೇವ ಸದಾ ಬ... ದುಡಿಯುವವರ, ನಿರ್ಗತಿಕರ ಮತ್ತು ತುಳಿತಕ್ಕೊಳಗಾ... ಪರ ಇದ್ದಾರೆ. ಸದ್ಗುಣಗಳ ಆಗರವಾದವರ ಜೊತೆ ... ಅವರಿಬ್ಬರೂ ಒಂದೇ ಆಗಿದ್ದಾರೆ.

“ದೇವನೊಬ್ಬ ನಾಮ ಹಲವು” ಎಂದು ಬಸವಣ್ಣ... ಹೇಳಿದ್ದಾರೆ. “ದುಡಿದು ಸಂಪಾದಿಸುವ ಮುಸ್ಲಿಮ... ಅಲ್ಲಾಹನು ಪ್ರೀತಿಸುತ್ತಾನೆ” ಎಂದು ಪೈಗಂ... ಹೇಳುವಲ್ಲಿ ಪ್ರತಿಯೊಬ್ಬ ಮುಸ್ಲಿಮ... ಕಾಯಕಜೀವಿಯಾಗಿರಬೇಕಾಗುತ್ತದೆ ಎಂದು ಎಚ್ಚರಿಸ... “ಶರಣರ ಬರವೆನಗೆ ಪ್ರಾಣಜೀವಾಳವಯ್ಯಾ” ... ಬಸವಣ್ಣನವರು ತಮ್ಮ ಧರ್ಮದ ಮೂಲಾಧಾರ... ಕಾಯಕಜೀವಿಗಳನ್ನು ಕೊಂಡಾಡುತ್ತಾರೆ. “ತನ್ನ ಕೈ... ಸಂಪಾದಿಸಿದುದಕ್ಕಿಂತ ಉತ್ತಮ ಆಹಾರವನ್ನು ... ಯಾರೂ ತಿಂದಿಲ್ಲ” ಎಂದು ಪೈಗಂಬರರು ಹೇಳ... “ಕೊಲುವನೆ ಮಾದಿಗ, ಹೊಲಸು ತಿಂಬುವನೆ ಹೊ... ಕುಲವೇನೊ ಆವಂದಿರ ಕುಲವೇನೊ, ಸಕಲ ಜೀವಾ... ಲೇಸನೆ ಬಯಸುವ ನಮ್ಮ ಕೂಡಲಸಂಗನ ಶ... ಕುಲಜರು” ಎಂದು ಬಸವಣ್ಣನವರು ಹೇಳ... ಯಜ್ಞಯಾಗಾದಿಗಳಲ್ಲಿ ಪ್ರಾಣಿಬಲಿ ಕೊಡುವ... ಮಾದಿಗರು. ಕಾಯಕ ಮಾಡದೆ ವರ್ಣಗಟ್ಟಲೆ ನಡೆ... ಆ ಯಜ್ಞಯಾಗಾದಿಗಳಲ್ಲಿ ಬರಿ ತಿನ್ನುವುದು ಹೊ... ಆದರೆ ಹೊಲೆ ಮಾದಿಗರು ಮೊದಲುಾ... ಜಾತಿಸಂಕರವಾಗಿ, ಎಲ್ಲರೂ ಒಂದಾಗಿ ದುಡಿ... ಬದುಕುವ ಕೂಡಲಸಂಗನ ಶರಣರೇ ಕುಲಜರು ... ಬಸವಣ್ಣನವರು ಘೋಷಿಸುತ್ತಾರೆ.


ಕಾಯಕವು ಕಾಯವನ್ನು ಸುಂದರಗೊಳಿಸು... ಸದೃಢಗೊಳಿಸುತ್ತದೆ. ಕಾಯಕದಿಂದ ಆಗುವ ಮಾ... ಬದುಕಿನಲ್ಲಿ ಹಸಿವು ಬಹುಮುಖ್ಯವಾಗಿದೆ. ಈ ... ಮಾನವನ ರುಚಿಶಕ್ತಿಯನ್ನು ಹೆಚ್ಚಿಸುತ್ತದೆ. ಅದರಿ... ಸಾದಾ ಆಹಾರ ಕೂಡ ರುಚಿಕಟ್ಟಾಗುತ್ತದೆ. ... ದುಡಿದಾಗ ಒಳ್ಳೆಯ ನಿದ್ರೆ ಬಂದು ನಿಜವಾದ ವಿ... ಲಭಿಸುವುದು. ಹೀಗೆ ಹಸಿವು, ರುಚಿ ಮತ್ತು ವಿ... ಎಂಬುವು ನಿಜವಾದ ಅರ್ಥದಲ್ಲಿ ಬಡವರ ಸೊತ್ತು... ಶ್ರೀಮಂತರು ಎಷ್ಟೇ ಸಂಪತ್ತು ಗಳಿಸಿದರೂ ಬ... ಈ ಸೊತ್ತು ಅವರ ಪಾಲಾಗಲು ಸಾಧ್ಯವಿಲ್ಲ. ಬಡ... ಕಾಯಕದಿಂದ ಸಿಗುವ ಆನಂದವನ್ನು ಶ್ರೀಮ... ಖರೀದಿಸಲು ಸಾಧ್ಯವಿಲ್ಲ. ಇಂಥ ಬಡವರೇ ಬಸವಣ... ಶರಣಸಂಕುಲದಲ್ಲಿ ಇದ್ದವರು. ಇವರು ಸ್ವತಂತ್ರಧಿ... ಯಾವುದಕ್ಕೂ ಆಸೆಪಟ್ಟವರಲ್ಲ. ಕಾಯಕದಲ್ಲಿ ದೇವ... ಕಂಡವರು. ಸಕಲ ಜೀವಾತ್ಮರಿಗೆ ಲೇಸ ಬಯಸಿದ...



ಆ ಮೂಲಕ ವರ್ಗ, ... ಜಾತಿ ಮತ್ತು ಲಿಂಗಭೇದ... ಸಮಾಜವನ್ನು ಸೃಷ್ಟಿಸಿದ... ಪೈಗಂಬರರು ಕೂಡ ... ಸಮಾಜದ ನಿರ್ಮಾಣ... ಬಯಸಿದ್ದರು.

■ ರಂಜಾನ್ ದ...

ಯೋಗೇಶ್ ಮಾಸ್ಟರ್



ಪುರಾಣದ ಹೂರಣ

ನೈಸರ್ಗಿಕವೇ ನಾಕ, ಅನೈಸರ್ಗಿಕವೇ ನರಕ

ಚೀನೀ ಪುರಾಣದಲ್ಲಿ ತಾವೋ ಮತ್ತು ಬೌದ್ಧ ...ಚಾರಗಳು ತಮ್ಮ ಪ್ರಭಾವವನ್ನು ಗಾಢಗೊಳಿಸಿರುವು...ನ್ನು ನಾವು ನೇರವಾಗಿ ಗಮನಿಸಬಹುದು. ಮೊದಲು ...ವೋ, ಎರಡನೆಯ ಮಟ್ಟದಲ್ಲಿ ಬೌದ್ಧ ಧರ್ಮ ...ತ್ತು ಮೂರನೆಯದಾಗಿ ಕನ್ಫ್ಯೂಶಿಯಸ್ ಚೀನಾದಲ್ಲಿ ...ನ್ನ ವಿಕಾಸವನ್ನು ಹೊಂದುವ ಸರಿಸುಮಾರು ...ಶತ್ತಿನಲ್ಲಿ ಕೂಡ ತಾವೋ ಗಾಢವಾಗಿ ಪ್ರಚಲಿತ ...ಲ್ಲಿತ್ತು. ದಾವೋ ಎಂದೂ ಕರೆಯಲಾಗುತ್ತಿದ್ದ ಈ ...ದ್ಧಾಂತವು ಯಾವುದೇ ಮಾನವನ ಸೃಜಿತ ...ದ್ಧಾಂತವನ್ನು ಹೊಂದುವ ಇರಾದೆ ಹೊಂದಿಲ್ಲ. ಅದರ ...ಮನವೆಲ್ಲಾ ನಿಸರ್ಗ ಕೇಂದ್ರಿತವಾಗಿದೆ. ಅದರ ...ೇರುಗಳು ಪ್ರಕೃತಿಯ ಕ್ರಮ ಮತ್ತು ವಿಕಾಸದಲ್ಲಿದೆ. ...ತಿಯೊಂದೂ ಪ್ರಕೃತಿಯ ಅಂತರ್ಯದಿಂದಲೇ ...ಭಿವ್ಯಕ್ತವಾಗುತ್ತದೆ ಮತ್ತು ಅದರ ನಿರ್ವಹಣೆಗೇ ...ಳಪಟ್ಟಿದೆ ಎಂಬುದು ತಾವೋನ ಗಮನವಾಗಿದೆ. ...ದೇ ಸ್ವರ್ಗದ ದಾರಿಯೂ ಆಗಿತ್ತು. ತಾವೋ ...ೇಳುವ ಕಿವಿಮಾತು ಅತ್ಯಂತ ಸರಳ ಮತ್ತು ...ಮರ್ಪಕ. ಅದೇನೆಂದರೆ ನಿಸರ್ಗದ ಕ್ರಮವನ್ನು ...ಥವಾ ನಿಯಮಗಳನ್ನು ಅರಿತುಕೊಂಡು ...ರ್ಗದೊಟ್ಟಿಗೆ ಸಾಮರಸ್ಯದಿಂದ ಬದುಕುವ ಅರಿವು ...ಂಟಾದರೆ ಅದೇ ಮಹಾಜ್ಞಾನ. ವ್ಯಕ್ತಿಯನ್ನು ಅನಂತ ...ೀವನಕ್ಕೆ ಒಯ್ಯುವ ದಾರಿಯೂ ಅದೇ ಆಗಿದೆ. ನಾವು ...ದೇಷದೇ ನೆನಪಿಸಿಕೊಳ್ಳಬೇಕಾದ ವಿಷಯವೇ ...ದಲ್ಲವೇ? ಯಾವುದೇ ಜ್ಞಾನ, ಧರ್ಮ, ಪರಿಕಲ್ಪನೆ ...ಳು ದಾರಿಗಳೇ ಹೊರತು ಯಾರೊಬ್ಬರ ಅಥವಾ ...ಯಾವುದೊಂದರ ಗುರಿಯಲ್ಲ. ವ್ಯಕ್ತಿಯ ಗಮನ ...ದಾರಿಯಲ್ಲಿನ ಹಂತಗಳ ಮೇಲೆಯೇ ನಿಂತು, ಅದರ ...ಮೇಲೆಯೇ ಮೋಹಗೊಂಡು ಪರವಶವಾಗುವು...ದರಿಂದಲೇ ಗುರಿಯನ್ನು ತಲುಪಲು ನಿಶ್ಶಕ್ತನಾಗಿ ...ಮಾರ್ಗ ಕ್ರಮಿಸದವನಾಗುತ್ತಾನೆ. ಇದರ ಪರಿಣಾಮವೇ ...ನ್ನ ಸಿದ್ಧಾಂತವೇ ಅಂತಿಮ ಎಂಬ ವಾದಮಂಡನೆ. ...ಮ್ಮದೇ ಶ್ರೇಷ್ಠ, ಅಂತಿಮ ಎಂದು ನಂಬುವ ಮತ್ತು ...ಘೋಷಿಸಿಕೊಳ್ಳುವ ಜಗತ್ತಿನ ಯಾವುದೇ ಧಾರ್ಮಿಕ ...ದ್ಧಾಂತಗಳೂ ಕ್ರಮಿಸಲಾಗದೇ ಬಸವಳಿದ ...ದೌರ್ಬಲ್ಯದ ಗೊಣಗುವಿಕೆಯೇ ಆಗಿದೆ. ನಿಸರ್ಗದ ...ೇರಿನಿಂದಲೇ ಚಿಗುರಿ ಮೊಳೆದ ದಾರಿಗಳು ...ಕಾಸವಾಗದೇ ಅಲ್ಲಲ್ಲೇ ನಿಂತು ಮಡುಗಟ್ಟಿರುವ ...ಥವಾ ಘನೀಭೂತವಾಗಿರುವ ಕಾರಣ ಮನುಷ್ಯ ...ದನ್ನು ತನ್ನ ಮನಸ್ಸಿನ ಸೀಮಿತ ಚೌಕಟ್ಟಿನಲ್ಲಿ ಬಂಧಿಸಿ ...ದ್ಧಾಂತಗಳನ್ನಾಗಿಸಿದ್ದು.

ಇರಲಿ, ನಿಸರ್ಗದ ಮೂಲಕ ಅನಂತ ಬದುಕಿಗೆ ...ೆದುಕೊಳ್ಳುವಂತಹ ದೃಷ್ಟಿಯನ್ನು ನೀಡಿದ ತಾವೋ ...ಮುಕ್ತ ಮನಸ್ಸುಗಳ ಮತ್ತು ಜೀವನ ಪ್ರೇಮಿಗಳ ...ಯ್ಕೆಯಾಯಿತು. ಇದನ್ನು ಧರ್ಮವೆಂದು ಕರೆದರೂ ...ಷಿತ ಧರ್ಮಗಳ ಚೌಕಟ್ಟುಗಳಿಗೆ ಇದು ...ೀಮಿತವಾಗಲಿಲ್ಲ. ಸೃಷ್ಟಿಯಲ್ಲಿ ಸೃಜಿತವಾಗುವ ...ತಿಯೊಂದಕ್ಕೂ ಮಾನ್ಯತೆ ನೀಡುವ ನಿಟ್ಟಿನಲ್ಲಿ ಯಿನ್ ...ತ್ತು ಯಾಂಗ್ ಲಾಂಛನ ರೂಪುಗೊಂಡಿತು. ...ಂದರಲ್ಲೊಂದು ಕಪ್ಪು ಮತ್ತು ಬಿಳಿಯ ಹನಿಗಳು ...ತ್ತಾಕಾರದಲ್ಲಿ ಬೆಸೆದುಕೊಂಡಿದ್ದು, ಕಪ್ಪು ಹನಿಯಲ್ಲಿ ...ಳಿಯ ಬಿಂದುವೂ, ಬಿಳಿಯ ಹನಿಯಲ್ಲಿ ಕಪ್ಪು ...ಂದುವೂ ಸಂಕೇತಿಸಿದ್ದು, ಇದು ಇತರ ಧಾರ್ಮಿಕ ...ತ್ವಗಳ ರೀತಿಯಲ್ಲಿ ಪಾವಿತ್ರ್ಯ ಮತ್ತು ಅಪಾವಿತ್ರ್ಯಗಳ ...ಸ್ಸಿಗೆ ಒಳಗಾಗಲಿಲ್ಲ. ವಿರುದ್ಧದ ಶಕ್ತಿಗಳು ಪರಸ್ಪರ ...ಪೂರಕವಾಗಿ ನಿಸರ್ಗದಲ್ಲಿ ಕೆಲಸ ಮಾಡುತ್ತವೆ ...ಂಬುದನ್ನು ಸಂಕೇತಿಸುವಂತಹ ಗುರುತು ...ದಾಯಿತು. ಯಿನ್ ಸ್ತ್ರೀ ತತ್ವವನ್ನು ಪ್ರತಿನಿಧಿಸಿದರೆ, ...ಯಾಂಗ್ ಪುರುಷತ್ವವನ್ನು ಪ್ರತಿನಿಧಿಸಿತು. ಭಾರತೀಯ ...ರ್ಶನಿಕತೆಯಲ್ಲಿ ಪ್ರಕೃತಿ ಮತ್ತು ಪುರುಷ. ತಂತ್ರ ...ತ್ತು ಶಾಕ್ತ ನೆಲೆಯಿಂದ ಶಿವ ಮತ್ತು ಶಕ್ತಿಯೇ ...ದು.

ಯಿನ್ ಎಂಬುದು ಕತ್ತಲು, ನಕಾರ, ಜಡ, ಮೃದು ...ತ್ತು ಭೂಮಿ ಎಂಬುದನ್ನು ಪ್ರತಿನಿಧಿಸಿದರೆ, ...ಯಾಂಗ್ ಬೆಳಕು, ಸಕಾರ, ಬಿಸಿ, ಗಟ್ಟಿ, ವೇಗ ಹೀಗೆ ...ಅವು ವಿಚಾರಗಳನ್ನು ಸಂಕೇತಿಸುತ್ತದೆ.

ಭಾರತದ ಪ್ರಕೃತಿ ಮತ್ತು ಪುರುಷ

ಹಿಂದೂ ಧರ್ಮವೆಂದು ಯಾವ ವೈದಿಕ ...ರಾಣಗಳ ಆಧಾರವಾಗಿ ಇಟ್ಟುಕೊಂಡು ...ಯತ್ನಿಸುತ್ತಿದ್ದಾರೋ ಅವರ ವಾದಕ್ಕೆ ಈ ತಾವೋ ಅಥವಾ ಯಿನ್ ಮತ್ತು ಯಾಂಗ್ ಪರಿಕಲ್ಪನೆ ವಿರುದ್ಧವಾದದ್ದು.


ಹಿಂದೂ ಪುರಾಣಗಳಲ್ಲಿ ಹೋರಾಟ, ಬಡಿದಾಟ, ವಿರೋಧಿಸುತ್ತಲೇ ಒಬ್ಬರ ಮೇಲೊಬ್ಬರು ವಿಜಯ ಸಾಧಿಸುವ ಪ್ರಯತ್ನ ಮಾಡುವುದು ಇತ್ಯಾದಿಗಳನ್ನು ನೋಡುತ್ತೇವೆ. ದುರ್ಗೆ ಎಂಬ ಸ್ತ್ರೀಯು ಮಹಿಷ ಎಂಬ ಅಸುರನ ಮೇಲೆ ಯುದ್ಧವನ್ನು ಹೂಡುತ್ತಾಳೆ. ದುರ್ಗೆ ಎಂಬ ಸಕಾರಾತ್ಮಕ ಶಕ್ತಿಯು ಮಹಿಷ ಎಂಬ ನಕಾರಾತ್ಮಕ ಶಕ್ತಿಯೊಡನೆ ಹೋರಾಟವನ್ನು ಮಾಡಿ, ಅಂತಿಮವಾಗಿ ನಕಾರಾತ್ಮಕ ಶಕ್ತಿಯನ್ನು ದಮನ ಮಾಡಿ, ಸಕಾರಾತ್ಮಕ ಶಕ್ತಿಯು ವಿಜಯವನ್ನು ಪಡೆಯುತ್ತದೆ. ಇದು ಅವರ ತಾತ್ವಿಕ ಅಂಶ. ದುಷ್ಟ ಶಕ್ತಿಯನ್ನು ದಮನ ಮಾಡಿ ಶಿಷ್ಟ ಶಕ್ತಿಯ ಮೇಲ್ಮೈಯನ್ನು ಸ್ಥಾಪಿಸುವುದು ವೈದಿಕ ಪುರಾಣಿಕರ ಆಶಯ.

ಆದರೆ ನೈಸರ್ಗಿಕವಾಗಿ ತಾವೋ ಇದನ್ನು ಸಂಪೂರ್ಣ ವಾಗಿ ನಿರಾಕರಿಸುತ್ತದೆ. ದುಷ್ಟ ಮತ್ತು ಶಿಷ್ಟ ಎಂಬುದನ್ನೇ ಅಲ್ಲಗಳೆಯುತ್ತದೆ. ಒಂದು ಗುಲಾಬಿ ಗಿಡದಲ್ಲಿರುವ ಹೂವು ಮತ್ತು ಮುಳ್ಳು; ಈ ಎರಡೂ ಪ್ರಕೃತಿ ಸಹಜವಾಗಿ ಒಂದರಲ್ಲೇ





ಮೂಡಿರುವುದು. ಯಾವುದು ಯಾವುದನ್ನು ದಮನ ಮಾಡುವುದು? ಯಾವುದು ಯಾವುದರ ಜೊತೆಗೆ ಹೋರಾಡುವುದು? ಎರಡರ ಮೂಲವೂ ನಿಸರ್ಗವೇ ಆಗಿರುವಾಗ! ಸಕಾರಾತ್ಮಕ ಮತ್ತು ನಕಾರಾತ್ಮಕ ಎಂಬುದು ಬರಿಯ ಗುರುತು ಹಚ್ಚಲು ಉಪಯೋಗಿಸುವ ಹೆಸರುಗಳು. ಆದರೆ ದುಷ್ಟ ಮತ್ತು



ಶಿಷ್ಟ ಎಂಬುದು ಪೂರ್ವಾಗ್ರಹಪೀಡಿತ ಆಲೋಚನೆಗಳು ಮತ್ತು ಧೋರಣೆಗಳು. ದುಷ್ಟ ಎಂಬುದು ಹೆದರಿಕೆ ಮತ್ತು ದೂರುವ ಧೋರಣೆಯನ್ನು ಹೊಂದಿದ್ದರೆ, ಶಿಷ್ಟವೆಂದು ಕರೆದುಕೊಳ್ಳುವುದು ಸ್ವಪ್ರೇಮ ಅಥವಾ ಆತ್ಮರತಿಯ ಅಭಿವ್ಯಕ್ತಿಯಾಗುತ್ತದೆ. ಆದರೆ ಒಂದನ್ನು ಆಲೋಚಿಸುವುದೇ ಇಲ್ಲ, ಸಕಾರಾತ್ಮಕ ಎಂಬುದನ್ನು ನಾವು ಯಾವುದನ್ನು ಕರೆಯುತ್ತೇವೆಯೋ ಅದು ಹುಟ್ಟಿರುವ ಅಸ್ತಿತ್ವದಿಂದಲೇ ನಕಾರಾತ್ಮಕ ಎಂಬುದೂ ಹುಟ್ಟಿರಬೇಕು. ಒಂದೇ ಮೂಲದಿಂದ ಬಂದಿರುವುದು ಪರಸ್ಪರ ತಮ್ಮ ಮೂಲದ ಉದ್ದೇಶವನ್ನು ಮತ್ತು ಆಶಯವನ್ನು ತಮ್ಮದೇ ಸ್ವಭಾವದ ಮುಖೇನ ಪೂರೈಸುತ್ತವೆಯೇ ಹೊರತು ಹೊಡೆದಾಡಿಕೊಳ್ಳುವುದು ಏಕೆ? ಯಾವುದು ಯಾವುದನ್ನು ಮಣಿಸಿ ವಿಜಯ ಸಾಧಿಸುವುದು? ಈ ದಿಕ್ಕಿನಲ್ಲಿ ವಿಷಯವನ್ನು ಅರ್ಥಮಾಡಿಕೊಳ್ಳಲು ಒಂದು ಉಪಮೆಯನ್ನು ತೆಗೆದುಕೊಳ್ಳೋಣ. ನನ್ನದೇ ದೇಹದ ಬಲಗೈ ಮತ್ತು ಎಡಗೈ ಅವುಗಳು ಇರುವ ದಿಕ್ಕುಗಳಲ್ಲಿ ಮತ್ತು ಭಾಗಗಳಿಂದ ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತದೆ. ಯಾವುದೇ ಒಂದು ವಸ್ತುವನ್ನು ಹಿಡಿಯಬೇಕಾದರೆ ಬಲಗೈ ಎಡಗೈಯ ವಿರುದ್ಧವಾಗಿ ತನ್ನ ಒತ್ತಡವನ್ನು ಬೀರುತ್ತದೆ. ಅದೇ ಬಲಗೈ ಎಡಗೈಯ ವಿರುದ್ಧವಾಗಿ ತನ್ನ ಒತ್ತಡವನ್ನು ಹಾಕುತ್ತದೆ. ಎರಡರ ಒತ್ತಡಗಳು ಪರಸ್ಪರ ವಿರುದ್ಧವಾಗಿರುತ್ತದೆಯಾದರೂ ಅದರ ಉದ್ದೇಶವು ಯಾವುದರ ಮೇಲೆಯೋ ತನ್ನ ಅಧಿಪತ್ಯ ಸ್ಥಾಪಿಸುವುದೋ ಅಥವಾ ವಿಜಯ ಸಾಧಿಸುವುದೋ ಅಲ್ಲ. ಬದಲಾಗಿ ವಿರುದ್ಧ ಶಕ್ತಿಗಳು ಪರಸ್ಪರ ಪೂರಕವಾಗಿ ಕೆಲಸ ಮಾಡುವುದು.

ಇದು ಜಯ ಜಯ ಹೇ ಮಹಿಷಾಸುರ ಮರ್ಧಿನಿ ಬರೆದವರಿಗೆ ಅರ್ಥವೇ ಆಗಿಲ್ಲ. ಭಾರತದ ಪ್ರಕೃತಿ ಮತ್ತು ಪುರುಷ ತತ್ವಗಳ ಮಹೋನ್ನತ ಪರಿಕಲ್ಪನೆಯನ್ನು ಹಾಳುಗೆಡವಿದ ಕೀರ್ತಿ ಪುರಾಣಿಕರದ್ದಾಗಿದೆ. ಈ ಪುರಾಣಿಕರೋ ರಾಜಕೀಯ ಪೂರ್ವಾಗ್ರಹಪೀಡಿತರಾಗಿದ್ದೇ ಸೈದ್ಧಾಂತಿಕ ಪರಿಕಲ್ಪನೆಗಳ ಅವನತಿಗೆ ಕಾರಣವಾಗಿದ್ದು. ಸಕಾರಾತ್ಮಕ ಮತ್ತು ನಕಾರಾತ್ಮಕ ಎಂಬ ಯಾವ ಎರಡು ಶಕ್ತಿಗಳು ನಿಸರ್ಗದಲ್ಲಿ ಸಮತೋಲನವನ್ನು ಸಾಧಿಸಲು ಪರಸ್ಪರ ಸಾಮರಸ್ಯವನ್ನು ಕಾಪಾಡಿಕೊಳ್ಳಬೇಕಾಗಿತ್ತೋ ಅವುಗಳ ನಡುವೆ ಕಿತ್ತಾಟವನ್ನು ಹುಟ್ಟುಹಾಕಿದ ಪೌರಾಣಿಕ ಪರಿಕಲ್ಪನೆಗಳು ಭಾರತದ ತಾತ್ವಿಕ ಮತ್ತು ನೈತಿಕ ಪತನಕ್ಕೆ ಕಾರಣವಾಯಿತು. ಪರಸ್ಪರ ಕೊಡುಕೊಳ್ಳುವಿಕೆಯು ಇಲ್ಲವಾಗಿ ಪರಸ್ಪರ ಪೈಪೋಟಿಯಿಂದ ವಿಜಯಕ್ಕಾಗಿ ಪರಸ್ಪರ ದಮನ ಮಾಡುವ, ಮರ್ಧಿಸುವ ಕೆಟ್ಟ ಹೋರಾಟಗಳ ಪರಂಪರೆಯು ಜನರ ಸಾಮೂಹಿಕ ಮನಸ್ಥಿತಿಯಲ್ಲಿ ನುಸುಳತೊಡಗಿತ್ತು. ಮರ್ಧನಗಳ ಪೌರಾಣಿಕ ಕಥಾನಕಗಳ ಪ್ರಭಾವವಿಲ್ಲದೇ ಶಾಕ್ತ ಅಥವಾ ಶೈವ ಸಿದ್ಧಾಂತಗಳ ತಂತ್ರ ಸಾಧನೆಗಳನ್ನು ಗಮನಿಸಿ. ಅವು ಪರಸ್ಪರ ಶಕ್ತಿಸಂವರ್ಧನೆಗೆ ದಾರಿಯಾಗುತ್ತಾ ಹೋಗುತ್ತದೆ. ಪರಸ್ಪರ ಪೂರಕವಾಗುವ ಬದಲು ಮಾರಕವಾಗುವಂತೆ ಸಂಘರ್ಷಕ್ಕೆ ತೊಡಗಿಸುವಂತಹ ಪೌರಾಣಿಕ ಪರಿಕಲ್ಪನೆಗಳು, ರಾಜಕೀಯ ಘರ್ಷಣೆಗಳೆಲ್ಲಾ ಪುರಾಣದ ಕಥಾನಕಗಳಾಗತೊಡಗಿ ಅವುಗಳು ಮತ್ತೆ ಸೈದ್ಧಾಂತಿಕವಾಗಿ ಮರು ವ್ಯಾಖ್ಯಾನಕ್ಕೆ ಒಳಗಾಗಿರುವ ಮಹಾ ಪ್ರಮಾದವೇ ಇಂದಿನ ದ್ವೇಷಪೂರಿತ ಧಾರ್ಮಿಕ ಮನಸ್ಥಿತಿಗೆ ಕಾರಣವಾಗಿರುವುದು. ಯಾವುದು ಬೇರಾಗಿತ್ತೋ ಆ ನಿಸರ್ಗವು ಭಾರತದ ಧರ್ಮದಿಂದ ಮರೆಯಲಾಯಿತು. ಯಾವ ಭಾರತದ ಆಲಯದಲ್ಲಿ ಮರಗಳು ಬೆಳೆಯಬೇಕಾಗಿತ್ತೋ ಅಲ್ಲಿ ನಿರ್ಜೀವ ಕಂಭಗಳು ಎದ್ದು ದೇವಾಲಯ ಎಂಬ ಗೋರಿಗಳಾದವು:

ನಿಸರ್ಗವೇ ಬೇರು

ವಾಸ್ತವವಾಗಿ ಜಗತ್ತಿನ ಯಾವುದೇ ಸಿದ್ಧಾಂತದ ಬೇರು ನಿಸರ್ಗದಲ್ಲಿರುತ್ತದೆ. ಮನುಷ್ಯನ ತೊಟ್ಟಿಲು ಮತ್ತು ಸಮಾಧಿ ನಿಸರ್ಗವೇ ಆಗಿದೆ. ಇದರ ನಡುವೆ ತನ್ನ ಮನೋಭಾವದ ದೊಂಬರಾಟ ನಡೆಸಿಕೊಳ್ಳುತ್ತಾನೆ. ಇಂಥಾ ದೊಂಬರಾಟ ಗಳಿಲ್ಲದೇ ಹುಟ್ಟು ಮತ್ತು ಸಾವಿನ ಸಹಜತೆಯಲ್ಲಿಯೇ ನಡುವಿನ ಬದುಕೂ ಸಮತೋಲನ ಕಾದುಕೊಳ್ಳಲಿ ಎಂದೇ ಹಲವು ದಾರಿಗಳು ಆಶಿಸಿದವು. ಅವುಗಳಲ್ಲಿ ತಾವೋ, ಜೈನ್ ಮತ್ತು ಬೌದ್ಧವೇ ಮೊದಲಾದವು.

ತಾವೋ ಬಗ್ಗೆ ಮಾತಾಡುವಾಗ ಲಾಜಿ ಬಗ್ಗೆ ಹೇಳದೇ ಹೋದರೆ ಅಪೂರ್ಣವೆನಿಸುತ್ತದೆ. ಅವರ ಕೃತಿ ತಾವೋ ತೇ ಚಿಂಗ್ ಬಗ್ಗೆ ಕೂಡ ಉಲ್ಲೇಖಿಸಬೇಕಾಗುತ್ತದೆ. ಆದರೆ ದಾರ್ಶನಿಕ ಲಾಜಿ? (ಲಾಟ್ಸೆ?) ಒಂದು ಅದ್ಭುತ. ನಿಸರ್ಗದ ಮನೋಭಾವದ ವ್ಯಕ್ತಿ ಚಿತ್ರಣ. ಅದನ್ನು ಮುಂದೆ ದರ್ಶಿಸೋಣ.

ಯಾವಾಗ ತಾವೋ ಗಮನಿಸುತ್ತಿದ್ದ ನೈಸರ್ಗಿಕ ಶಕ್ತಿಯನ್ನು ಗ್ರಹಿಸುವ, ಕಲುಷಿತಗೊಳಿಸುವ, ಆರಾಧಿಸುವ ದಿಕ್ಕುಗಳಲ್ಲಿ ಮನುಷ್ಯನ ಮನಸ್ಸೆಂಬುದು ಮುಖ್ಯ ಉಪಕರಣವಾಯಿತೋ, ಅದರ ಬಗ್ಗೆ ಆಸಕ್ತಿ ತಳೆಯುವುದು ಮತ್ತು ಅದನ್ನು ಪಳಗಿಸುವುದು ಮುಖ್ಯವಾಯಿತು. ಅದಕ್ಕೆ ನೆರವಾಗಿದ್ದು ಬೌದ್ಧ ಧರ್ಮ. ಹೀಗಾಗಿ ಬೌದ್ಧ ಧರ್ಮ ಮತ್ತು ತಾವೋ ಈ ಎರಡೂ ಪರಸ್ಪರ ಪೂರಕವೇ ಆಯಿತು.

ಈ ಎರಡರ ನಡುವೆ ಸಂಘರ್ಷಗಳು ನಡೆಯಲಿಲ್ಲ. ಸಂವಾದಗಳು ನಡೆದವು. ಬೆಸುಗೆಗಳು ಉಂಟಾದವು. ಬೌದ್ಧ ಧರ್ಮವು ಅನೇಕಾನೇಕ ಪೌರಾಣಿಕ ಪರಿಕಲ್ಪನೆಗಳಿಂದ ಅಲುಗಾಡಿಸಲ್ಪಟ್ಟರೂ ಅದರ ಮೂಲ ಸಿದ್ಧಾಂತವೂ ಪ್ರಕೃತಿ ಮತ್ತು ಅದರ ಶಕ್ತಿಯ ಕಡೆಗೇ ಹೊಂದಿದ್ದ ಒಲವಿನಿಂದಾಗಿ ಆಳವನ್ನು ಅರಿತವರು ಎರಡರಲ್ಲೂ ಇರುವಂತಹ ಸಾಮಾನ್ಯ ಅಂಶಗಳನ್ನು ಮಾನ್ಯ ಮಾಡಿದರು. ತಾವೋದಲ್ಲಿ ತೋರುವ ರೂಪಕಗಳು ಮತ್ತು ಬೌದ್ಧ ಧರ್ಮದಲ್ಲಿ ತಲೆದೋರುವ ಮಿಥಿಕಗಳು, ನಿಸರ್ಗ ಮತ್ತು ಮನಸ್ಸು; ಈ ಎರಡನ್ನು ಆಪ್ತವಾಗಿ ಅವಲೋಕಿಸುವವರಿಗೆ ಬಿಡಿಸಲಾಗುವ ಒಗಟುಗಳೇ ಆಗಿದ್ದವು.

ಪ್ರಕೃತಿಯ ಅಂತರ್ಯಕ್ಕಿಳಿಯುತ್ತಿದ್ದಂತೆ ಮನಸ್ಸಿನ ವ್ಯವಹಾರದ ಗುಣ ಮತ್ತು ಅವಗುಣಗಳು ತಿಳಿವಳಿಕೆಗೆ ಸ್ಪಷ್ಟವಾಗುತ್ತಾ ಹೋಗುತ್ತದೆ. ಪ್ರಕೃತಿಯ ಒಂದು ಗುಣ ಸ್ವಭಾವದ ಅರಿವು ಸ್ಪಷ್ಟವಾಗುತ್ತಿದ್ದಂತೆ, ಮನಸ್ಸಿನ ವ್ಯವಹಾರಗಳು ಸೃಷ್ಟಿಸುವ ಸ್ಥಿತಿಗಳೂ ತಿಳಿಯುತ್ತಾ ಹೋಗುತ್ತದೆ. ಯಾವಾಗ ನಿಸರ್ಗದ ಧೋರಣೆ ಮತ್ತು ಅದಕ್ಕೆ ಸರಿಯಾದ ಮನಸ್ಸಿನ ಅನುಸರಣೆ ಉಂಟಾಗುತ್ತದೆಯೋ ಆಗಲೇ ಹಿತವಾದ ಭಾವದ ಉದಯವಾಗುತ್ತದೆ. ಆ ಹಿತವಾದ ಭಾವವೇ "ಆಹ್.." ಎಂಬ ಉದ್ಗಾರ! ಅದರಲ್ಲಿ ಸ್ಪರ್ಧೆ ಇಲ್ಲ, ಆಸೆ ಇಲ್ಲ, ಭಯವಿಲ್ಲ. ಆಶಯಗಳಿಲ್ಲ, ನಿರಾಶೆಗಳಿಲ್ಲ. ಹಿಂದಿನ ನೆನಪುಗಳಿಲ್ಲ, ಮುಂದಿನ ಕನಸುಗಳಿಲ್ಲ. ಏಕೆಂದರೆ ನಿಸರ್ಗದಲ್ಲಿ ಇವೇನೂ ಇಲ್ಲ. ಮನಸ್ಸಿನಲ್ಲಿ ಎಲ್ಲವೂ ಇದೆ. ಪ್ರಕೃತಿಯಲ್ಲಿ ಹಿತವಿದೆ, ಮುದವಿದೆ. ಅದನ್ನೇ ಆನಂದ ಎಂದು ನಮ್ಮ ಯಥಾ ಶಕ್ತಿಗೆ ಹೆಸರಿಸಿಕೊಳ್ಳಬಹುದು. ತನ್ನ ಎಲ್ಲಾ ವ್ಯವಹಾರಗಳನ್ನೂ ಉಳಿಸಿಕೊಂಡು, ತಾನು ಹೊಂದಿರುವ ಧೋರಣೆಗಳಲ್ಲಿ ಏನನ್ನೂ ಬದಲಾವಣೆ ಮಾಡಿಕೊಳ್ಳದೇ ಅದೇ ಆನಂದವನ್ನು ಮನಸ್ಸು ಪಡೆದುಕೊಳ್ಳಲು ಯತ್ನಿಸುತ್ತಾ ಹೋಗುತ್ತಿದ್ದಂತೆ ಸಂಘರ್ಷಗಳು ಉಂಟಾಗುತ್ತದೆ. ಏಕೆಂದರೆ ಮುಖ್ಯವಾಗಿ ಯಾವುದರಿಂದ ಮುಕ್ತವಾಗಬೇಕೋ ಅದರಿಂದ ಬಿಡುಗಡೆ ಹೊಂದದೇ ಪರಿಸ್ಥಿತಿಯನ್ನು ಮತ್ತಷ್ಟು ವಿಕೋಪಕ್ಕೆ ಕೊಂಡೊಯ್ಯುತ್ತದೆ. ವಿಕೋಪಕ್ಕೆ ಹೋಗಿ ವಿಕೃತಗೊಂಡ ಪರಿಸ್ಥಿತಿಯನ್ನೇ ನರಕ ಎಂದು ಹೆಸರಿಸುವುದು. ನೈಸರ್ಗಿಕವಾಗಿ ಹಿತವಾಗಿ, ಮುದವಾಗಿ ಆನಂದವನ್ನು ಹೊಂದುವುದನ್ನೇ ಸ್ವರ್ಗ ಎಂದು ಹೆಸರಿಸುವುದು. ಒಂದಷ್ಟು ದೀರ್ಘವಾಗಿ ತಾವೋ ಒಳಗೆ ನಿಲ್ಲು[illegible] ಚೀನಿಯರ ಸ್ವರ್ಗ ನರಕಗಳ ಕಡೆ ನೋಡಿದರೆ ನೈಸರ್ಗಿಕವಾಗಿರುವುದೇ ಸ್ವರ್ಗ, ಅನೈಸರ್ಗಿಕವಾಗಿರುವುದೇ ನರಕ ಎಂದು ತಿಳಿಯುತ್ತದೆ. ■

ಗಣಪತಿ ಪ್ರಾಮಾಣಿಕನಾದರೆ ಅಪ್ರಾಮಾಣಿಕ ಯಾರು?

ಗಣಪತಿಯನ್ನು ಪ್ರಾಮಾಣಿಕ ನಿಷ್ಠಾವಂತ ಅಧಿಕಾರಿ ಎನ್ನುವುದಾದರೆ ಭಾರತದ ಎಲ್ಲಾ ನೂರಕ್ಕೆ ನೂರು ಪೊಲೀಸ್ ಅಧಿಕಾರಿಗಳೂ ಪ್ರಾಮಾಣಿಕರು ಎಂದು ಘಂಟಾಘೋಷವಾಗಿ ಹೇಳಬಹುದು. ಬೆಂಗಳೂರಿನ ಫಲವತ್ತಾದ ಪೊಲೀಸ್ ಸ್ಟೇಷನ್ನುಗಳನ್ನು ಕೋಟಿ ಕೋಟಿ ರೂಪಾಯಿಗಳಿಗೆ ಹರಾಜು ಹಾಕುತ್ತಿದ್ದ ಯಡಿಯೂರಪ್ಪ ಶೋಭಾ ಕರಂದ್ಲಾಜೆ, ಸದಾನಂದ ಗೌಡ ಮತ್ತು ಜೆಡಿಎಸ್‌ನ ಕುಮಾರಸ್ವಾಮಿ ಇವರೆಲ್ಲಾ ಗಣಪತಿಗೆ ಅಷ್ಟು ಪ್ರಾಮಾಣಿಕತೆಯ ಸರ್ಟಿಫಿಕೇಟ್ ಕೊಡುತ್ತಿರುವುದು ಆಶ್ಚರ್ಯವಲ್ಲ.



ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾರ ಕೊಲೆಗಾರ ನರೇಂದ್ರ ಶೆಣೈ ಪೊಲೀಸರಿಗೆ ಮೂರು ತಿಂಗಳುಗಳ ಕಾಲ ಚಳ್ಳೆ ಹಣ್ಣು ತಿನ್ನಿಸಲು ಸಾಧ್ಯವಾಗಿದ್ದು ಅವನಿಗೆ ಮಂಗಳೂರಿನ ಐಜಿಪಿ ಆಫೀಸಿನ ಸಿಬ್ಬಂದಿಯೇ ಗುಟ್ಟಾಗಿ ಪೊಲೀಸರ ತಂತ್ರಗಳನ್ನು ಲೀಕ್ ಮಾಡುತ್ತಿದ್ದುದು. ಹಾಗಾದರೆ ಮಂಗಳೂರಿನ ಐಜಿಪಿ ಆಫೀಸಿನಿಂದಲೇ ಈ ಮಾಹಿತಿ ನರೇಂದ್ರ ಶೆಣೈಗೆ ತಿಳಿಸುತ್ತಿದ್ದವರು ಯಾರು ಎಂದು ಕೆದುಕಿದಾಗ ಅದೇ ಐಜಿ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಡಿವೈಎಸ್‌ಪಿ ಗಣಪತಿಯತ್ತ ಎಲ್ಲರ ಅನುಮಾನ ಹೋಗಿತ್ತು. ನರೇಂದ್ರ ಶೆಣೈಗೆ ಮಾಹಿತಿ ಸೋರಿಕೆ ಮಾಡುತ್ತಿದ್ದವನು ತಾನು ಎಂಬುದು ಜನರಿಗೆ ಸಂಶಯ ಬಂದಿದೆ ಎಂದು ಗಣಪತಿಗೆ ಗೊತ್ತಾದಾಗ ಅವರಿಗೆ ಭಾರಿ ಮಾನಸಿಕ ಒತ್ತಡ ಉಂಟಾಗಿತ್ತು ಎಂದು ಇಲಾಖೆಯ ಒಳಗಿನವರೇ ಹೇಳುತ್ತಿದ್ದಾರೆ.

ಇನ್ನು ಗಣಪತಿಯನ್ನು ಪ್ರಾಮಾಣಿಕ ದಕ್ಷ ನಿಷ್ಠಾವಂತ ಅಧಿಕಾರಿ ಎಂದು ಬಿಜೆಪಿಯವರು ಹೊಗಳುತ್ತಿದ್ದಾರೆ. ಹಾಗಾದರೆ ಬಿಜೆಪಿಯವರ ಪ್ರಾಮಾಣಿಕತೆಯ ಮಾನದಂಡವೇನು? ರಘುಪತಿ ಭಟ್ಟನ ಹೆಂಡತಿಯ ಸಂಶಯಾತ್ಮಕ ಮರಣವನ್ನು ಮುಚ್ಚಿಹಾಕಲು ಸಹಾಯ ಮಾಡಿದ ಜಯಂತ ಶೆಟ್ಟಿ, ಯಡಿಯೂರಪ್ಪರ ಹೆಂಡತಿಯ ಅನುಮಾನಾಸ್ಪದ ಮರಣವನ್ನು ಮುಚ್ಚಿಹಾಕಿದ ಶಿವಮೊಗ್ಗದ ಪೊಲೀಸ್ ಅಧಿಕಾರಿ, ಬಳ್ಳಾರಿಯಲ್ಲಿ ಗಣಿಧಣಿಗಳಿಗೆ ಲೂಟಿ ಹೊಡೆಯಲು ಹಾಗೂ ಎದುರಾಳಿಗಳನ್ನು ಮುಗಿಸಲು ಸಹಾಯ ಮಾಡಿದ ಬಳ್ಳಾರಿಯ ಪೊಲೀಸ್ ಅಧಿಕಾರಿಗಳು, ಇವರೆಲ್ಲಾ ಅಷ್ಟಿಷ್ಟ ಪ್ರಾಮಾಣಿಕರು ತಾನೇ? ಅಮಿತ್ ಶಾನಿಗೆ ಹತ್ತಾರು ನಕಲಿ ಎನ್‌ಕೌಂಟರ್ ಮಾಡಲು ಸಹಾಯ ಮಾಡಿದ ಗುಜರಾತಿನ ಪೊಲೀಸ್ ಅಧಿಕಾರಿಗಳು ಹಾಗೂ ಮಧ್ಯ ಪ್ರದೇಶದಲ್ಲಿ ವ್ಯಾಪಮ್ ಹಗರಣಕ್ಕೆ ಸಂಬಂಧಿಸಿದ 52 ಜನರ ಕೊಲೆಗಳನ್ನು ಮುಚ್ಚಿಹಾಕಿದ ಮ.ಪ್ರ. ಪೊಲೀಸ್ ಅಧಿಕಾರಿಗಳಂತೂ ಜಗತ್ತಿನಲ್ಲೇ ಅತೀ ಹೆಚ್ಚು ಪ್ರಾಮಾಣಿಕರು! ಬೆಂಗಳೂರಿನಲ್ಲೊಂದು ನಕಲಿ ಎನ್‌ಕೌಂಟರ್ ಮಾಡಿದ ಆರೋಪವಿದ್ದ ಗಣಪತಿ ನಿಜವಾಗಿ ಗುಜರಾತಿನಲ್ಲಿ ಇದ್ದಿದ್ದರೆ ಅವರೂ ಮೋದಿ ಮತ್ತು ಅಮಿತ್ ಶಾಗೆ ತುಂಬಾ ಹತ್ತಿರವಾಗಿರುತ್ತಿದ್ದರು ಹಾಗೂ ಅನೇಕ ಪ್ರಶಸ್ತಿ ಮತ್ತು ದೊಡ್ಡ ಬಡ್ತಿ ಪಡೆಯುತ್ತಿದ್ದುದು ಖಚಿತ.

ಇನ್ನು ಬಿಜೆಪಿಯ ದೃಷ್ಟಿಯಲ್ಲಿ ಅಪ್ರಾಮಾಣಿಕರು ಮತ್ತು ಅದಕ್ಷರು ಯಾರು ಗೊತ್ತೇ? ಬಿಜೆಪಿಯವರ ಬ್ರಹ್ಮಾಂಡ ಹಗರಣಗಳನ್ನು ಹೊರಗೆಳೆದ ಲೋಕಾಯುಕ್ತ ಸಂತೋಷ್ ಹೆಗಡೆ ಅತಿದೊಡ್ಡ ಅಪ್ರಾಮಾಣಿಕರು, ಜತೆಗೆ ಅವರಿಗೆ ಸಮರ್ಥವಾಗಿ ಸಹಾಯ ಮಾಡಿದ ಮಧುಕರ್ ಶೆಟ್ಟಿ ಮತ್ತು ದತ್ತಾ ಇವರು ಬಿಜೆಪಿಯ ಮಾನದಂಡದಲ್ಲಿ ಅತ್ಯಂತ ನಿಷ್ಪ್ರಯೋಜಕರು.

ಕೆ.ಜೆ.ಜಾರ್ಜ್ ಅವರ ರಾಜೀನಾಮೆ ಹಾಗೂ ಮಡಿಕೇರಿ ಕೋರ್ಟ್ ಉಳಿದ ಎರಡು ಅತ್ಯಂತ ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶ ಕೊಟ್ಟಿರುವುದರಿಂದ ಎಲ್ಲೆಡೆ ಒಂದು ತಪ್ಪು ಸಂದೇಶ ಹೋಗಿದೆ. ಅದೇನೆಂದರೆ ಯಾವುದೇ ಸರಕಾರಿ ಇಲಾಖೆಗಳಲ್ಲಿ ಅಥವಾ ಬ್ಯಾಂಕುಗಳಲ್ಲಿ ಯಾವುದೇ ಸಿಬ್ಬಂದಿ ಎಷ್ಟೇ ಭ್ರಷ್ಟನಾಗಿರಲಿ, ಎಷ್ಟೇ ಕೆಲಸಗಳ್ಳನಾಗಿರಲಿ ಅಥವಾ ಎಷ್ಟೇ ಘೋರ ಪಾತಕಗಳನ್ನು ಮಾಡಿ ತನ್ನ ಅಧಿಕಾರದ ಭಯಂಕರ ದುರುಪಯೋಗ ಮಾಡಿಕೊಂಡಿರಲಿ, ಅವರ ವಿರುದ್ಧ ಮೇಲಧಿಕಾರಿಗಳು ಯಾವುದೇ ಶಿಸ್ತು ಕ್ರಮ ಕೈಗೊಳ್ಳುವಂತಿಲ್ಲ ಮತ್ತು ಅವರನ್ನು ಯಾರೂ ತರಾಟೆಗೆ ತೆಗೆದುಕೊಳ್ಳುವಂತಿಲ್ಲ ಇಲ್ಲದಿದ್ದರೆ ಅದನ್ನು ಮಾನಸಿಕ ಕಿರುಕುಳ ಎಂದು ಪರಿಗಣಿಸಿ ಆ ದುಷ್ಟ ಅಧಿಕಾರಿಯ ಬೆನ್ನಿಗೆ ರಾಜಕೀಯ ಪಕ್ಷಗಳು ನಿಲ್ಲುತ್ತವೆ ಮಾತ್ರವಲ್ಲ ಸ್ಥಾಪಿತ ಹಿತಾಸಕ್ತಿಗಳು ನ್ಯಾಯದಾನ ವ್ಯವಸ್ಥೆಯನ್ನೂ ತಿರುಚಿ ಪಳಗಿಸಲು ಸಾಧ್ಯ ಎಂಬ ಸಂದೇಶ ಜನರಿಗೆ ಹೋಗಿದೆ!



-ವೀರಪ್ಪ ಡಿ.ಎನ್. ಮಡಿಕೇರಿ.

ಚಿಡ್ಡಿಗಳಿಗೆ ಕಲ್ಲಪ್ಪ ಯಾಕೆ ಬೇಡವಾದರು?

ಪತಿಯ ಅಕಾಲಿಕ ಮರಣದಿಂದ ದುಃಖಿತರಾಗಿರುವ ಗಣಪತಿಯ ಪತ್ನಿ ಪಾವನಾರ ಭಾವನೆಗಳನ್ನು ಗೌರವಿಸುತ್ತಲೇ ಒಂದು ಮುಖ್ಯ ವಿಷಯ ಹೇಳಬೇಕಾಗಿದೆ. ಸಿಬಿಐ ತನಿಖೆ ಮತ್ತು ನ್ಯಾಯಾಂಗ ತನಿಖೆ ಎರಡೂ ಏಕಕಾಲಕ್ಕೆ ಸಾಧ್ಯವಿಲ್ಲ. ಈಗಾಗಲೇ ಸರಕಾರ ನ್ಯಾಯಾಂಗ ತನಿಖೆಗೆ ಆದೇಶ ಕೊಟ್ಟು ನಿವೃತ್ತ ನ್ಯಾಯಾಧೀಶ ಕೆ.ಎನ್.ಕೇಶವ ನಾರಾಯಣ ಇವರನ್ನು ನೇಮಿಸಿ ಆದೇಶ ಹೊರಡಿಸಿದೆ. ಯಾವಾಗಲೂ ಉಳಿದೆಲ್ಲ ರೀತಿಯ ತನಿಖೆಗಳಿಗಿಂತ ನ್ಯಾಯಾಂಗ ತನಿಖೆಯೇ ಹೆಚ್ಚು ವಿಶ್ವಾಸಾರ್ಹವೆಂದು ಭಾರತದಲ್ಲಿ ಪರಿಗಣಿಸಲಾಗಿದೆ. ಹೀಗಿರುವಾಗ ಪಾವನಾ ಹೇಳಿಕೆ ಹಿಂದೆ ಸಂಘಿಗಳ ಕುತ್ಸಿತ ಕೈಗಳ ಕೈವಾಡವಿರುವುದು ಸ್ಪಷ್ಟ. ಏಕೆಂದರೆ ಸಿಬಿಐ ಇಂದು ಮೋದಿ ಸರ್ಕಾರದ ಕೈಗೊಂಬೆಯಾಗಿದೆ. ಹಾಗಾಗಿ ಸಿಬಿಐಗೆ ಈ ಪ್ರಕರಣದ ತನಿಖೆ ಕೊಟ್ಟರೆ ಅದರ ತನಿಖಾ ವರದಿಯನ್ನು ತಮಗೆ ಬೇಕಾದಂತೆ ತಿರುಚಬಹುದೆಂಬುದು ಸಂಘಿಗಳ ಲೆಕ್ಕಾಚಾರ.




ಆದರೆ ಚಿಕ್ಕಮಗಳೂರಿನ ಡಿವೈಎಸ್‌ಪಿ ಕಲ್ಲಪ್ಪನವರ ಆತ್ಮಹತ್ಯೆ ಬಗ್ಗೆ ಸಂಘಿಗಳು ಸಿಬಿಐ ತನಿಖೆಗೆ ಯಾಕೆ ಒತ್ತಾಯಿಸುತ್ತಿಲ್ಲ ಗೊತ್ತೇ? ಯಾಕೆಂದರೆ ಅಮಾಯಕ ಕಲ್ಲಪ್ಪನವರ ಮರಣಕ್ಕೆ ಬಜರಂಗಿ ಖಾಂಡ್ಯ ಪ್ರವೀಣ್ ಭಟ್ ನೇರ ಹೊಣೆಯಾಗಿದ್ದಾನೆ. ಮೇಲಾಗಿ ಈ ಪ್ರಕರಣದ ತನಿಖೆ ನಡೆದರೆ ಕ್ರಿಕೆಟ್ ಬೆಟ್ಟಿಂಗ್ ಜಾಲದಲ್ಲಿ ಸಿಲುಕಿರುವ ರವಿ ಸಹಿತ ಅನೇಕ ಸಂಘ ಪರಿವಾರದವರ ಹೂರಣ ಹೊರಬೀಳುತ್ತದೆ.


ಗಣಪತಿಯ ಆತ್ಮಹತ್ಯೆಯ ತನಿಖೆ ಸಿಬಿಐಗೆ ಕೊಡುವುದಾದರೆ ಗಣಪತಿಗೆ ಸಂಬಂಧಿಸಿದ ಈ ಕೆಳಗಿನ ಪ್ರಕರಣಗಳ ತನಿಖೆಗಳನ್ನೂ ಸಿಬಿಐಗೆ ಕೊಡಲೇಬೇಕು. ಮೊದಲನೆಯದಾಗಿ ಬೆಂಗಳೂರಿನ ಯಶವಂತಪುರ ಠಾಣೆಯಡಿ ಗಣಪತಿ ನಡೆಸಿರುವ ಪ್ರಶಾಂತ ಎಂಬವನ ನಕಲಿ ಎನ್‌ಕೌಂಟರ್ ಪ್ರಕರಣವನ್ನೂ ಸಿಬಿಐಗೆ ಕೊಡಬೇಕು. ಅದೇ ಪ್ರಕಾರ ಒಬ್ಬ ಉದ್ಯಮಿಯಿಂದ ಯಾರೋ ಕಳ್ಳರು ಎಗರಿಸಿದ್ದ 1.56 ಕೋಟಿ ರೂಪಾಯಿ ಹಾಗೂ ಒಂದು ಆಭರಣ ಮಳಿಗೆಯಲ್ಲಿ ಆದ ದರೋಡೆಯಲ್ಲಿ ದರೋಡೆಕೋರರಿಂದ ಕೋಟ್ಯಾಂತರದ ಆಭರಣ ಮರು ವಶಪಡಿಸಿಕೊಂಡ ನಂತರ ನಗದು ಮತ್ತು ಆಭರಣಗಳಲ್ಲಿ ಹೆಚ್ಚಿನ ಪಾಲನ್ನು ಪೊಲೀಸ್ ರಿಕಾರ್ಡಿನಲ್ಲಿ ತೋರಿಸದೇ ಗಣಪತಿ ಗುಂಪಿನವರೇ ಗುಳುಂ ಮಾಡಿದ್ದರು. ಇದೂ ಸಹ ಸಿಬಿಐ ತನಿಖೆಗೆ ಒಳಪಡಲಿ.

ಯಶವಂತಪುರ ಠಾಣೆಯಡಿ ವಿವಿಧ ಅಕ್ರಮ ದಂಧೆಗಳಿಂದ ತಿಂಗಳಿಗೆ 25 ರಿಂದ 30 ಲಕ್ಷದವರೆಗೆ ಮಾಮೂಲು ಸಿಗುತ್ತದೆ. ಅಂದರೆ ವಾರ್ಷಿಕ ಸುಮಾರು ಮೂರು ಕೋಟಿಗೂ ಮಿಕ್ಕಿ ಲಂಚ ಅಲ್ಲಿ ಸಿಗುತ್ತದೆ ಮತ್ತು ಅದು ಮೇಲಧಿಕಾರಿಗಳಲ್ಲಿ ಹಾಗೂ ಸ್ಥಳೀಯ ಶಾಸಕ-ಮಂತ್ರಿಗಳಲ್ಲಿ ಬಟವಾಡೆಯಾಗುತ್ತದೆ. ಗಣಪತಿಯ ಅವಧಿಯಲ್ಲಿ ಅಲ್ಲಿಯ ಶಾಸಕಿ ಆಗಿದ್ದವರು ಶೋಭಾ ಕರಂದ್ಲಾಜೆ ಮತ್ತು ಅವರ ಆದೇಶದ ಮೇರೆಗೆಯೇ ಗಣಪತಿಯನ್ನು ಮಂಗಳೂರಿನಿಂದ ಫಲವತ್ತಾದ ಯಶವಂತಪುರಕ್ಕೆ ಬಿಜೆಪಿ ಸರಕಾರ ಪೋಸ್ಟ್ ಮಾಡಿದ್ದು. ಹಾಗಾಗಿ ಗಣಪತಿ ತನ್ನ ಇಷ್ಟು ದೊಡ್ಡ ಲಂಚದ ಆದಾಯದಲ್ಲಿ ಸ್ಥಳೀಯ ಶಾಸಕಿಗೆ ಹಾಗೂ ತನ್ನ ಗಾಡ್‌ಫಾದರ್ ಕಲ್ಲಡ್ಕ ಹೆಡ್ ಆಫೀಸಿಗೆ ಎಷ್ಟು ಮಾಮೂಲು ಪ್ರತಿ ತಿಂಗಳು ಮುಟ್ಟಿಸುತ್ತಿದ್ದರು ಎಂಬುದನ್ನೂ ಸಿಬಿಐ ತನಿಖೆ ಮಾಡಲಿ.

ಅದಕ್ಕಿಂತ ಅಮಾನವೀಯ ಪ್ರಕರಣವೆಂದರೆ ಅದೇ



ಪ್ರವೀಣ್ ತೊಗಾಡಿಯಾ ಅವರು ಭೇಟಿ ನೀಡಿದ್ದಾಗ ಅವರ ಜತೆ ಖಾಂಡ್ಯ ಪ್ರವೀಣ್ (ತೊಗಾಡಿಯಾ ಅವರ ಎಡಬದಿಗೆ ಇರುವಾತ). ಕೃಪೆ: ಪ್ರಜಾವಾಣಿ




ಗಣಪತಿ ಜಯಲಕ್ಷ್ಮಿ ಎಂಬ ಅಮಾಯಕ ಹೆ... ಮೇಲೆ ಸುಳ್ಳು ಕೇಸು ಜಡಿದು ಲಾಕಪ್ಪಿನಲ್ಲಿ ಹಾಕಿ... ಗಂಡ ಅವಮಾನದಿಂದ ಆತ್ಮಹತ್ಯೆ ಮಾಡಿಕೊಳ್ಳ... ಮಾಡಿದ್ದರ ಬಗ್ಗೆಯೂ ಸಿಬಿಐ ತನಿಖೆ ಆಗಲಿ. ಇದ... ನೈತಿಕ ಹೊಣೆ ಕೇವಲ ಗಣಪತಿ ಮಾತ್ರವಲ್ಲ... ರಕ್ಷಣೆಗೆ ನಿಂತ ಅವರ ಗಾಡ್‌ಮದರ್ ಶೋಭ ಕರಂ... ಮತ್ತು ಕಲ್ಲಡ್ಕ ಭಟ್ಟ ಇಬ್ಬರೂ ಹೊರಬೇಕು. ಕ... ಶ್ರೀರಾಮ ಮಂದಿರ ಶಾಲೆಗೂ ಗಣಪತಿಯ ಕಡೆ... ಲಕ್ಷಗಟ್ಟಲೆ ಲಂಚದ ಹಣ ಹರಿದುಬಂದಿದೆ... ಆರೋಪಗಳಿವೆ.

ಗಣಪತಿಯವರ ಈ ಎಲ್ಲಾ ವಿಷಯವನ್ನೂ ತನಿಖೆಯಲ್ಲಿ ಒಳಗೊಳ್ಳುವಂತೆ ಮಾಡಬೇಕಿದೆ.

-ರಾಮಕೃಷ್ಣ ಕುಲಾಲ್, ಬೆಂಗ...


ಖಾವಿಯಿಂದ ಖಾಕಿಗೆ (ಕು)ತಂತ್ರ ವರ್ಗಾಯಿಸಿದ ಚಿಡ್ಡಿಗಳು

ಸ್ವಾತಂತ್ರ್ಯ ಹೋರಾಟದಂತಹ ನೈಜ ದೇಶ... ಹಿನ್ನೆಲೆಯಾಗಲೀ ದೇಶದ ಸಮಗ್ರತೆಯನ್ನು ಎತ್ತಿಹಿಡಿ... ಜಾತ್ಯತೀತ ಅಥವ ಧರ್ಮಾತೀತ ಸಹಿಷ್ಣು... ಹಿನ್ನೆಲೆಯಾಗಲೀ ಇರದ ಆರೆಸ್ಸೆಸ್ಸಿನ ರಾಜ... ಮುಖವಾಡವಾದ ಬಿಜೆಪಿ ಈತನಕ ದೇಶ... ರಾಜಕೀಯದ ಪಗಡೆಯಾಡಿದ್ದು ಖಾವಿಧಾ... ಮುಖಾಂತರವೇ ಎನ್ನುವುದು ಎಲ್ಲರಿಗೂ ಗೊತ್ತಿರು... ಸಂಗತಿ. ಸಂತ-ಸನ್ಯಾಸಿಗಳನ್ನು ಛೂಬಿಟ್ಟು ರಾಮನ ... ಬೇಳೆ ಬೇಯಿಸಿಕೊಂಡು ಅಧಿಕಾರಕ್ಕೇರಿದ ನಂತರ ... ಮೆಟ್ಟಿಲಾದಂತಹ ಖಾವಿಧಾರಿಗಳನ್ನೇ ನಡುನೀರಲ್ಲಿ ಕೈ... (ಕೊಟ್ಟ ಮಾತನ್ನು ಈತನಕ ನಡೆಸಿಕೊಡದ) ... ನಂಬಿಕೆಯನ್ನೂ ಕಳಕೊಂಡ ಚಿಡ್ಡಿಗಳ ಮೇಲೆ ಬರ... ಖಾವಿಧಾರಿಗಳಿಗೆ ಯಾವ ವಿಶ್ವಾಸವೂ ಇದೀಗ ಉ... ಈದ್ಗಾ ಮೈದಾನದಲ್ಲಿ ಬಾವುಟ ಏರಿಸುವ ... ಎಲ್ಲೋ ನಡೆದ ಮತಾಂತರ ಗಲಾಟೆ, ... ಹೆಸರಿನ ಗಲಾಟೆ ಪ್ರಚೋದನೆಗಳಲ್ಲಿ ... ಖಾವಿಧಾರಿಗಳನ್ನು ಮನಸೋ ಇಚ್ಛೆ ಬಳಸಿ... ಚಿಡ್ಡಿಗಳು ಕೊನೆಗೆ ಯಾವ ಆಧ್ಯಾತ್ಮದ ಸೋ... ಇಲ್ಲದ ಆದರೆ ಖಾವಿ ವೇಷ ಧರಿ... ಪಂಚಾಯತ್ ಸದಸ್ಯೆಯಾಗಲೂ ಲಾಯ... ಉಮಾ ಭಾರತಿ, ಆದಿತ್ಯನಾಥ, ಪ್ರಾಚಿಯ... ಪಾಚಿ ಕೊಳೆ ಮೆತ್ತಿಕೊಂಡ ಖಾವಿಗಳಿಗೆ ... ತನ್ನ ಹಳೆಯ ಋಣ ಸಂದಾಯದ ನೆಪಕ್ಕೋಸ... ಎತ್ತರಸ್ಥಾನದಲ್ಲಿಟ್ಟು ಸಾಕುತ್ತಿವೆಯಾದರೂ...



ಪಾತಾಳ ಎಂದರೆ ಆಫ್ರಿಕಾ ಅಂತಾರೆ ಚಿಡ್ಡಿಗಳು

ಮೊನ್ನೆ ಮೋದಿಯವರು ಆಫ್ರಿಕಾ ಖಂಡದ ಕೀನ್ಯಾ ದೇಶಕ್ಕೆ ಹೋಗಿದ್ದರು. ಆದರೆ ಅಲ್ಲಿ ಎರಡು ಸಾವಿರ ವರ್ಷಕ್ಕೆ ಮುಂಚೆಯೇ ಹಿಂದೂ ಧರ್ಮ ಇತ್ತು ಎಂಬ ಪುರಾವೆಯ ಬಗ್ಗೆ ಅವರು ಉಲ್ಲೇಖಿಸದಿರುವುದು ಆಶ್ಚರ್ಯ. ಯಾಕೆಂದರೆ 50 ವರ್ಷಗಳ ಹಿಂದೆ ಕೀನ್ಯಾದ ಒಬ್ಬ ದೊಡ್ಡ ಉದ್ಯಮಿ ಭಾರತಕ್ಕೆ ಬಂದಿದ್ದಾಗ ದಕ್ಷಿಣ ಭಾರತದ ಅದ್ಭುತ ಶಿಲ್ಪಗಳನ್ನು ನೋಡಿ, ತಮಿಳುನಾಡಿನ ಕೆಲವು ನುರಿತ ಶಿಲ್ಪಕಾರರನ್ನು ಕೀನ್ಯಾಕ್ಕೆ ಕರೆದುಕೊಂಡು ಹೋಗಿ ಅಲ್ಲಿಯ ಹಳ್ಳಿಯೊಂದರಲ್ಲಿರುವ ತಮ್ಮ ಫಾರ್ಮ್ ಹೌಸಿನಲ್ಲಿ ಅನೇಕ ಭಾರತೀಯ ದೇವರುಗಳ ಮೂರ್ತಿಗಳನ್ನು ಕೆತ್ತಿಸಿ ತಮ್ಮ ತೋಟದಲ್ಲಿ ನಿಲ್ಲಿಸಿದ್ದರಂತೆ. ಅದರಲ್ಲಿ ಸಪ್ತ ಋಷಿಗಳ ಮೂರ್ತಿಗಳು, ವಿಷ್ಣುವಿನ ದಶಾವತಾರದ ಮೂರ್ತಿಗಳು ಹಾಗೂ ಬಿಂದಿಗೆಯಿಂದ ನೀರು ಸುರಿಸುತ್ತಿರುವ ಕಾವೇರಿಯಂತಹ ಪ್ರತಿಮೆ ಪ್ರಮುಖ. ನವಗ್ರಹ ಮೂರ್ತಿಗಳನ್ನೂ ಅಲ್ಲಿ ಕಡೆದು ನಿಲ್ಲಿಸಿದ್ದರು. ಇವನ್ನೆಲ್ಲಾ ಅವನು ಮಾಡಿದ್ದು ಭಕ್ತಿಯಿಂದಾಗಿರದೇ ಕೇವಲ ಅವನ ತೋಟದ ಸೌಂದರ್ಯಕ್ಕಾಗಿ ಮಾಡಿದ್ದು. ಆದರೆ ಅಲ್ಲಿ ನಂತರ ಘಟಿಸಿದ ಒಂದು ಭೂಕಂಪದಲ್ಲಿ ಆ ಉದ್ಯಮಿಯ ಫಾರ್ಮ್ ಹೌಸ್ ಪೂರ್ಣ ಬಿದ್ದು ಹೋಗಿ ಈ ಮೂರ್ತಿಗಳು ಸಹ ಮಣ್ಣಿನಡಿ ಸೇರಿದವಂತೆ. ಆ ಉದ್ಯಮಿ ತೀರಿಕೊಂಡ ನಂತರ ಆ ಫಾರ್ಮ್‌ಹೌಸ್ ನೋಡಿಕೊಳ್ಳಲು ಯಾರೂ ಇಲ್ಲದ್ದರಿಂದ ಅಲ್ಲಿ ಕಾಡು ಬೆಳೆದಿದೆ.



ಮೊದಲು ಜಗತ್ತಿನ ಏಳೂ ಖಂಡಗಳಲ್ಲಿ ಹಿಂದೂ ಧರ್ಮವೇ ಇತ್ತು ಹಾಗೂ ದಕ್ಷಿಣ ಅಮೆರಿಕದ ಚಿಲಿ ಪೇರು ಬ್ರಾಜಿಲ್ ಅರ್ಜೆಂಟೀನಾ ದೇಶಗಳಲ್ಲಿ ಇಪ್ಪತ್ತೈದು ಸಾವಿರ ವರ್ಷಗಳ ಹಿಂದೆ ಬಲಿ ಚಕ್ರವರ್ತಿಯ ರಾಜ್ಯವಿತ್ತು ಎಂದು ಸಂಘಿಗಳ ಮೀಡಿಯಾ ಅರಚುತ್ತಿದೆ. ಬಲಿ ಚಕ್ರವರ್ತಿಯ ಬಗ್ಗೆ ಸಂಘಿಗಳಿಗೆ ಈಗ ಒಮ್ಮೆಲೇ ಪ್ರೀತಿ ಉಮ್ಮಳಿಸಿ ಬರಲು ಮೂಲಕಾರಣ ವೈದಿಕರು ತಮ್ಮ ಒಬ್ಬ ಬೆತ್ತಲೆ ಕುಳ್ಳನನ್ನು ಮುಂದಿಟ್ಟುಕೊಂಡು ಬಂದು ಮೋಸದಿಂದ ಮಹಾಸಾತ್ವಿಕ ಪ್ರಜಾಪ್ರಿಯ ಧರ್ಮಿಷ್ಠ ಬಲೀಂದ್ರನನ್ನು ಕೊಂದಿರುವ ಕಥೆ ಈಗಿನ ಪ್ರಗತಿಪರರಿಂದ ಟೀಕೆ ಒಳಗಾಗುತ್ತಿರುವುದು. ಇದನ್ನು ಪರಿಹರಿಸಲು ಪಾತಾಳ ಎಂದರೆ ದಕ್ಷಿಣ ಅಮೆರಿಕವಾಗಿತ್ತು ಹಾಗೂ ಗಿಡ್ಡ ವಾಮನ ದೇವರು ಬೆತ್ತಲೆಯಾಗಿ ಬಂದು ಬಲಿ ಚಕ್ರವರ್ತಿಯನ್ನು ದಕ್ಷಿಣ ಅಮೆರಿಕದ ರಾಜನನ್ನಾಗಿ ಮಾಡಿದ್ದನೇ ಹೊರತು ಅವನನ್ನು ಮೋಸದಿಂದ ಕೊಲ್ಲಲಿಲ್ಲ ಎಂಬ ಹೊಸ ಅಜ್ಜಿಕಥೆ ವೈದಿಕರು ಕಟ್ಟಿ ಸೋಷಿಯಲ್ ಮೀಡಿಯಾದಲ್ಲಿ ಹರಿಯಬಿಟ್ಟಿದ್ದಾರೆ.

ಜತೆಗೆ ತಿರುಪತಿಯ ಬಾಲಾಜಿ ದೇವಳ ಮೂಲತಃ ಬಲಿಜೀ (ಬಲೀ... ದೇವಳವಾಗಿದ್ದು ಅಲ್ಲಿಯ ಮೂಲ ಮೂರ್ತಿ ಶ್ರೀನಿವಾಸನದಾಗಿರದೇ ಬಲಿ ಚಕ್ರವರ್ತಿ... ಮೂರ್ತಿ ಆಗಿರುತ್ತದೆ ಎಂದು ಹೆಚ್ಚಿನ ಸಂಶೋಧಕರು ಈಗ ಒಪ್ಪುತ್ತಿದ್ದಾರೆ. ಹಿ... ಇಕ್ಕಟ್ಟಿಗೆ ಸಿಕ್ಕಿರುವ ವೈದಿಕರು ಈಗ ತಾವೂ ಸಹ ಬಲೀಂದ್ರನ ಅಭಿಮಾನಿ... ಎಂದು ಬಿಂಬಿಸಲು ಭಾರಿ ಪ್ರಯತ್ನ ಮಾಡುತ್ತಾ ಅವನಿಗೆ ದಕ್ಷಿಣ ಅಮೆರಿಕದಲ್ಲೊ... (ಕಾಲ್ಪನಿಕ) ರಾಜ್ಯದ ಪಟ್ಟಾಭಿಷೇಕ ಮಾಡಿದ್ದಾರೆ! ಅದರ ಬದಲು ಸಂಘಿಗಳು ... ಕಟ್ಟುಕಥೆಯನ್ನು ಸ್ವಲ್ಪ ಬದಲಿಸಿ, ಆಫ್ರಿಕದ ಉಗಾಂಡದಲ್ಲಿ ಶಂಭೂಕನನ್ನೂ, ನೈಜೀರಿಯಾ... ಏಕಲವ್ಯನನ್ನೂ ಹಾಗೂ ಸೊಮಾಲಿಯಾದಲ್ಲಿ ಕರ್ಣನನ್ನೂ ರಾಜರನ್ನಾಗಿ ಮಾಡಿ ಪು... ಕಾಲದಲ್ಲಿಯೂ ರಾಮ-ಕೃಷ್ಣರು ಹಿಂದುಳಿದ ಜಾತಿಯವರನ್ನು ಉ... ಮಾಡಿದ್ದಾರೆಯೇ ಹೊರತು ಯಾವುದೇ ಅನ್ಯಾಯ ಮಾಡಿರಲೇ... ಎಂದು ಈಗ ವೈದಿಕರು (ವಿತಂಡ) ವಾದಿಸಬಹುದು.

ವೈದಿಕರಿಗೆ ನನ್ನ ಇನ್ನೊಂದು ಪುಕ್ಕಟೆ ಸಲಹೆ ಏನೆಂದರೆ ದ... ಅಮೆರಿಕವನ್ನು ಬಲೀಂದ್ರ ವಾಸಿಸಿದ್ದ ಪಾತಾಳ ಎನ್ನುವ ಬದಲು ಆ... ಖಂಡವನ್ನು ಪಾತಾಳ ಎಂದು ಕರೆದು ಅಲ್ಲಿ ಕರಿಕಪ್ಪು ದ್ರಾವಿಡರ ... ಬಲಿ ಚಕ್ರವರ್ತಿಯ ರಾಜ್ಯವಿತ್ತು ಎಂದು ವಾದಿಸಿ, ಅದಕ್ಕೆ ಸಾಕ್ಷಿಯ... ಆ ಕೀನ್ಯಾ ಉದ್ಯಮಿಯ ಫಾರ್ಮ್ ಹೌಸನ್ನು ಅಗೆದು ದಶಾವ... ಮೂರ್ತಿಗಳನ್ನು ಹೊರತೆಗೆದು ಅವು ಕೇವಲ 50 ವರ್ಷ ಹಳೆಯ... ನಿಜವಾಗಿ ಅವು 50 ಸಾವಿರ ವರ್ಷ ಹಳೆಯವು ಎಂದು ಸಾ... ಆಫ್ರಿಕಾದಲ್ಲಿ ಬಲೀಂದ್ರನ ರಾಜ್ಯವಿತ್ತು ಎಂಬ ತಮ್ಮ ವಾದಕ್ಕೆ ಪು... ಎನ್ನುವಂತೆ ಜಗತ್ತಿಗೆ ತೋರಿಸಬಹುದು.

ವೈದಿಕರೇ ದಯವಿಟ್ಟು ನನ್ನ ಈ ಸಲಹೆ ಪರಿಶೀಲಿಸಿ: ಹಿಂದೂ ಧರ್ಮ ಕೋಟ್ಯಾ... ವರ್ಷ ಹಳೆಯದು ನಿಜ, ಅದು ಡೈನೋಸಾರ್ ಯುಗದಲ್ಲಿಯೇ ಇತ್ತು ಹಾ... ಹಿಂದೂ ವೀರರೇ ಡೈನೋಸಾರುಗಳನ್ನು ಬರಿಗೈಯಿಂದ ಹೊಡೆದು ಕೊಂದು ಅವು... ಪೂರ್ಣ ಸಂತತಿ ನಾಶಮಾಡಿ ಜಗತ್ತನ್ನು ಉಳಿಸಿದ್ದು ಎಂದು ವಾದಿಸಲು ವೈದಿ... ಇದು ಸರಿಯಾದ ಸಂದರ್ಭ. ನಿಜವಾಗಿ 25 ಸಾವಿರ ವರ್ಷಗಳಿಗಿಂತ ಮು... ಮಾನವ ಇನ್ನೂ ಅಲೆಮಾರಿ ಬೇಟೆಗಾರನಾಗಿದ್ದ ಹಾಗೂ ಗುಹೆಗಳಲ್ಲಿ ವಾಸಿಸು... ಎಂಬುದೂ ಹೆಚ್ಚಿನ ಭಾರತೀಯರಿಗೆ ಗೊತ್ತಿಲ್ಲ! ಹಾಗಾಗಿ ಹಿಂದೂಗಳನ್ನು ಇಂತ... ಬುರುಡೆ ಕಥೆಗಳಿಂದ ಮೂರ್ಖರನ್ನಾಗಿಸುವುದು ತುಂಬಾ ಸುಲಭ!

-ಜೆ. ರವಿಕಿರಣ, ಮೈಸೂ...

ಕೋಮುವಾದಿ ಪಕ್ಷದಲ್ಲಿ ಯಾವ ಖಾವಿಗಳಿಗೂ ಹಳೆಯ ಜೋಶ್ ಖಂಡಿತಾ ಇದೀಗ ಉಳಿದಿಲ್ಲವೆನ್ನುವುದು ವಾಸ್ತವ.

ಕಾಂಗ್ರೆಸ್ ಎಷ್ಟೇ ಕೆಟ್ಟದಿರಲಿ ಅದೊಂದು ದೀರ್ಘ ಆಳ್ವಿಕೆಯ ಇತಿಹಾಸವಿರುವ ರಾಷ್ಟ್ರೀಯ ಪಕ್ಷ. ಆದರಿಂದ ದೇಶಕ್ಕೆ ಒಳಿತೇ ಆಗಿಲ್ಲ ಎನ್ನುವುದು ಖಂಡಿತ ಮೂರ್ಖತನದ ಮಾತಾದೀತು. ಕಾಂಗ್ರೆಸ್ ಸ್ವಯಂಕೃತಾಪರಾಧದಿಂದ ಅದರಷ್ಟಕ್ಕೇ ನಾಶಹೊಂದಿದರೂ ಅಥವ ಇಲ್ಲದಿದ್ದರೂ ಈ ದೇಶ ಮಾತ್ರ ತನ್ನದೇ ರೀತಿಯಲ್ಲಿ ಸಾಗುತ್ತಲೇ ಇರುತ್ತದೆ. ಕಾಂಗ್ರೆಸ್‌ನ ಅಸ್ತಿತ್ವದ ಮೇಲೆ ಈ ದೇಶ ಖಂಡಿತ ನಿಂತಿಲ್ಲ, ನಿಂತಿರಲು ಸಾಧ್ಯವೂ ಇಲ್ಲ. ಆದರೆ ರಾಜಕೀಯ ಹಾಗು ಮಾಧ್ಯಮಗಳಲ್ಲಿ ತುಂಬಿಕೊಂಡ ಮೋದಿ ಭಜಕ ಚೆಡ್ಡಿಗಳ ಸ್ಲೋಗನ್ ಆದ ದೇಶದ ಪ್ರಮುಖ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಮುಕ್ತ ಭಾರತ ಎನ್ನುವ



ಪದದಲ್ಲೇ ಸರ್ವಾಧಿಕಾರಿ ಪ್ರಜಾಪ್ರಭುತ್ವ ವಿರೋಧಿ ಮನೋಭಾವ ಎದ್ದು ತೋರುತ್ತದೆ. ಇಂತಹ ವಿರೋಧಪಕ್ಷರಹಿತ ಆಳ್ವಿಕೆಯನ್ನು ಬಯಸುವಿಕೆಯೇ ಹಿಟ್ಲರ್ ಮನಸ್ಥಿತಿಯ ಸರ್ವಾಧಿಕಾರಿ ಧೋರಣೆಯನ್ನೇ ಬಿಂಬಿಸುತದ್ದಲ್ಲವೇ? ಜನರಲ್ಲಿ ಹುಚ್ಚು ಆವೇಶವನ್ನು ಬಿತ್ತಿ ಅಧಿಕಾರಕ್ಕೇರಿದ ಮೋದಿಪಡೆ ಆರಂಭದಲ್ಲಿ ತಮ್ಮ ಕಾಂಗ್ರೆಸ್ ಮುಕ್ತತೆಯನ್ನು ನಿಜವಾಗಿಸುವಂತೆ ತೋರಿಸಿಕೊಂಡರೂ ಜನರ "ಅರ್ಥೈಸುವಿಕೆ"ಯ ಕಾರಣ ಮೋದಿ ಭಜಕರ ಈ ಸಿದ್ಧಾಂತ ಕ್ರಮೇಣ ಉಲ್ಟಾ ಹೊಡೆಯುತ್ತಾ ಬಂತು. ಕಾಂಗ್ರೆಸ್‌ನ ಕುಡಿಯನ್ನು ಆರಂಭದಲ್ಲೇ ವ್ಯವಸ್ಥಿತವಾಗಿ ಚಿವುಟುತ್ತಾ ಬಂದ ಮೋದಿಭಕ್ತರುಗಳ ಆಟ ಯಾವ ಚಾಣಕ್ಯನಿಗೂ ಸಾಟಿಯಾಗದಂತಿತ್ತು. ಕೇಂದ್ರದಲ್ಲಿ ಕಾಂಗ್ರೆಸ್‌ನ ಒಂದೇ ಆಶಾಕಿರಣವೆಂದು ತೋರಿದ ರಾಹುಲ್ ಗಾಂಧಿಯನ್ನು (ಗಾಂಧಿ ಕುಟುಂಬದ ಹೊರತಾಗಿ ಅಧಿಕಾರ ನೀಡಿದರೆ ದೊಡ್ಡ ಸಂಖ್ಯೆಯಲ್ಲಿ ಅರ್ಹ ಹಿರಿಯರು ಇರುವ ಕಾಂಗ್ರೆಸ್‌ನಲ್ಲಿ ಕಚ್ಚಾಟ ಖಂಡಿತ) ಮಾಧ್ಯಮ ಹಾಗು ಸಾಮಾಜಿಕ ಜಾಲತಾಣಗಳು ಒಬ್ಬ ಪೆದ್ದ ಹಾಗು ಜೋಕರ್ ಎಂದು ವ್ಯವಸ್ಥಿತವಾಗಿ ಬಿಂಬಿಸುವಲ್ಲಿ ಯಶಸ್ವಿಯಾದವು (ವಾಸ್ತವವಾಗಿ ರಾಹುಲ್‌ಗಿಂತ ಅವರ ನಾಯಕ ಮೋದಿಯೇ ಪರಮ ದಡ್ಡ ಹಾಗು ಮೂರ್ಖನೆಂದು ಆತನ ಹಲವಾರು ಭಾಷಣಗಳಲ್ಲೇ ಸಾಬೀತಾಗಿವೆ. ಸಭೆಗಳಲ್ಲಿ ವಾಜಪೇಯಿ ನಿದ್ದೆ ಮಾಡುವುದನ್ನು ಮುಚ್ಚಿಟ್ಟು ದಕ್ಷಿಣದ ದೇವೇಗೌಡರ ನಿದ್ದೆಯನ್ನೇ ಹೈಲೈಟ್ ಮಾಡಿ ಅವರನ್ನು 'ನಿದ್ದೇ ಗೌಡ' ಎಂದು ವ್ಯವಸ್ಥಿತವಾಗಿ ದೇಶಾದ್ಯಂತ ಬಿಂಬಿಸಿದ ಕಥೆಯಂತಿದೆ ಇದು) ಮೋದಿ ಚೇಲಾ ಕ್ರಿಮಿನಲ್ ಅಮಿತ್ ಷಾನ ಪಡೆ ಉತ್ತರಾಖಂಡ್, ಅರುಣಾಚಲ ಪ್ರದೇಶ ಮೊದಲಾದೆಡೆ ಸಂವಿಧಾನಬಾಹಿರವಾಗಿ ಕುತಂತ್ರದಿಂದ ಕಾಂಗ್ರೆಸ್ ಕೊಲ್ಲುವ ಆಟವನ್ನು ನಡೆಸಿ ಮುಖಭಂಗವನ್ನು ಅನುಭವಿಸಿತ್ತು, ಅದೀಗ ಕರ್ನಾಟಕದ ಸರದಿ.

ಪ್ರಸ್ತುತ ಭಾರತದ ಕಾಂಗ್ರೆಸ್‌ನ ರಾಜಧಾನಿಯಾಗಿ ತೋರಿಬರುತ್ತಿರುವ ಕರ್ನಾಟಕದಲ್ಲಿ ಕಾಂಗ್ರೆಸ್‌ನ್ನು ಕೊಲ್ಲಲು ಅಮಿತ್ ಷಾನ ಪಡೆ ಬಹಳಷ್ಟು ಹೆಣಗಾಡುತ್ತಿದೆ. ಸಣ್ಣ ಪುಟ್ಟ ಪಕ್ಷಗಳನ್ನು ಹೇಗೋ ಹದ್ದುಬಸ್ತಿನಲ್ಲಿಟ್ಟುಕೊಳ್ಳಬಹುದು ಆದರೆ ಇತಿಹಾಸ ಇರುವ ದೊಡ್ಡ ಪಕ್ಷವಾದ ಕಾಂಗ್ರೆಸ್ಸೇ ಅವರ ಸರ್ವಾಧಿಕಾರದ ಗುರಿ ಮುಟ್ಟಲು ತೊಡಕಾಗಿರುವ ದೊಡ್ಡ ತಡೆಯಾಗಿದೆಯಂತೆ. ವರ್ಷದ ಹಿಂದೆ ಬಿಜೆಪಿ ಸಭೆಯಲ್ಲಿ ಸರಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುವಲ್ಲಿ ನಿಮ್ಮ ಪ್ರಯತ್ನ ಏನೇನೂ ಸಾಲದೆಂದು ಶೆಟ್ಟರ್ ಪಡೆಯನ್ನು ಅಮಿತ್ ಷಾ ಜೋರಾಗಿ ತರಾಟೆಗೆ ತಗೊಂಡಿದ್ದನಂತೆ. ರೆಡ್ಡಿಯ ಹರುಬಿ ಹಣ, ಮಂತ್ರಿಗಳ ರಾಸಲೀಲೆಗಳು, ಜೈಲಿಗೆ ಹೋಗಿಬಂದ ಯಡ್ಯೂರಪ್ಪನ ನಾಯಕತ್ವ ಹೊಂದಿರುವ ಕರ್ನಾಟಕದ ಭ್ರಷ್ಟ ಚೆಡ್ಡಿಗಳನ್ನು ಜನತೆ ಮತ್ತೊಮ್ಮೆ ಪರ್ಯಾಯವಾಗಿ ಆರಿಸುವ ಅಂತಹ ಸಂದರ್ಭವೇನೂ ಈಗ ರಾಜ್ಯದಲ್ಲಿಲ್ಲ, ಆದರೂ ಚೆಡ್ಡಿಗಳು ಚಡ್ಡಿ ಹರಿಯುವಷ್ಟು ಇದೀಗ ಬೊಬ್ಬಿಡುತ್ತಿವೆ. ವಿಚಿತ್ರವೆಂದರೆ ಖಾವಿಗಳ ಮಾಮೂಲಿ ಧಾರ್ಮಿಕ ವಿಚಾರ ಬಿಟ್ಟು, ಈಗ ಖಾಕಿಯ ಬಗ್ಗೆ ಅವು ಮುಖಮಾಡಿವೆ ಎನ್ನುವುದೇ ಹೊಸ ಬದಲಾವಣೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಪೊಲೀಸ್ ಇಲಾಖೆಗೆ ಸಂಬಂಧಿಸಿ ರಾಜಕಾರಣಿಗಳ ಅಪವಿತ್ರ ಮೈತ್ರಿ ಮೇಲಧಿಕಾರಿ ಹಾಗು ರಾಜಕಾರಣಿಗಳ ಕಿರುಕುಳ ಹಾಗು ಭ್ರಷ್ಟಾಚಾರದ ಬಗ್ಗೆ ಯಾರಾದರೂ ಮಾತನ್ನಾಡಿದರೆ ಯಾರಾದರೂ ನಗಬಹುದು. ಯಾಕೆಂದರೆ ಇದೊಂದು ಎಲ್ಲರಿಗೂ ತಿಳಿದಿರುವ ಓಪನ್ ಸೀಕ್ರೆಟ್ ಸಂಗತಿಯೇ ವಿನಹ ಇಲ್ಲಿ ಹೊಸತೇನೂ ಇಲ್ಲ. ದಿಢೀರ್ ಪ್ರಚಾರದ ಆಸೆಗೆ ಬಿದ್ದ ಅನುಪಮಾ ಶೆಣೈ ಸ್ವಲ್ಪ ಸಮಯ ಟೀವಿ-ಫೇಸ್‌ಬುಕ್ ಎಂದು ಕಿತ್ತೂರ ಚೆನ್ನಮ್ಮ ಅಬ್ಬಕ್ಕ ರಾಣಿಯ ಲೆವೆಲ್ಲಿಗೆ ಕ್ರಾಂತಿಕಾರಿಯಾಗಿ ಮಿಂಚಿದರಾದರೂ ನಂತರ ಅವರೇ ನೇಯ್ದುಕೊಂಡ ಬಲೆಯೊಳಗೆ ಅವರೇ ಕರಗಿಬಿಟ್ಟರು. ನಂತರ ನಿರೀಕ್ಷೆಯಂತೆ ಅನುಪಮಾ ಚೆಡ್ಡಿ ವರ್ತುಲದೊಳಗೆ ಕಾಣಿಸಿಕೊಳ್ಳತೊಡಗಿ ಕಲ್ಲಡ್ಕನ ಆಸ್ಥಾನಕ್ಕೂ ಭೇಟಿಕೊಟ್ಟು ಬಂದರು. ಆದರೆ ಅನುಪಮಾ ಕುರಿತ ಸಿಂಪಥಿ ಜನರಲ್ಲಿ ಮೊದಲಿನಂತಿರದ ಕಾರಣ ಚೆಡ್ಡಿಗಳಿಗೆ ಅನುಪಮಾರ ಮೇಲೆ ಇದೀಗ ಅಂಥಾ ಆಸಕ್ತಿಯೇನೂ ಉಳಿದಿಲ್ಲ. ಅನುಪಮಾ ಕೇಸನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಯತ್ನಿಸಿದ ಚೆಡ್ಡಿಗಳಿಗೆ ನಂತರ ದೊಡ್ಡ ಇಡುಗಂಟಾಗಿ ಸಿಕ್ಕದ್ದೇ ಗಣಪತಿ ಆತ್ಮಹತ್ಯೆ ಪ್ರಕರಣ.

ಕರ್ತವ್ಯ ಸಮಯದಲ್ಲಿ ಎದುರಾಳಿಯಿಂದ ಮರಣಿಸಿದ ಮಲ್ಲಿಕಾರ್ಜುನ ಬಂಡೆಯವರ ಪತ್ನಿ ಮೊನ್ನೆ ಅಸೌಖ್ಯದಿಂದ ಮರಣಿಸಿದರು. ಅಲ್ಲೂ ಏನಾದರೂ ಗಿಟ್ಟಬಹುದೇ ಎಂದು ಆ ಸಾವಿನ ಮನೆಯಲ್ಲೂ ಚೆಡ್ಡಿಗಳು ಹಪಹಪಿಸಿದರು (ಆದರೆ ಸಹಕರಿಸ ಹೋಗಲಿಲ್ಲ). ಬಂಡೆಯವರು ನಿಧನರಾದಾಗಲಂತೂ ಗಲ್ಲಿ ಗಲ್ಲಿಗಳಲ್ಲಿ ಬಂಡೆಯವರಿಗೆ ಶ್ರದ್ಧಾಂಜಲಿ ಕೋರಿ ಚೆಡ್ಡಿಗಳು ಫ್ಲೆಕ್ಸ್ ಹಾಕಿ ಜನರನ್ನು ಕಾಂಗ್ರೆಸ್ ವಿರುದ್ಧ ಪ್ರಚೋದಿಸಲು ನೋಡಿದರು. ಡಿಕೆ ರವಿಯವರ ಪ್ರಕರಣದಲ್ಲಂತೂ ನಾಚಿಕೆಗೇಡಿನ ಮಟ್ಟಕ್ಕೆ ಅವರ ಚೀರಾಟ ಹೋಗಿನಿಂತಿತು. ತಿಂಗಳುಗಳ ಹಿಂದೆ ಹಿಮದಲ್ಲಿ ಹೂತು ನಿಧನರಾದ ಕನ್ನಡಿಗ ಹನುಮಂತಪ್ಪನವರ ಬಗ್ಗೆಯೂ ಸೂಲಿಬೆಲೆ ಖೂನಿ ತಲೆಯಂತವರು ಕರುಣಾಜನಕ ಕಥೆಗಳನ್ನು ಹಬ್ಬಿಬಿಟ್ಟರು (ಗಮನಿಸಿ ಇವೆಲ್ಲ ಸತ್ತವರ ಬಗೆಗಿನ ಕಾಳಜಿಯ ಹಿನ್ನೆಲೆಯಿಂದ ಬಂದಂತವುಗಳಲ್ಲ, ಸರಕಾರದ ವಿರುದ್ಧ ಜನರನ್ನು ಎತ್ತಿ ಕಟ್ಟುವ ತಂತ್ರಗಾರಿಕೆ ಅಷ್ಟೆ). ಆದರೆ ಇಂತಹ 'ಕಾಳಜಿ'ಯ ಜನರು ಭಜರಂಗಿಗಳ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡ ಗಣಪತಿಯಂತೆ ಡಿವೈಎಸ್ಪಿಯೇ ಆಗಿದ್ದ ಕಲ್ಲಪ್ಪ ಹಂಡಿಭಾಗ್ ದುರಂತದ ಬಗ್ಗೆ ಚಕಾರವೆತ್ತುವುದೇ ಇಲ್ಲ. ಸೂಲಿಬೆಲೆ ಪುನೀತ ಕಲ್ಲಪ್ಪ ಕರುಣಾಜನಕ ಕಥೆ ಯಾವ ಶೂದ್ರ ಹುಡುಗರ ಮೊಬೈಲುಗಳಲ್ಲಿ ಹರಿದಾಡಲೇ ಇಲ್ಲ. ಆದರೆ ಸ್ವಯಂ ಕೃತಾಪರಾಧದಿಂದ ಬಡ್ತಿಗೆ ಬ್ರೇಕ್ ಹಾಕಿಸಿಕೊಂಡು ಬೇಸರಿಸಿ ದುಡುಕಿದ ದೊಗಳೆ "ಚೆಡ್ಡಿ"ಯ ಮೇಲೆಯೇ ಪೊಲೀಸ್ ಪ್ಯಾಂಟ್ ಹಾಕಿಕೊಂಡು "ಡ್ಯೂಟಿ" ಮಾಡುವ ಗಣಪತಿಯವರ ಮೇಲೆ ಮಾತ್ರ ಚೆಡ್ಡಿಗಳಿಗೀಗ ಎಲ್ಲಿಲ್ಲದ ಆಸಕ್ತಿ. ಇದೂ ಕೂಡ ಗಣಪತಿ ಬಗೆಗಿನ ಕಾಳಜಿಗಾಗಿ ಖಂಡಿತಾ ಅಲ್ಲ. ಸಾವು ನಡೆದಿದೆ. ಅದರ ಲಾಭವನ್ನು ಉಣ್ಣಲು ಅವರು ಹೊಂಚುತ್ತಿದ್ದಾರಷ್ಟೆ. ಯಾಕೆಂದರೆ, ಅವರ ರಕ್ತದಲ್ಲಿಯೇ ಈ ಗುಣ ಬೇರ್ಪಡಿಸಲಾಗದಂತೆ ಅಂಟಿ ಕುಳಿತಿದೆ ತಾನೇ..!!?

-ಎ.ಎಮ್.ಎಸ್. ನೆಲ್ಲಿಕಾರ್

ಕಳ್ಳ ಘಟಿಂಗನೇ ನ್ಯಾಯಾಧೀಶರಿಗೆ ಬೈದಂತಾಗಿದೆ


ಈ ವಾರ ತಮ್ಮ ಪತ್ರಿಕೆಯಲ್ಲಿ ಗಣಪತಿಯವರ ಸಂಪೂರ್ಣ ಚರಿತ್ರೆ ಬಂದಿರುವುದರಿಂದ ಜನರಿಗೆ ನಿಜ ತಿಳಿಯಬಾರದೆಂದು ಗೌರಿ ಲಂಕೇಶ್ ವಾರಪತ್ರಿಕೆಯನ್ನು ಮಂಗಳೂರಿನಲ್ಲಿ ಮಾರದಂತೆ ಬಜರಂಗಿಗಳು ಎಲ್ಲಾ ಬುಕ್ ಸ್ಟಾಲುಗಳಿಗೆ ಫರ್ಮಾನು ಹೊರಡಿಸಿದ್ದರಿಂದ ಈ ವಾರ ತಮ್ಮ ಪತ್ರಿಕೆ ಮಂಗಳೂರು-ಉಡುಪಿ ಜಿಲ್ಲೆಗಳಲ್ಲಿ ಲಭ್ಯವಾಗಲಿಲ್ಲ. ನಾನು ಮೈಸೂರಿಗೆ ಹೋಗಿದ್ದಾಗ ಅಲ್ಲಿಯೇ ಗೌರಿ ಲಂಕೇಶ್ ಕೊಂಡಿದ್ದರಿಂದ ಗಣಪತಿಯವರು ತನ್ನ ಪತ್ನಿ ಮತ್ತು ಮಕ್ಕಳಿಗೂ ಗೊತ್ತಾಗದಂತೆ ಬೆಂಗಳೂರಿನ ಯಶವಂತಪುರ ಠಾಣೆಯಲ್ಲಿ ನಡೆಸಿದ ಅಮಾನವೀಯ ಕರ್ಮಕಾಂಡಗಳೆಲ್ಲಾ ಬಹಿರಂಗವಾಗುವಂತಾಯಿತು. ಗಣಪತಿಯವರ ಅಮಾಯಕ ಪತ್ನಿ ತನ್ನ ಗಂಡನ ನಿಜ ರೂಪ ಅರಿತರೆ ಅವರು ಸಿಬಿಐ ತನಿಖೆ ಬಿಡಿ ಯಾವುದೇ ತನಿಖೆ ಬೇಡವೆಂದೇ ಹೇಳಬಹುದು. ಈಗ ಜನರಿಗೆ ಸತ್ಯ ಗೊತ್ತಾಗಿರುವುದರಿಂದ ಗಣಪತಿಯವರ ಮುಗ್ಧ ಮಕ್ಕಳೂ ಈಗ ತಮ್ಮ ಬಂಧುಮಿತ್ರರ ನಡುವೆ ಮುಜುಗರ ಪಡುವಂತಾಗಿದೆ.

ಸ್ವತಃ ಖಾಸಗಿ ಟಿವಿ ಚಾನೆಲ್ಲುಗಳೆಲ್ಲಾ ವರ್ಷವಿಡೀ ಯಾರ್ಯಾರದೋ ವೈಯಕ್ತಿಕ ಕೌಟುಂಬಿಕ ಕಲಹಗಳಲ್ಲಿ ಮೂಗು ತೂರಿಸಿ ಅಲ್ಲಿ ತಮ್ಮ ಮೈಕು-ಕ್ಯಾಮರಾ ನುಗ್ಗಿಸಿ ಹೀನ ಮನೆಮುರುಕ ಕೆಲಸ ಮಾಡುತ್ತಿರುವಾಗ, ಸಿದ್ಧರಾಮಯ್ಯ ಸರಕಾರ ಮನೆಮುರುಕ ಕೆಲಸ ಮಾಡುತ್ತಿದೆ ಎಂದು ಟಿವಿಗಳು ಆರೋಪಿಸುತ್ತಿರುವುದು ನೀಚ ಕಳ್ಳ ಘಟಿಂಗನೇ ನ್ಯಾಯಾಧೀಶರಿಗೆ ಬೈದಂತಾಗಿದೆ.

-ಅಭಿಷೇಕ್ ಪಡಿವಾಲ್, ಸುಳ್ಯ

ಹೊಸ ಕನಸಿನ ಜತೆ ಕ್ರೇಜಿ ಕಮಾಲ್

ನಿರ್ದೇಶಕ ಮಹೇಶ್ ಬಾಬು 'ಕ್ರೇಜಿ ಬಾಯ್ಸ್' ಎಂಬ ಹೊಸ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಈ ಸಿನಿಮಾದ ಮೂಲಕ ಹೊಸ ನಾಯಕ ಮತ್ತು ನಾಯಕಿಯನ್ನು ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ. ಈ ಕುರಿತು ಅವರು ತಮ್ಮ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.



ಡಾ.ರಾಜ್‌ಕುಮಾರ್ ಸಂಸ್ಥೆಯ ಮೂಲಕ ಬೆಳಕಿಗೆ ಬಂದ ನಿರ್ದೇಶಕರು ಮಹೇಶ್ ಬಾಬು. ಪುನೀತ್ ರಾಜ್‌ಕುಮಾರ್, ದರ್ಶನ್, ಚಿರಂಜೀವಿ ಸರ್ಜಾ ಸೇರಿದಂತೆ ಅನೇಕ ಕಲಾವಿದರ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿರುವ ಇವರು, ಹೊಸ ಪ್ರತಿಭೆಗಳನ್ನು ಚಿತ್ರರಂಗಕ್ಕೆ ಪರಿಚಯಿಸುವುದರಲ್ಲಿ ಸದಾ ಮುಂಚೂಣಿಯಲ್ಲಿರುತ್ತಾರೆ. ಸದ್ಯ ಇವರ ನಿರ್ದೇಶನದಲ್ಲಿ ತಯಾರಾಗುತ್ತಿರುವ 'ಕ್ರೇಜಿ ಬಾಯ್ಸ್' ಚಿತ್ರದಲ್ಲೂ ಹೊಸ ಹುಡುಗರನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಪಕ್ಕಾ ಯೂತ್ಸ್‌ಗಾಗಿಯೇ ತಯಾರಾದ ತಮ್ಮ ಸಿನಿಮಾದ ಬಗ್ಗೆ ಇಲ್ಲಿ ಮಾತಾಡಿದ್ದಾರೆ.

** ಸ್ವಮೇಕ್ ಚಿತ್ರಗಳನ್ನೇ ಮಾಡುತ್ತಾ ಬಂದವರು ನೀವು. ನಂತರ ರೀಮೇಕ್‌ನತ್ತ ಮುಖ ಮಾಡಿದಿರಿ. ಈಗ ಮತ್ತೆ ದೇಸಿ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದೀರಿ. ಈ ಬದಲಾವಣೆ ಯಾಕೆ?*

ಸ್ವಮೇಕ್ ಸಿನಿಮಾಗಳೇ ಯಾವಾಗಲೂ ನನಗಿಷ್ಟ. ಬೇರೆ ಬೇರೆ ಕಾರಣಗಳಿಗಾಗಿ ರೀಮೇಕ್ ಚಿತ್ರಗಳನ್ನೂ ಮಾಡಬೇಕಾಗಿ ಬಂತು. ಆದರೆ, ಅಂತಹ ಚಿತ್ರಗಳ ಬಗ್ಗೆ ಹೇಳುವುದಕ್ಕೆ ಆಗುವುದಿಲ್ಲ. ಅವು ಗೆಲ್ಲಲೂಬಹುದು. ಸೋಲಲೂಬಹುದು. ಆದರೆ, ಸ್ವಮೇಕ್ ಚಿತ್ರಗಳ ಬಗ್ಗೆ ನಮಗೆ ನಂಬಿಕೆ ಇರುತ್ತದೆ. ಎರಡೂ ರೀತಿಯಲ್ಲೂ ಪ್ರಯೋಗ ಮಾಡಿದ್ದರಿಂದ, ನನಗೆ ಎರಡರ ಅನುಭವವೂ ಇದೆ.

** ಯಾವಾಗಲೂ ಹೊಸಬರ ಜತೆ ಕೆಲಸ ಮಾಡಲು ಬಯಸುತ್ತೀರಿ. ಈ ಬಾರಿಯೂ ಮತ್ತೆ ಹೊಸಬರನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣವೇನು?*

ಕತೆಗೆ ತಕ್ಕಂತೆ ಕಲಾವಿದರು ಇರಬೇಕು ಅನ್ನುವುದು ನನ್ನ ಬಲವಾದ ನಂಬಿಕೆ. ಹೀಗಾಗಿಯೇ ಕತೆಯನ್ನು ನೋಡಿ, ನಾನು ನಾಯಕ ಮತ್ತು ನಾಯಕಿಯನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ಇದನ್ನು ಕಲಿತದ್ದು ನಿರ್ದೇಶಕ ದಿನೇಶ್ ಬಾಬು ಅವರಿಂದ. ಹೊಸ ಹುಡುಗರ ಜತೆ ಕೆಲಸ ಮಾಡುವಾಗ, ನಮಗೂ ಇನ್ನಷ್ಟು ಹುಮ್ಮಸ್ಸು ಇರುತ್ತದೆ. ಅಲ್ಲದೇ, ನಾವು ಏನು ಅಂದುಕೊಂಡಿರುತ್ತೇವೆಯೋ ಅದನ್ನು ತೆರೆಯ ಮೇಲೆ ನೋಡಲು ಸಾಧ್ಯವಾಗುತ್ತದೆ.

** ಸ್ಟಾರ್ ನಟರ ಚಿತ್ರ ಮಾಡುವಾಗ ಮತ್ತು ಹೊಸ ನಟರ ಚಿತ್ರಕ್ಕೆ ಕೆಲಸ ಮಾಡುವಾಗ ಏನಾದರೂ ವ್ಯತ್ಯಾಸ ಕಂಡುಕೊಂಡಿದ್ದೀರಾ?*

ಸಹಜವಾಗಿ ವ್ಯತ್ಯಾಸ ಇದ್ದೇ ಇರುತ್ತದೆ. ಸ್ಟಾರ್ ನಟರ ಜತೆ ಕೆಲಸ ಮಾಡುವಾಗ ನಮ್ಮದೇ ಆದಂತಹ ಮಿತಿ ಇರುತ್ತವೆ. ಆದರೆ, ಹೊಸ ಕಲಾವಿದರಿಗೆ ಹಾಗಲ್ಲ. ಶೂಟಿಂಗ್‌ಗೆ ಹೋಗುವುದಕ್ಕಿಂತ ಮುಂಚೆಯೇ ಅವರು ನಮ್ಮೊಟ್ಟಿಗೆ ಇರುತ್ತಾರೆ. ತರಬೇತಿ ಕೊಡಲು ಅವಕಾಶ ಸಿಗುತ್ತದೆ. ಸಾಕಷ್ಟು ಸಮಯ ಕೂಡ ಸಿಗುತ್ತದೆ. ಸಿನಿಮಾ ಕಟ್ಟುವ ವಿಚಾರದಲ್ಲೂ ಕೆಲವು ಬದಲಾವಣೆಗಳನ್ನು ಕಾಣಬಹುದು.

** 'ಕ್ರೇಜಿ ಬಾಯ್ಸ್' ಚಿತ್ರದ ಕತೆಯೇನು?*

ಚಿತ್ರದ ಶೀರ್ಷಿಕೆಯೇ ಹೇಳುವಂತೆ ಇದು ಪಕ್ಕಾ ಯುವ ಸಮುದಾಯಕ್ಕಾಗಿ ತಯಾರಾಗಿರುವ ಚಿತ್ರ. ಕ್ರೇಜಿ ಹುಡುಗರನ್ನೇ ಟಾರ್ಗೆಟ್ ಮಾಡಿ, ಮಾಡುತ್ತಿರುವ ಸಿನಿಮಾ ಇದಾಗಿದೆ. ಕಾಲೇಜು ಹುಡುಗರಿಗೆ ಕತೆ ಹೇಳಲು ಹೊರಟಿದ್ದೇನೆ. ಈ ಹೊತ್ತಿನ ಯುವಕರ ಸುತ್ತ ನಡೆಯುವ ಹಲವು ಘಟನೆಗಳನ್ನು ಚಿತ್ರಕತೆಯಲ್ಲಿ ಪೋಣಿಸಿದ್ದೇನೆ.

** ನಾಯಕ ದಿಲೀಪ್ ಮತ್ತು ನಾಯಕಿ ಆಶಿಕಾ ಬಗ್ಗೆ ಹೇಳಿ?*


ಎಲ್ಲರಿಗೂ ಗೊತ್ತಿರುವಂತೆ ಇತ್ತೀಚೆಗೆ ನಾನು ಹೊಸ ನಾಯಕ ನಾಯಕಿಯರ ಜತೆ ಕೆಲಸ ಮಾಡುತ್ತಿದ್ದೇನೆ. ಇದನ್ನು ಗುರುತಿಸಿಯೇ 'ಕ್ರೇಜಿ ಬಾಯ್ಸ್' ನಿರ್ಮಾಪಕರು ನನ್ನ ಹತ್ತಿರ ಬಂದರು. ದಿಲೀಪ್‌ನನ್ನು ನನಗೆ ಪರಿಚಯಿಸಿ, ಆತನಿಗಾಗಿ ಒಂದು ಸಿನಿಮಾ ಮಾಡಿಕೊಡಬೇಕು ಅಂತ ಕೇಳಿದರು. ಅಲ್ಲದೇ ನನ್ನ 'ಅರಸು' ಸಿನಿಮಾ ಅವರಿಗೆ ತುಂಬಾನೇ ಇಷ್ಟ ಅಂತಾನೂ ಹೇಳಿದರು. ನನ್ನ ಮೇಲೆ ಇಷ್ಟೊಂದು ಪ್ರೀತಿ ಇಟ್ಟುಕೊಂಡಿರುವ ಇವರಿಗಾಗಿ ಸಿನಿಮಾ ಮಾಡಬೇಕು ಅಂತ ತೀರ್ಮಾನಕ್ಕೆ ಬಂದೆ. ಅಲ್ಲದೇ ಸಿನಿಮಾ ಕತೆಯೂ ಚೆನ್ನಾಗಿ ಇರುವುದರಿಂದ ಒಪ್ಪಿಕೊಂಡೆ. ದಿಲೀಪ್ ಪರಿಚಯ ಆಗಿದ್ದು ಹೀಗೆ. ಈತ ಈಗಾಗಲೇ 'ಮಹಾಕಾಳಿ' ಚಿತ್ರದಲ್ಲಿ ಪುಟ್ಟ ಪಾತ್ರ ಮಾಡಿದ್ದಾರೆ. ಹೀರೋ ಆಗಿ ಮೊದಲ ಸಿನಿಮಾ. ಆಶಿಕಾ ತೀರಾ ಹೊಸಬಳು.

** ಸಿನಿಮಾ ಯಾವ ಹಂತದಲ್ಲಿದೆ? ಯಾವಾಗ ರಿಲೀಸ್ ಅಂದುಕೊಂಡಿದ್ದೀರಿ?*

ಬಹುತೇಕ ಶೂಟಿಂಗ್ ಮುಗಿದಿದೆ. ಮೊದಲ ಕಾಪಿಗಾಗಿ ತಯಾರಾಗುತ್ತಿದೆ. ಆಗಸ್ಟ್‌ನಲ್ಲಿ ರಿಲೀಸ್ ಮಾಡುವ ಪ್ಲಾನ್ ನನ್ನದು. ಹೊಸ ಕಲಾವಿದರು ಸಿನಿಮಾದಲ್ಲಿ ಇರುವುದರಿಂದ, ಸರಿಯಾದ ಟೈಮ್ ನೋಡಿಕೊಂಡು ಬಿಡುಗಡೆ ಮಾಡುತ್ತೇವೆ.

** ಬರೀ ಯುವಕರಿಗಾಗಿಯೇ ಸಿನಿಮಾ ಮಾಡುವುದು ಕಷ್ಟ ಅಂತ ಅನಿಸ್ತಾ ಇಲ್ವಾ!*

ಯುವಕರಿಗೆ ಸಿನಿಮಾ ಇಷ್ಟವಾದರೆ, ಎಲ್ಲರಿಗೂ ಅದು ಇಷ್ಟವಾಗುತ್ತದೆ ಅನ್ನುವುದನ್ನು ಹಲವು ಚಿತ್ರಗಳು ಸಾಬೀತುಪಡಿಸಿವೆ. ಒಂದು ಸಲ ಚಿತ್ರ ನೋಡಿದ ಯೂತ್ಸ್, ನಂತರ ತಮ್ಮ ಮನೆಯವರನ್ನು ಕರೆತರುತ್ತಾರೆ. ಅಲ್ಲದೇ, ಇತರ ಭಾಷೆಯ ಸ್ನೇಹಿತರಿಗೂ ಸಿನಿಮಾ ನೋಡಲು ಹೇಳುತ್ತಾರೆ. ಹಾಗಾಗಿ ಕಷ್ಟ ಅಂತ ಅನಿಸುವುದಿಲ್ಲ. ■



Registered No.RNP/KA/BGS/2036/2014-16 Posted at :Bangalore-26, PSO, Mysore Road. Thursday R B P LANKESH, Kannada Weekly Price Rs. 15/- 03-08-2016 RNI No. KARKAN200

ಕಾಳಿಯಾದ ಶ್ರುತಿ



ಶ್ರುತಿ ಹರಿಹರನ್ ಕಾಳಿ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರದೀಪ್ ವರ್ಮಾ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಊರ್ವಿ' ಸಿನಿಮಾದಲ್ಲಿ ಶ್ರುತಿ ಇಂಥದ್ದೊಂದು ಪಾತ್ರ ನಿರ್ವಹಿಸಿ ಅಚ್ಚರಿ ಮೂಡಿಸಿದ್ದಾರೆ. ಇದು ಹೇಳಿಕೇಳಿ ಮಹಿಳಾ ಪ್ರಧಾನ ಸಿನಿಮಾ. ಇಂತಹ ಸಿನಿಮಾದಲ್ಲಿ ಕಾಳಿ ಅವತಾರ ಹೇಗೆ ಮತ್ತು ಏಕೆ ಅನ್ನುವ ಪ್ರಶ್ನೆಗೆ ಸಿನಿಮಾದಲ್ಲೇ ಉತ್ತರವಿದೆ ಅಂತಾರೆ ಶ್ರುತಿ.

ಆದರೆ ನಿರ್ದೇಶಕ ಪ್ರದೀಪ್ ಹೇಳುವುದು ಹೀಗೆ: "ಊರ್ವಿ ಅಂದರೆ ಶಕ್ತಿಯ ಅವತಾರ. ಹೀಗಾಗಿಯೇ ಶ್ರುತಿ ಅವರಿಗೆ ಕಾಳಿಯ ಗೆಟಪ್ ಹಾಕಿಸಿದ್ದೇವೆ." ಈ ಅವತಾರದ ಗೆಟಪ್ ಹಾಕಲು ಮೇಕಪ್ ಕಲಾವಿದರು ಬರೋಬ್ಬರಿ ಮೂರು ಗಂಟೆ ತೆಗೆದುಕೊಂಡಿದ್ದಾರಂತೆ.

ಈ ಸಿನಿಮಾದಲ್ಲಿ ಬಹುತೇಕವಾಗಿ ಮಹಿಳಾ ಪಾತ್ರಗಳೇ ಪ್ರಧಾನವಾಗಿವೆ. ಅಲ್ಲದೇ, ಮಹಿಳಾ ಶೋಷಣೆಯ ನಾನಾ ಮುಖಗಳನ್ನು ಈ ಸಿನಿಮಾ ತೆರೆದಿಡಲಿದೆಯಂತೆ. ಆಗಸ್ಟ್ ಕೊನೆಯಲ್ಲಿ ತೆರೆಗೆ ಬರಲಿರುವ ಚಿತ್ರದಲ್ಲಿ ಶ್ರುತಿ ಜೊತೆಗೆ ಶ್ರದ್ಧಾ ಶ್ರೀನಾಥ್, ಶ್ವೇತಾ ಪಂಡಿತ್ ಸೇರಿದಂತೆ ಹಲವು ಕಲಾವಿದರು ಇದ್ದಾರೆ. ಎಲ್ಲರೂ ಇದೇ ಮೊದಲ ಬಾರಿಗೆ ಹೊಸ ರೀತಿಯ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಕಾಟನ್‌ಪೇಟೆಯ ದುನಿಯಾ



ಆದಿತ್ಯನಿಗಾಗಿ ತಯಾರಾಗಿದ್ದ ಸ್ಕ್ರಿಪ್ಟ್ ಈಗ ದುನಿಯಾ ವಿಜಯ್ ಪಾಲಾಗಿದೆ. ಹೀಗಾಗಿ 'ಕಾಟನ್‌ಪೇಟೆ' ಚಿತ್ರದಿಂದ ಆದಿತ್ಯರನ್ನು ಕೈಬಿಡಲಾಗಿದೆ. ಐದಾರು ತಿಂಗಳ ಹಿಂದೆಯೇ ಈ ಚಿತ್ರ ಸೆಟ್ಟೇರಬೇಕಿತ್ತು. ಆದಿತ್ಯನಿಗೆ ಅಡ್ವಾನ್ಸ್ ಕೂಡ ಕೊಡಲಾಗಿತ್ತು. ಆದರೆ, ನಿರ್ದೇಶಕ ಓಂ ಪ್ರಕಾಶ್ ರಾವ್ ಮತ್ತು ಆದಿತ್ಯ ಮಧ್ಯೆ ಅದೇನಾಯಿತೋ ಗೊತ್ತಿಲ್ಲ, ಸಡನ್ನಾಗಿ ನಾಯಕನನ್ನೇ ಬದಲಾಯಿಸಿದ್ದಾರೆ ನಿರ್ದೇಶಕರು.

ಈಗಾಗಲೇ 'ಶಿವಾಜಿನಗರ'ದಲ್ಲಿ ಸಖತ್ ಫೈಟ್ ಮಾಡಿದ್ದ ದುನಿಯಾ ವಿಜಯ್, ಈಗ ಅಂಥದ್ದೇ ಪಾತ್ರವನ್ನು 'ಕಾಟನ್‌ಪೇಟೆ'ಯಲ್ಲೂ ನಿರ್ವಹಿಸಬೇಕಿದೆ. ಹೀಗಾಗಿಯೇ 'ಶಿವಾಜಿನಗರ'ದಲ್ಲಿ ನಾಯಕಿಯಾಗಿ ನಟಿಸಿದ್ದ ಪರೂಲ್ ಯಾದವ್ ಅವರನ್ನೇ ಈ ಚಿತ್ರಕ್ಕೂ ಆಯ್ಕೆ ಮಾಡಿಕೊಂಡಿದ್ದಾರೆ ನಿರ್ದೇಶಕರು.

ಸದ್ಯಕ್ಕೆ ವಿಜಯ್ 'ಮಾಸ್ತಿಗುಡಿ' ಚಿತ್ರದಲ್ಲಿ ಬಿಜಿ ಆಗಿದ್ದಾರೆ. ಈ ನಡುವೆ ವಿರಾಮ ತೆಗೆದುಕೊಂಡು 'ಕಾಟನ್‌ಪೇಟೆ' ಶೂಟಿಂಗ್‌ನಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರಿನಲ್ಲಿ ಈಗಾಗಲೇ ಈ ಚಿತ್ರದ ಶೂಟಿಂಗ್ ಕೂಡ ನಡೆದಿದೆ.

ಸೆಪ್ಟೆಂಬರ್‌ನಲ್ಲಿ ಮ



ಶಶಾಂಕ್ ನಿರ್ದೇಶನದ 'ಮುಂಗಾರು ಮಳೆ 2' ರಿಲೀಸ್ ಯಾವಾಗ ಎಂಬ ಕುತೂಹಲ ಎಲ್ಲರದ್ದಾಗಿತ್ತು. ಅದಕ್ಕೀಗ ತೆರೆ ಬಿದ್ದಿದೆ. ಸೆಪ್ಟೆಂಬರ್ 9ಕ್ಕೆ ಸಿನಿಮಾ ರಿಲೀಸ್ ಮಾಡುವುದಾಗಿ ನಿರ್ದೇಶಕರು ಹೇಳಿದ್ದಾರೆ. ಬಹುತೇಕ ಶೂಟಿಂಗ್ ಮುಗಿದದ್ದು ಫಸ್ಟ್ ಕಾಪಿ ಕೂಡ ರೆಡಿಯಾಗಿದೆ.

ಆಗಸ್ಟ್ ಮೊದಲ ವಾರದಲ್ಲಿ ಆಡಿಯೋ ಬಿಡುಗಡೆ ಮಾಡುವ ಪ್ಲಾನ್ ನಿರ್ದೇಶಕರದ್ದು. ಅಲ್ಲಿಂದ ಪ್ರಮೋಷನ್ ಕೂಡ ಶುರು ಮಾಡಲಿದ್ದಾರೆ. ಯೋಗರಾಜ್ ಭಟ್ ನಿರ್ದೇಶನದಲ್ಲಿ ಮೂಡಿ 'ಮುಂಗಾರು ಮಳೆ' ಚಿತ್ರವು ಕನ್ನಡ ಸಿನಿಮಾರಂಗದಲ್ಲಿ ಇತಿಹಾಸ ಮಾಡಿತ್ತು. ಈ ಸಿನಿಮಾ ಕೂಡ ಅದೇ ಹಾದಿಯಲ್ಲೇ ಸಾಗಲಿದೆಯಂ

'ಮುಂಗಾರು ಮಳೆ'ಗೂ ಈ 'ಮಳೆ'ಗೂ ಯಾವುದೇ ಸಂಬಂಧವಿಲ್ಲದಿ ಗಣೇಶ್ ಅಲ್ಲಿ ನಾಯಕ, ಇಲ್ಲೂ ನಾಯಕ. ಕುಡ್ಲದ ಬೆಡಗಿ ನೇಹಾ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಐಂದ್ರಿತಾ ರೇ, ಶ್ರದ್ಧಾ ಶ್ರೀ ಅತಿಥಿ ಪಾತ್ರ ನಿರ್ವಹಿಸಿದ್ದಾರೆ. ಮತ್ತೊಂದು ವಿಶೇಷತೆ ಅಂದರೆ, ನಾ ತಂದೆಯಾಗಿ ರವಿಚಂದ್ರನ್ ನಟಿಸಿದ್ದಾರೆ.

ಮಣಿ ಚಿತ್ರದಲ್ಲಿ ಶ್ರದ



ಹೆಸರಾಂತ ನಿರ್ದೇಶಕ ಮಣಿರತ್ನಂ ಸಿನಿಮಾದಲ್ಲಿ ಕ ಹುಡುಗಿ ಶ್ರದ್ಧಾ ಶ್ರೀನಾಥ್ ನಟಿಸುತ್ತಿದ್ದಾರೆ ಅನ್ನುವ ಗೊತ್ತೇ ಇದೆ. ಇವರು ಮಣಿರತ್ನಂ ಕಣ್ಣಿಗೆ ಹೇಗೆ ಅನ್ನುವ ಕುತೂಹಲ ಎಲ್ಲರದ್ದು. ಅದಕ್ಕೆ ಸ್ವತಃ ಶ್ರದ್ಧಾ ಉತ್ತರಿಸಿದ್ದಾರೆ.

ಇವರ ನಟನೆಯ 'ಯು ಟರ್ನ್' ಸಿನಿಮಾ ತೆ ಮತ್ತು ಕನ್ನಡದಲ್ಲೂ ಹೆಸರು ಮಾಡಿದೆ. ಈ ಸಿನಿ ಬಗ್ಗೆ ಕೇಳಿದ್ದ ಮಣಿರತ್ನಂ ಸಾಮಾಜಿಕ ಜಾಲತಾ ಶ್ರದ್ಧಾ ಅವರ ಪ್ರೊಫೈಲ್ ಕಂಡರಂತೆ. ಆ ಇವರನ್ನು ಕಾಂಟ್ಯಾಕ್ಟ್ ಮಾಡಿದ್ದಾರೆ. ಸದ್ಯ ಊಟಿಯಲ್ಲಿ ಮಣಿರತ್ನಂ ಅವರ ಸಿ ಸೆಟ್‌ನಲ್ಲಿದ್ದಾರೆ. ನಿರ್ದೇಶಕರ ಜತೆ ಕ್ಲಿಕ್ಕಿಸಿಕೊಂಡು ಖುಷಿ ಪಡುತ್ತಿದ್ದಾರೆ.

'ಯು ಟರ್ನ್' ಹಿಟ್ ಆಗುತ್ತಿದ್ದಂ ಇವರನ್ನು ಮತ್ತಷ್ಟು ಚಿತ್ರ ಹುಡುಕಿಕೊಂಡು ಬಂದಿವೆ. ಕನ್ನಡ ಇವರು ಮತ್ತೊಂದು ಚಿತ್ರ ಒಪ್ಪಿಕೊಂಡಿದ್ದಾರೆ. ಸುನಿ ನಿರ್ದೇ 'ಆಪರೇಷನ್ ಅಲಮೇಲ ಚಿತ್ರದಲ್ಲೂ ನಾಯಕಿಯ ನಟಿಸುತ್ತಿದ್ದಾರೆ.

ರಂಗಿತರಂಗಕ್ಕೆ ಮನಸೋತ ರಾಜು



ಎರಡು ಯಶಸ್ವಿ ಸಿನಿಮಾಗಳ ಶೀರ್ಷಿಕೆ ಬಳಸಿಕೊಂಡು ಸಿನಿಮಾ ಮಾಡುತ್ತಿದ್ದಾರೆ 'ಫಸ್ಟ್‌ರ್ಯಾಂಕ್ ರಾಜು' ಚಿತ್ರ ಖ್ಯಾತಿಯ ನಿರ್ದೇಶಕ ನರೇಶ್ ಕುಮಾರ್. ತಮ್ಮದೇ ಸಿನಿಮಾದ ರಾಜು ಹೆಸರ ಮುಂದೆ ರಂಗಿತರಂಗ ಚಿತ್ರದ ಟೈಟಲ್ ಇಟ್ಟು 'ರಾಜು ರಂಗಿತರಂಗ' ಎಂಬ ಸಿನಿಮಾ ಮಾಡುತ್ತಿದ್ದಾರೆ. ಈಗಾಗಲೇ ಚಿತ್ರೀಕರಣ ಶುರು ಕೂಡ ಆಗಿದೆ. ಶೀರ್ಷಿಕೆಯ ಮತ್ತೊಂದು ವಿಶೇಷತೆ ಅಂದರೆ, ಅದರ ಅಡಿ ಬರಹ. 'ಫಸ್ಟ್ ರ್ಯಾಂಕೂ ಅಲ್ಲ, ಸೆಕೆಂಡ್ ರ್ಯಾಂಕೂ ಅಲ್ಲ' ಅನ್ನುವ ಕ್ಯಾಚಿ ಸಾಲವನ್ನು ಸಬ್‌ಟೈಟಲ್‌ಗಾಗಿ ಪೋಣಿಸಿ ಕುತೂಹಲ ಮೂಡಿಸಿದ್ದಾರೆ. ಅಲ್ಲಿಗೆ ಇದು ರಾಜುನ ಎರಡನೇ ಭಾಗ ಅಲ್ಲ ಅನ್ನುವುದನ್ನು ಖಾತರಿಪಡಿಸಿದ್ದಾರೆ.

ಇದು ಹೇಳಿಕೇಳಿ ಕಾಮಿಡಿ ಚಿತ್ರ. ಹೀಗಾಗಿಯೇ ಇಂಥದ್ದೊಂದು ಟೈಟಲ್ ಇಟ್ಟಿರುವುದಾಗಿ ನಿರ್ದೇಶಕರು ಹೇಳಿದ್ದಾರೆ. ಯಾವುದೇ ಗಿಮಿಕ್ ಇಲ್ಲ ಎಂದು ಸಿನಿಮಾ ತಂಡ ಸ್ಪಷ್ಟಪಡಿಸುವ ಮೂಲಕ ಗಿಮಿಕ್ ಮಾಡಿದೆ.

ಚಿತ್ರದಲ್ಲಿ ಇನ್ನೂ ಹಲವು ವಿಶೇಷತೆಗಳಿವೆ. 'ರಾಜು' ಸಿನಿಮಾದ ನಾಯಕ ಗುರುನಂದನ್ ಮತ್ತು 'ರಂಗಿತರಂಗ' ಚಿತ್ರದ ನಾಯಕಿ ಆವಂತಿಕಾ ಶೆಟ್ಟಿ ಈ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. 'ಶಿವಲಿಂಗು' ಸಿನಿಮಾ ಖ್ಯಾತಿಯ ನಿರ್ಮಾಪಕ ಕೆ.ಎ.ಸುರೇಶ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com